ಕಲಿಕೆಯಲ್ಲಿ ಆಸಕ್ತಿಯುಳ್ಳ ಮಕ್ಕಳಿಗೆ ಶಿಕ್ಷಣ ನೀಡುವ ಸಲುವಾಗಿ ರಾಷ್ಟ್ರೀಯ ಮುಕ್ತ ಶಾಲೆಗಳು, ದೂರ ಶಿಕ್ಷಣ ಕಾರ್ಯಕ್ರಮವನ್ನು ನ್ಯಾಷನಲ್ ಇನ್ಸಟಿಟ್ಯೂಟ್ ಆಫ್ ಓಪನ್ ಸ್ಕೂಲಿಂಗ್ ಸಂಸ್ಥೆ ಜಾರಿಗೊಳಿಸುತ್ತಿದೆ. ಔಪಚಾ–ರಿಕ ಶಿಕ್ಷಣಕ್ಕೆ ಸಮಾನವಾಗಿ ಮುಕ್ತ ಮೂಲ ಶಿಕ್ಷಣ ಮಾದರಿಯಲ್ಲಿ ಆಸಕ್ತ ಮಕ್ಕಳಿಗೆ ಅನುಕೂಲವಾಗುವಂತೆ ಶಿಕ್ಷಣ ವ್ಯವಸ್ಥೆ ರೂಪಿತವಾಗಬೇಕು. ಈ ಶಿಕ್ಷಣ ಮೂರು ಹಂತಗಳಲ್ಲಿನ ಅಂದರೆ 14 ವರ್ಷದೊಳಗಿನ, ಹದಿಹರೆಯದ ಮಕ್ಕಳು ಹಾಗೂ ವಯಸ್ಕರ ಶಿಕ್ಷಣವನ್ನು ಒಳಗೊಂಡಿರಬೇಕು. ಪ್ರಾಥಮಿಕ, ಪ್ರೌಢ ಶಿಕ್ಷಣ, ವಯಸ್ಕರ ಶಿಕ್ಷಣ, ವೃತ್ತಿಪರ ಶಿಕ್ಷಣ ಕೋರ್ಸ್, ಜೀವನಕ್ಕೆ ಪೂರಕವಾದ ಶಿಕ್ಷಣ ಕಾರ್ಯಕ್ರಮವನ್ನೂ ಒಳಗೊಂಡಿರಬೇಕು.

1. ನ್ಯಾಷನಲ್ ಇನ್ಸಟಿಟ್ಯೂಟ್ ಆಫ್ ಓಪನ್ ಸ್ಕೂಲಿಂಗ್ ಸಂಸ್ಥೆಯು ಜಾರಿಗೊಳಿಸುತ್ತಿರುವ ಎಲ್ಲಾ ಪಠ್ಯಕ್ರಮಗಳು, ವಿಷಯಗಳು ಹಾಗೂ ಪರೀಕ್ಷೆಗಳು ಕನ್ನಡದಲ್ಲಿ ಲಭ್ಯವಾಗುವಂತೆ ಮಾಡಬೇಕು.
2. ಪಾಲಕರ ಹಾಗೂ ಶಿಶುಪಾಲನಾ ಸಂಸ್ಥೆಯ (ಚೈಲ್ಡ್ ಕೇರ್ ಇನ್ಸ್ಟಿಟ್ಯೂಟ್) ಆರೈಕೆಯಲ್ಲಿರುವ ಮಕ್ಕಳಿಗೆ ಯಾವುದೇ ತೊಂದರೆ ಆಗದ ರೀತಿಯಲ್ಲಿ ಪ್ರವೇಶಾತಿಯನ್ನು ನ್ಯಾಷನಲ್ ಇನ್ಸಟಿಟ್ಯೂಟ್ ಆಫ್ ಓಪನ್ ಸ್ಕೂಲಿಂಗ್ ಸಂಸ್ಥೆಯು ಮುಕ್ತವಾಗಿಸಬೇಕು.
3. ಎನ್.ಐ.ಓ.ಎಸ್ ಸಂಸ್ಥೆಯಲ್ಲಿ ವೃತ್ತಿಪರ ಶಿಕ್ಷಣ ಪಡೆಯುತ್ತಿರುವ ಮಕ್ಕಳಿಗೆ ವಿದ್ಯಾರ್ಥಿವೇತನವನ್ನು ಅಲ್ಪಸಂಖ್ಯಾತ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಹಾಗೂ ಇನ್ನಿತರ ಇಲಾಖೆಗಳು ಒದಗಿಸಬೇಕು.
4. ಪ್ರಸ್ತುತ ವೃತ್ತಿಪರ ತರಬೇತಿಗಳು ಕೇವಲ ಕೌಶಲ್ಯ ಹಾಗೂ ಕಾರ್ಮಿಕರ ದುಡಿಮೆಯನ್ನು ಹೆಚ್ಚಿಸುವ ಹಂತದಲ್ಲಿದ್ದು, ಅವರ ಆರ್ಥಿಕತೆಯನ್ನು ವೃದ್ಧಿಸುವ ಹಂತದಲ್ಲಿಲ್ಲ. ವೃತ್ತಿಪರ ತರಬೇತಿಗಳ ವ್ಯಾಪ್ತಿ ಹಾಗೂ ಆಯ್ಕೆಯನ್ನು ವಿಸ್ತರಿಸಬೇಕು. ಹಾಗೆಯೇ, ಈ ವೃತ್ತಿಪರ ತರಬೇತಿಗಳನ್ನು ಔಪಚಾರಿಕ ಶಿಕ್ಷಣದೊಂದಿಗೆ ಜೋಡಿಸುವ ಪ್ರಯತ್ನ ಸರ್ಕಾರ ಮಾಡಬೇಕು.
5. ಉದ್ಯಮಶೀಲತೆಯಲ್ಲಿರುವ ಹದಿಹರೆಯದ, ಯುವ ಜನರಿಗೆ ವೃತ್ತಿಪರ ತರಬೇತಿಯನ್ನು ಸರ್ಕಾರವು ನೀಡಬೇಕು. ಉದಾಹರಣೆಗೆ, ಬ್ಯೂಟೀಶಿಯನ್, ಟೈಲರಿಂಗ್ ಮತ್ತು ಸಣ್ಣ ಉತ್ಪನ್ನಗಳ ತಯಾರಿಕೆಯ ಕೌಶಲ್ಯವನ್ನು ಒದಗಿಸಬೇಕು. ನಂತರ ಅವರು ಸ್ವಯಂ ಉದ್ಯೋಗಿಗಳಾಗಿ ತಮ್ಮ ಜೀವನವನ್ನು ರೂಪಿಸಿಕೊಳ್ಳಬಹುದು ಮತ್ತು ಅವರ ಕುಟುಂಬವನ್ನು ಬೆಂಬಲಿಸಲೂಬಹುದು. ಅಲ್ಲದೆ, ಅವರು ವಿದ್ಯಾಭ್ಯಾಸ ಮುಂದುವರೆಸಲೂ ಇಚ್ಚಿಸಿದಲ್ಲಿ ಇದು ಸಹಕಾ–ರಿಯಾಗಬಹುದು.

## ಬಿಬಿಎಂಪಿ

1. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಮಂಡಳಿಗೆ ಸಲ್ಲಿಸಿದ ಎಲ್ಲಾ ಶಿಫಾರಸ್ಸುಗಳು ಬಿಬಿಎಂಪಿ ನಡೆಸುತ್ತಿರುವ ಶಾಲೆಗಳಿಗೂ ಅನ್ವಯಿಸುವುದು.
2. ಕೋವಿಡ್ ಪರಿಣಾಮ ಎದುರಿಸಿರುವ ಎಲ್ಲಾ ಮಕ್ಕಳಿಗೂ ಹಾಗೂ ಕುಟುಂಬಗಳಿಗೂ ಕೋವಿಡ್ ಪರಿಹಾರಗಳು ಹಾಗೂ ಯೋಜನೆಗಳು ಸಿಗಬೇಕು.
3. ಆರ್ಥಿಕ ಸಂಕಷ್ಟವನ್ನು ದೂರಮಾಡಲು, ಜೀವನೋಪಾಯ ಯೋಜನೆಗಳನ್ನು ಪುನರಾರಂಭಿಸಬೇಕು ಹಾಗೂ ವಿಸ್ತರಿಸಬೇಕು.
4. ಮಕ್ಕಳು ಹಾಗೂ ಸ್ಥಳೀಯ ಜನರು ತಮ್ಮ ಸಮಸ್ಯೆಗಳನ್ನು ಜನಪ್ರತಿನಿಧಿಗಳ ಮುಂದಿಟ್ಟು ಪರಿಹಾರ ಕ್ರಮಗಳನ್ನು ಜಾರಿಗೊಳಿಸಲು ಸ್ಥಳೀಯ ಮಟ್ಟದಲ್ಲಿ ಏರಿಯಾ ಸಭಾಗಳನ್ನು ನಡೆಸಬೇಕು.

Link to the website of the NIOS: https://www.nios.ac.in/

https://www.concernedforworkingchildren.org/news/2021/04/petition-by-working-adolescents-demanding-attention-and-child-rights-friendly-response-from-the-state-on-the-29th-april-2021-the-eve-of-national-child-labour-day-india/

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಇಲಾಖೆ

1. ಪ್ರವಾಹ ಪೀಡಿತ ಪ್ರದೇಶಗಳಾದ ಬೆಳಗಾವಿ, ಬಾಗಲಕೋಟೆ ಜಿಲ್ಲೆಯಲ್ಲಿನ ಸಮುದಾಯಗಳಿಗೆ ಎಲ್ಲಾ ಮೂಲಭೂತ ಸೌಕರ್ಯಗಳೊಂದಿಗೆ ಪುನರ್ ನಿರ್ಮಾಣ, ಪುನರ್ ವಸತಿ ಹಾಗೂ ಜೀವನೋಪಾಯ ಪರಿಹಾರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿ, ಕಾರ್ಯಗತಗೊಳಿಸಬೇಕು. ಪ್ರವಾಹ, ಆರೋಗ್ಯದ ತುರ್ತು ಪರಿಸ್ಥಿತಿಯಿಂದಾಗಿ ಮಕ್ಕಳು ಸುಮಾರು 4ವರ್ಷದ ಶಿಕ್ಷಣದಿಂದ

ಹೊರಗುಳಿದಿರುವುದರಿಂದ ವಿಶೇಷ ಗಮನವನ್ನು ಸರ್ಕಾರ ಆದ್ಯತೆಯಲ್ಲಿ ನೀಡಬೇಕು.

2. ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಕೊರತೆಯಿಂದಾಗಿ ಯುವ ಜನರು ಶಾಲೆ–ಕಾಲೇಜುಗಳಿಗೆ ಸೇರ್ಪಡೆಗೊಳ್ಳಲು ಸಾಧ್ಯವಾಗುತ್ತಿಲ್ಲ. ಸರ್ಕಾರ ಸ್ಥಳೀಯ ಸಮುದಾಯದೊಂದಿಗೆ ಸಮಾಲೋಚನೆ ನಡೆಸಿ ಅವರ ನಿರ್ದಿಷ್ಟ ಅವಶ್ಯಕತೆಗಳಿಗೆ ಪೂರಕವಾಗಿ ಸೌಲಭ್ಯ ಒದಗಿಸುವ ದಿಶೆಯಲ್ಲಿ ಕಾರ್ಯಪ್ರವರ್ತರಾಗಬೇಕು. (ಮುಖ್ಯವಾಗಿ ಪ್ರಯಾಣಕ್ಕೆ ವಾಹನಗಳ ಲಭ್ಯತೆ, ರಸ್ತೆಗಳು ಇತ್ಯಾದಿ ಸೌಕರ್ಯಗಳು). ಈ ವಿಷಯವನ್ನು ಸಾರಿಗೆ ಇಲಾಖೆ ಹಾಗೂ ಶಿಕ್ಷಣ ಆಯುಕ್ತರ ಗಮನಕ್ಕೂ ತರಬೇಕಾಗಿದೆ.

3. ಪ್ರವಾಹ ಪೀಡಿತ ಪ್ರದೇಶದ ಹಲವಾರು ಶಾಲೆಗಳು ಶಿಥಿಲಾವಸ್ಥೆಯಲ್ಲಿದೆ. ಶೌಚಾಲಯ, ಇತರೆ ಮೂಲ ಸೌಕರ್ಯಗಳ ದುರಸ್ಥಿ, ಇತರೆ ಪರಿಹಾರ ಕ್ರಮಗಳನ್ನು ತ್ವರಿತವಾಗಿ ಮಾಡಬೇಕು.

4. ಪ್ರವಾಹ ದಿಂದ ಉಂಟಾದ ಬೆಳೆಗಳ ಹಾನಿಗೆ ಸರ್ಕಾರ ಪರಿಹಾರವನ್ನು ಕ್ಷಿಪ್ರವಾಗಿ ನೀಡಬೇಕು. ಪರಿಹಾರ ವಿತರಣೆಯಲ್ಲಾದ ವೈಫಲ್ಯವು ಮಕ್ಕಳು ಮತ್ತು ಅವರ ಶಿಕ್ಷಣದ ಮೇಲೆಯೂ ಪ್ರತಿಕೂಲ ಪರಿಣಾಮ ಬೀರುವುದು. ಗ್ರಾಮ ಮಟ್ಟದಲ್ಲಿ ಎಮ್.ಜಿ.ಎನ್. ಆರ್.ಜಿ.ಎ ಯೋಜನೆಯಡಿ ಉದ್ಯೋಗಾವಕಾಶವನ್ನು ಪೋಷಕರಿಗೆ ಕಲ್ಪಿಸಬೇಕು ಹಾಗೂ ಅವರ ದುಡಿಮೆಯ ವೇತನವನ್ನು ತ್ವರಿತವಾಗಿ ನೀಡಬೇಕು.

5. 16–18 ವರ್ಷದ ಮಕ್ಕಳಿಗೆ ಸುರಕ್ಷಿತವಾದ ಉದ್ಯೋಗಾವಕಾಶ ಲಭ್ಯವಿರಬೇಕು. ಮಕ್ಕಳ ಹಾಗೂ ಹದಿಹರೆಯದ ದುಡಿಮೆಗೆ ಸಂಬಂಧಿಸಿದ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986ರ ಮಾರ್ಗಸೂಚಿಯು ಮಕ್ಕಳ ಶಿಕ್ಷಣ ಹಾಗು ಅವರ ಒಡಹುಟ್ಟಿದವರ ಶಿಕ್ಷಣವನ್ನೂ ಬೆಂಬಲಿಸುತ್ತದೆ.

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

1. ಸ್ಥಳೀಯ ಸರ್ಕಾರ ಸ್ವ ಸಹಾಯ ಗುಂಪುಗಳಿಗೆ ಸಂಜೀವಿನಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿ, ಈ ಮಹಿಳೆಯರ ಅಭಿವೃದ್ಧಿಗೆ ಅವರ ವೃತ್ತಿಪರತೆಗೆ ಸಹಕಾರ ನೀಡುವಲ್ಲಿ ಆರ್ಥಿಕ ಹೂಡಿಕೆಗೆ, ಮಾರುಕಟ್ಟೆ ಬೆಂಬಲವನ್ನು ಉತ್ತಮವಾಗಿ ಕಲ್ಪಿಸಬೇಕು. ಈ ಮೂಲಕ ಮಹಿಳೆಯರು ತಮ್ಮ ಜೀವನೋಪಾಯವನ್ನು ಕಂಡುಕೊಳ್ಳುವರು. ಕಾನೂನಿನ ಅಂಶಗಳನ್ನಾಧರಿಸಿ ಹದಿಹರೆಯದವರೂ ಕೂಡ ತಮ್ಮ ಬೆಳವಣಿಗೆಗಾಗಿ ದುಡಿಮೆಯನ್ನು ಮಾಡಬಹುದು. ಇಲ್ಲವಾದಲ್ಲಿ ಹದಿಹರೆಯದ ಮಕ್ಕಳು ಅಪಾಯಕಾರಿ ದುಡಿಮೆಯನ್ನು ಅವಲಂಬಿಸುವರು.

2. ಐ.ಸಿ.ಪಿ.ಎಸ್ – ಸಮಗ್ರ ಮಕ್ಕಳ ಪಾಲನೆ ಮತ್ತು ಪೋಷಣೆಯ ಯೋಜನೆಯಡಿ, ಒರ್ವ/ಇಬ್ಬರೂ ಪೋಷಕರನ್ನು ಕಳೆದುಕೊಂಡಿರುವ ಮಕ್ಕಳು ಹಾಗು ಶಿಶುಪಾಲನಾ ಕೇಂದ್ರದಲ್ಲಿ ಆರೈಕೆಯಲ್ಲಿರುವ ಮಕ್ಕಳಿಗೆ ವಿದ್ಯಾರ್ಥಿವೇತನ ಸಿಗುತ್ತಿಲ್ಲ. ಪೋಷಕರನ್ನೂ ಕಳೆದುಕೊಂಡಿರುವ ಮಕ್ಕಳಿಗೂ ಈ ಯೋಜನೆಯಡಿಯಲ್ಲಿ ವಿದ್ಯಾರ್ಥಿವೇತನ ದೊರೆಯಬೇಕು. ಇಲಾಖೆಯ ಈ ಕಾರ್ಯಕ್ರಮಗಳು ಜಾರಿಗೊಳ್ಳುತ್ತಿದೆ ಎಂಬುದು ಸಮುದಾಯದ ಹಾಗೂ ಸ್ವಯಂಸೇವಾ ಸಂಘಟನೆಗಳಿಗೂ ತಿಳಿದಿರುವುದಿಲ್ಲ. ಹೀಗಾಗಿ ಜಿಲ್ಲಾ ಮಟ್ಟದ ಮಕ್ಕಳ ರಕ್ಷಣಾ ಘಟಕ, ಪಂಚಾಯಿತಿ, ಅಂಗನವಾಡಿ ಕಾರ್ಯಕರ್ತರು ಈ ಯೋಜನೆಯನ್ನು ಜನರಿಗೆ ತಲುಪಿಸುವ ದಿಶೆಯಲ್ಲಿ ಜನಜಾಗೃತಿ ಅಭಿಯಾನವನ್ನು ಸಮುದಾಯ ಸ್ಥರದಲ್ಲಿ ನಡೆಸಬೇಕು.

3. ಬಾಲ್ಯವಿವಾಹವು ಕರ್ನಾಟಕದಲ್ಲಿ ಅನೂರ್ಜಿತವಾಗಿದೆ. (ವಿವಾಹ ನಿಶ್ಚಿತಗೊಂಡ ದಿನವೇ ಅದು ಅಮಾನ್ಯಗೊಳ್ಳುತ್ತದೆ) ಅಂದರೆ, ಹೆಣ್ಣು ಮಕ್ಕಳು ಕಾನೂನಿನಡಿಯಲ್ಲಿ ಸುರಕ್ಷಿತವಾಗಿಲ್ಲ ಅಂತೆಯೇ ಅವರು ಮದುವೆ ಮಾಡಿಕೊಂಡ ಗಂಡನ ಮನೆಯ ಆಸ್ತಿಗೂ ಅವರು ಹಕ್ಕು ಪಡೆಯುವುದಿಲ್ಲ. ಸರಕಾರ ಈ ರೀತಿ ಸಮಸ್ಯೆಗೊಳಗಾದ ಯುವತಿಯರ ಮುಂದಿನ ಶಿಕ್ಷಣ ಹಾಗೂ ವೃತ್ತಿ ತರಬೇತಿಗಳ ಪ್ರವೇಶಾತಿಗೆ ಅವಕಾಶ ಒದಗಿಸುವ ಮೂಲಕ ಬೆಂಬಲಿಸಬೇಕು.

4. ಜಿಲ್ಲಾ ಮಕ್ಕಳ ಹಕ್ಕುಗಳ ರಕ್ಷಣಾ ಘಟಕಗಳು, ಮಕ್ಕಳ ಕಲ್ಯಾಣ ಸಮಿತಿ ಹಾಗೂ ಚೈಲ್ಡ್ ಲೈನ್‌ಗಳು ಮಕ್ಕಳು ಹಾಗೂ ಸಮುದಾಯಗಳಿಗೆ ಸಾಮಿಪ್ಯತೆಯಲ್ಲಿ ಕಾರ್ಯನಿರ್ವಹಿಸಬೇಕು. ಈ ಮೂಲಕ ಮಕ್ಕಳ ಹಕ್ಕುಗಳು ನಿರಾಕರಣೆಯಾಗದಿರುವ ದಿಶೆಯಲ್ಲಿ ಮತ್ತು ಮಕ್ಕಳ ಸಮಸ್ಯೆಯನ್ನು ಬಗೆಹ–ರಿಸುವ ದಿಶೆಯಲ್ಲಿ ಬೆಂಬಲಯುತವಾಗಿ ಕಾರ್ಯನಿರ್ವಹಿಸಬೇಕು.

https://www.concernedforworkingchildren.org/news/2021/04/petition-by-working-adolescents-

demanding-attention-and-child-rights-friendly-response-from-the-state-on-the-29th-april-2021-the-eve-of-national-child-labour-day-india/

**ಸಮಾಜ ಕಲ್ಯಾಣ ಇಲಾಖೆ, ಸಮಗ್ರ ಅನುಸೂಚಿತ ಪಂಗಡಗಳ ಅಭಿವೃದ್ಧಿ ಇಲಾಖೆ, ಅಲ್ಪಸಂಖ್ಯಾತ ಅಭಿವೃದ್ಧಿ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳು (ಶಿಕ್ಷಣ ವ್ಯವಸ್ಥೆ, ವಿದ್ಯಾರ್ಥಿ ನಿಲಯಗಳು, ವಿದ್ಯಾರ್ಥಿವೇತನ ಹಾಗೂ ಇತರೆ)**

1. ಮೇಲೆ ತಿಳಿಸಿದ ಎಲ್ಲಾ ಇಲಾಖೆಗಳು ಕೂಡ ಮಕ್ಕಳಿಗೆ ವಿದ್ಯಾರ್ಥಿವೇತನ ನೀಡುವ ಕಾರ್ಯಕ್ರಮವನ್ನು ಜಾರಿಗೊಳಿಸುತ್ತಾ ಬಂದಿದೆ. ಆದರೆ ಬಹುತೇಕವಾಗಿ ಈ ಸಮುದಾಯದ ಬಡಜನರಿಗೆ ಈ ವಿದ್ಯಾರ್ಥಿವೇತನ ಕುರಿತು ಮಾಹಿತಿಯೇ ಇಲ್ಲ. ಹೀಗಾಗಿ ಈ ಸಂಬಂಧಿತ ಎಲ್ಲಾ ಇಲಾಖೆಗಳು ಪ್ರತೀ ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ವಿವರದೊಂದಿಗೆ ಪಾರದರ್ಶಕತೆಯಲ್ಲಿ ಸಮುದಾಯ ಸ್ಥರಲ್ಲಿ ಮಾಹಿತಿ ಹಂಚುವ ಹಾಗೂ ಅರ್ಜಿ ಸಲ್ಲಿಸಲು ನೆರವಾಗುವ ದಿಶೆಯಲ್ಲಿ ಜನ ಜಾಗೃತಿ ಕಾರ್ಯಕ್ರಮ ನಡೆಸಬೇಕು.
2. ಇವುಗಳ ಬಗ್ಗೆ ಮಾಹಿತಿಯನ್ನು ಒಂದೇ ಪೋರ್ಟಲ್‌ನಲ್ಲಿ (ಮಾಹಿತಿ ಕಣಜ) ಲಭ್ಯವಾಗುವಂತೆ ಮಾಡಬೇಕು, ಅದನ್ನು ವ್ಯಾಪಕತೆಯಲ್ಲಿ ಪ್ರಚುರಪಡಿಸಬೇಕು.
3. ಸಮಾಜ ಕಲ್ಯಾಣ ಇಲಾಖೆಯಿಂದ ನಡೆಸಲ್ಪಡುವ ಅನೇಕ ವಸತಿ ಶಾಲೆಗಳು ಮತ್ತು ವಿದ್ಯಾರ್ಥಿನಿಲಯಗಳಿವೆ. ಈ ಮಾಹಿತಿಯನ್ನು ಮತ್ತು ಅವುಗಳ ಸಂಪರ್ಕ ವಿವರಗಳನ್ನು ಗ್ರಾಮೀಣ ಪ್ರದೇಶ ಹಾಗೂ ನಗರಗಳಲ್ಲಿ ವಾಸಿಸುತ್ತಿರುವ ಕುಟುಂಬಗಳಿಗೆ ಲಭ್ಯವಾಗುವಂತೆ ವ್ಯಾಪಕವಾಗಿ ಪ್ರಚಾರ ಮಾಡಬೇಕು.

## ಕಾರ್ಮಿಕ ಇಲಾಖೆ ಮತ್ತು ಕೌಶಲ್ಯಾಭಿವೃದ್ಧಿ ಮತ್ತು ಜೀವನೋಪಾಯ ನಿರ್ದೇಶನಾಲಯ

ವಲಸೆ ಕಾರ್ಮಿಕರ ಮಕ್ಕಳ ಶಿಕ್ಷಣದ ಹಕ್ಕು ಹಾಗೂ ವಲಸೆ ಬಂದಿರುವ ಬಾಲ ಕಾರ್ಮಿಕರ ನೀತಿ 2019ನ್ನು ಕೂಡಲೇ ಜಾರಿಗೊಳಿಸಿ ಅನುಷ್ಠಾನಕ್ಕೆ ತುರುವಲ್ಲಿ ಕಾರ್ಯಯೋಜನೆಗಳನ್ನು ರೂಪಿಸುವುದು.

## ಸ್ಥಳೀಯ ಸರ್ಕಾರಗಳು

1. ಕರ್ನಾಟಕದಲ್ಲಿ ಬಾಲ್ಯವಿವಾಹ ಕಾನೂನು ಮಾನ್ಯತೆಯನ್ನು ಹೊಂದಿಲ್ಲ ಹಾಗೂ ಆ ಹುಡುಗಿಗೆ ಯಾವುದಕ್ಕೂ ಅರ್ಹತೆಯನ್ನು ಒದಗಿಸುವುದಿಲ್ಲ. ಹುಡುಗ/ಪುರುಷ ಅಪ್ರಾಪ್ತ ಹುಡುಗಿಯೊಂದಿಗೆ ದೈಹಿಕ ಸಂಬಂಧವನ್ನು ಹೊಂದಿದ್ದಲ್ಲಿ, ಪೋಕ್ಸೋ ಕಾಯ್ದೆಯಡಿಯಲ್ಲಿ ತೀವ್ರ ಶಿಕ್ಷಾರ್ಹ ಅಪರಾಧವೆಂದು ಪರಿಗಣಿಸಲಾಗುತ್ತದೆ. ಇವುಗಳ ಕುರಿತು ಪಾಲಕ–ರಿಗೆ, ಮಕ್ಕಳಿಗೆ ಹಾಗೂ ಸಮುದಾಯಗಳಿಗೆ ಸರ್ಕಾರ ಜಾಗೃತಿ ಮೂಡಿಸಬೇಕು.
2. ಏರಿಯಾ ಸಭಾ, ಮಕ್ಕಳಗ್ರಾಮ ಸಭೆ, ಮಹಿಳಾ ಗ್ರಾಮ ಸಭೆ, ಯುವ ಜನರ ಗ್ರಾಮ ಸಭೆ ಮತ್ತು ಎಸ್.ಸಿ ಹಾಗೂ ಎಸ್.ಟಿ ಸಮುದಾಯದ ಸಭೆಗಳು ಕಡ್ಡಾಯವಾಗಿ ನಡೆಯಲೇಬೇಕು.
3. ಗ್ರಾಮೀಣ ಭಾಗಗಳಲ್ಲಿ ಎಮ್.ಜಿ.ಎನ್.ಆರ್.ಇ.ಜಿ.ಎ ಪರಿಣಾಮಕಾರಿಯಾಗಿ ಅನುಷ್ಠಾನವಾಗಬೇಕು.
4. ವಿಕಲಚೇತನರು ಹಾಗೂ ಹಿರಿಯನಾಗರಿಕರಿಗೆ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ 150 ದಿನಗಳ ಉದ್ಯೋಗಾವಕಾಶವಿದೆ ಹಾಗೂ ಅವರು ಶೇ.50% ಕೆಲಸ ಸಂಪೂರ್ಣಗೊಳಿಸಿದ್ದರೆ ಅವರು ಒಂದು ದಿನದ ಸಂಪೂರ್ಣ ವೇತನ ಪಡೆಯಲು ಅರ್ಹರು ಎಂಬ ವಿಷಯವನ್ನು ಗ್ರಾಮೀಣ ಭಾಗದಲ್ಲಿ ಸಮುದಾಯದ ಅರಿವಿಗೆ ಬರುವಂತೆ ವ್ಯಾಪಕವಾಗಿ ಪ್ರಚುರಪಡಿಸಬೇಕು.
5. ಕೋವಿಡ್–19 ಇದರಿಂದ ಸಂಕಷ್ಟಕ್ಕೊಳಪಟ್ಟ ಕುಟುಂಬಗಳಿಗೆ ಬೇರೆಬೇರೆ ಇಲಾಖೆಗಳಿಂದ ಜಾ–ರಿಗೊಳಿಸಿರುವ ಪರಿಹಾರ ಕಾರ್ಯಕ್ರಮಗಳು, ಯೋಜನೆಗಳ ಕುರಿತು ಸರ್ಕಾರ ಜನಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕು.

## ಸ್ಥಳೀಯ ಸಂಘಟನೆಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳು

1. ಸರ್ಕಾರದೊಂದಿಗೆ ಸಹಭಾಗೀಧಾರರಾಗಿ ಶಾಲೆಯಿಂದ ಹೊರಗಡೆಯಿರುವ ಮಕ್ಕಳನ್ನು ಗುರುತಿಸಲು ಮತ್ತು ಅವರ ಕುಟುಂಬಗಳಿಗೆ ಅಗತ್ಯವಾಗಿ ಬೇಕಾದ ಮಾನಸಿಕ–ಸಾಮಾಜಿ–ಕ ಹಾಗೂ ಇತರೆ ವ್ಯವಸ್ಥೆಗಳ ಬೆಂಬಲ ನೀಡುವ ದಿಶೆಯಲ್ಲಿ ಕಾರ್ಯನಿರ್ವಹಿಸಬಹುದು.
2. ರಾಜ್ಯ ಸರ್ಕಾರದ ಸಹಯೋಗದೊಂದಿಗೆ ಎಲ್ಲಾ ಸಹಭಾಗೀಧಾರರಿಗೆ ಸಾಮರ್ಥವರ್ಧನೆಯ ತರಬೇತಿ ನೀಡಲು ಬೆಂಬಲಿಸಬಹುದು.

# Annexures

## Annexure 1: ಕೋವಿಡ್ ಬಿಕ್ಕಟ್ಟು ಮಕ್ಕಳ ಶಿಕ್ಷಣದ ಸವಾಲುಗಳು

### ಕೇಸ್ಟಡಿ 1

### ಸಲೋಮಿ: "ಮೊದಲ ಮಗುವಿಗೆ ಶಾಲಾ ಫೀಸ್ ಕಟ್ಟಿಲ್ಲ, ಇನ್ನೂ ಎರಡನೆಯ ಮಗುವಿಗೆ ಹಣ ಎಲ್ಲಿಂದ ಕಟ್ಟಲಿ?"

ನನ್ನ ಹೆಸರು ಸಲೋಮಿ 27ವರ್ಷ. ನಾನು ಬೆಂಗಳೂ-ರಿನ ಚೆಲುವಾದಿಪಾಳ್ಯ ವಾರ್ಡ ನಂಬರ್ 138ರಲ್ಲಿ ವಾಸವಾಗಿದ್ದೇನೆ. ನಾನು ಪಿಯುಸಿ ಓದಿದ್ದೇನೆ. ನನ್ನ ಗಂಡ ಸಂತೋಷ್ 29 ವರ್ಷ ಅನಕ್ಷರಸ್ಥರು. ನಮಗೆ ಇಬ್ಬರು ಮಕ್ಕಳು- ಜರೂಷ್ 7ವರ್ಷ ಮತ್ತು ಕಿರಣ್ 4 ವರ್ಷ. 2 ವರ್ಷಕ್ಕೂ ಮೊದಲು ನನ್ನ ಗಂಡ ಪೈಂಟ-ರ್ ಆಗಿ ದುಡಿಯುತ್ತಿದ್ದರು. ನಾನು ಕಮರ್ಷಿಯಲ್ ಟ್ಯಾಕ್ಸ್ ಆಫೀಸ್‌ನಲ್ಲಿ ರಿಸೆಪ್ಷನಿಸ್ಟ ಆಗಿ ದುಡಿಯುತ್ತಿದ್ದೆ. ನನ್ನ ಮೊದಲ ಮಗ ಜರೂಷ್‌ನನ್ನು ಮನೆಯ ಹತ್ತಿರದಲ್ಲಿಯೇ ಇರುವ ಟ್ರಿನಿಟಿ ಇಂಗ್ಲೀಷ್ ಶಾಲೆಗೆ 4 ವರ್ಷಕ್ಕೆ ಎಲ್.ಕೆ. ಜಿಗೆ 2019ರಲ್ಲಿ ಸೇರಿಸಿ, ಕಂತು ಲೆಕ್ಕದಲ್ಲಿ ರೂ.28000/- ಶಾಲಾ ಶುಲ್ಕ ಪಾವತಿ ಮಾಡಿದ್ದೆ. ಮಗು ಚೆನ್ನಾಗಿಯೇ ಅಕ್ಷರ ಅಭ್ಯಾಸ ಕಲಿಯುತ್ತಿತ್ತು. ಕೊರೋನಾ ಲಾಕ್ಡೌನ್ ಕಾರಣದಿಂದ ನನ್ನ ಗಂಡ ಯಾವುದೇ ಕೆಲಸ ಸಿಗದೇ ಮನೆಯಲ್ಲೇ ಉಳಿದರು. ನಾನು ಕೆಲಸ ಮಾಡುತ್ತಿದ್ದ ಆಫೀಸ್‌ನಲ್ಲಿ ಕೋವಿಡ್ ಕಾರಣದಿಂದ ಕೇವಲ 15% ಮಾತ್ರ ಕೆಲಸಗಾರರನ್ನು ಇಟ್ಟುಕೊಂಡರು. ನಾನೂ ಕೆಲಸ ಕಳೆದುಕೊಂಡು, ಅತ್ತ ಮನೆಯ ಬಾಡಿಗೆ, ಮಕ್ಕಳ ಊಟಕ್ಕೂ ಕಷ್ಟ ಪಡಬೇಕಾಯಿತು. ನಮಗೆ ಬಾಡಿಗೆ ಮನೆ ನೀಡಿದ್ದ ಮನೆಯ ಮಾಲೀಕರು ನಾವು ನೀಡಿದ ಮುಂಗಡ ಮೊತ್ತದಲ್ಲಿಯೇ ಬಾಡಿಗೆಯನ್ನು ಕಡಿತಗೊಳಿಸಿದರು. ಆ ಹಣವೂ ಸಂದಾಯವಾದಾಗ ಬಾಡಿಗೆ ಮನೆಯೂ ಸಿಗದೆ, ತಾಯಿಯ ಮನೆಯಲ್ಲಿ ಆಶ್ರಯ ಪಡೆದೆವು. ನಾವು ಶೈಕ್ಷಣಿಕ ಶುಲ್ಕ ಪಾವತಿ ಮಾಡಲಿಲ್ಲ ಎಂಬ ಕಾರಣ-ಕ್ಕೆ ನನ್ನ ಮಗು ಜರೂಷ್ 2020, 2021ರ ಸಾಲಿನಲ್ಲಿ ಯಾವುದೇ ಶಿಕ್ಷಣವನ್ನು ಪಡೆಯಲು ಸಾಧ್ಯವಾಗಿಲ್ಲ. ನಮ್ಮಲ್ಲಿ ಸ್ಮಾರ್ಟ್ ಫೋನೂ ಇರಲಿಲ್ಲ. ಆದಕಾರಣ ನನ್ನ ಮಗು ಶಿಕ್ಷಣದಿಂದ ಹೊರಗುಳಿಯಬೇಕಾಯಿತು. ನನ್ನ ಮಗು ಒಳ್ಳೆಯ ವಿದ್ಯಾಭ್ಯಾಸ ಇಂಗ್ಲೀಷ್ ಮಾಧ್ಯಮದಲ್ಲಿ ಪಡೆಯಬೇಕು ಎಂಬ ಕನಸಿದೆ. ಇತ್ತೀಚೆಗೆ ನನ್ನ ಗಂಡನಿಗೆ ಕೆಲಸ ಸಿಕ್ಕಿ ಮೆಡಿಕಲ್ ಸ್ಟೋರ್‌ನಲ್ಲಿ ರೂ.10,000/- ಸಂಬಳಕ್ಕೆ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಅವರು ದುಡಿದು ತಂದ ಹಣದಲ್ಲಿ ರೂ.5500/- ಬಾಡಿಗೆಯೇ ಕಟ್ಟಬೇಕು. ಉಳಿದ ರೂ.4500/- ನಮ್ಮ ಊಟ, ಬಟ್ಟೆ, ಆಸ್ಪತ್ರೆ ಖರ್ಚು ನಡೆಸಬೇಕು. ನಮ್ಮ ಇಬ್ಬರು ಮಕ್ಕಳೂ ಶಾಲೆಗೆ ಹೋಗಬೇಕು, ಚೆನ್ನಾಗಿ ಕಲಿಯಬೇಕು ಎಂಬ ಆಸೆಯಿದೆ. ಮೊದಲ ಮಗುವಿಗೆ ಶಾಲಾ ಫೀಸ್ ಕಟ್ಟಿಲ್ಲ, ಇನ್ನು ಎರಡನೆಯ ಮಗುವಿಗೆ ಹಣ ಎಲ್ಲಿಂದ ಕಟ್ಟಲಿ?

### ಕೇಸ್ಟಡಿ 2

### ಕಲ್ಯೆವಾಣಿ: ಶಾಲಾ ಶುಲ್ಕ ಕಟ್ಟಿಲ್ಲ ಎಂಬ ಕಾರಣಕ್ಕೆ ಕಲಿಕೆಯಿಂದ ಹೊರಗುಳಿದಿದ್ದಾರೆ.

ನನ್ನ ಹೆಸರು ಕಲ್ಯೆವಾಣಿ 38 ವರ್ಷ. ನನ್ನ ಗಂಡ ಮಣಿ 48 ವರ್ಷ. ನಾವು ಬೆಂಗಳೂರಿನ ವಾರ್ಡು ನಂಬರ್ 138ರ ಆಂಜನಪ್ಪ ಗಾರ್ಡನ್‌ನಲ್ಲಿ ವಾಸಿಸುತ್ತಿದ್ದೇವೆ. ನನಗೆ ಇಬ್ಬರು ಮಕ್ಕಳು. ಮೊದಲನೆಯ ಮಗ ಸರ್ವೇಂದ್ರ 13 ವರ್ಷ, ಎರಡನೆಯ ಮಗ ಜನಾರ್ಧನ್ 11 ವರ್ಷ. ನಾನು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸೆಕ್ಯುರಿಟಿ ಗಾರ್ಡ ಆಗಿ ದುಡಿಯುತ್ತಿದ್ದೇನೆ. ನನಗೆ ನಿಗದಿಯಾದ ವೇತನ ರೂ.7000/-. ಆದರೆ 7 ತಿಂಗಳಿಂದ ನನಗೆ ನನ್ನ ವೇತನ ಸಿಕ್ಕಿಲ್ಲ. ನನ್ನ ಗಂಡ ಪೈಂಟರ್. ಕೊರೋನಾ ಲಾಕ್ಡೌನ್‌ನಲ್ಲಿ ಅವರಿಗೂ ಕೆಲಸವಿರಲಿಲ್ಲ. ಈಗ ವಾರದಲ್ಲಿ ಒಂದು ಅಥವಾ ಎರಡು ದಿನ ಮಾತ್ರ ಕೆಲಸ ಸಿಗುತ್ತದೆ. 2019ರಲ್ಲಿ ನನ್ನ ಇಬ್ಬರೂ ಮಕ್ಕಳನ್ನು ಮನೆಯ ಹತ್ತಿರದ ಸೈಂಟ್ ಜೋಸೆಫ್ ಶಾಲೆಗೆ ಸೇ-ರಿಸಿದ್ದೆ. ಇಬ್ಬರಿಗೂ ತಲಾ ರೂ.18000/- ವಾರ್ಷಿಕ ಶಾಲಾ ಶುಲ್ಕವನ್ನು ಕಂತು ರೂಪದಲ್ಲಿ ಕಟ್ಟಿ ಪ್ರವೇಶ ಪಡೆದಿದ್ದರು. ಆದರೆ ಕೋವಿಡ್ ಲಾಕ್ಡೌನ್‌ನಿಂದ ನಮಗೆ ಮಕ್ಕಳ ಶಾಲಾ ಶುಲ್ಕ ಭರಿಸಲು ಸಾಧ್ಯವಾಗಿಲ್ಲ. ಶಾಲಾ ಶುಲ್ಕ ಕಟ್ಟಿ ಎಂಬ ಒತ್ತಡ 2020ರಲ್ಲಿ ಶಾಲಾಡಳಿತ ಮಾಡುತ್ತಿತ್ತು. ಯಾವುದೇ ಜೀವನೋಪಾಯವಿಲ್ಲದೆ ಅಷ್ಟು ಶುಲ್ಕ ಭರಿಸಲು ಸಾಧ್ಯವಾಗುತ್ತಿರಲಿಲ್ಲ. ಯಾರೂ

ಸಾಲಕ್ಕೂ ಹಣ ನೀಡುತ್ತಿರಲಿಲ್ಲ. ಆನ್ಲೈನ್ ಶಿಕ್ಷಣ ಕೂಡ ನಮ್ಮ ಮಕ್ಕಳಿಗೆ ಅರ್ಥ ಆಗುತ್ತಿರಲಿಲ್ಲ. ಒಂದು ಸ್ಮಾರ್ಟ ಫೋನಿನಲ್ಲಿ ಇಬ್ಬರು ಮಕ್ಕಳು ಶಿಕ್ಷಣ ಪಡೆಯುವುದಾದರೂ ಹೇಗೆ? ಇಬ್ಬರಿಗೂ ಒಟ್ಟಿಗೆ ತರಗತಿಗಳು ಏಕಕಾಲದಲ್ಲಿ ನಡೆಯುತ್ತಿತ್ತು. ಹೀಗಾಗಿ ಇಬ್ಬರಲ್ಲಿ ಒಬ್ಬರು ಆ ಸಮಯದ ಕಲಿಕೆಯಿಂದ ಹೊರಗುಳಿದರು. ಇದನ್ನು ನೋಡುತ್ತಿದ್ದ ನನಗೆ ಬಹಳ ದುಃಖವಾಗುತ್ತಿತ್ತು. 2021ರಲ್ಲಿ ಶಿಕ್ಷಣ ಶುಲ್ಕ ಪಾವತಿಸದ ನನ್ನ ಮಕ್ಕಳನ್ನು ಮರು ಶಾಲೆಗೆ ಸೇರ್ಪಡೆ ಮಾಡಲು ಶಾಲಾ ವ್ಯವಸ್ಥೆ ಸಿದ್ಧವಿರಲಿಲ್ಲ. ಈ ವರ್ಷ 8ನೇ ತರಗತಿ ಓದಬೇಕಿದ್ದ ನನ್ನ ಹಿರಿಯ ಮಗ ಮತ್ತು 5ನೇ ತರಗತಿಯಲ್ಲಿರಬೇಕಾದ ನನ್ನ ಕಿರಿಯ ಮಗ ಶಾಲೆಯ ಶುಲ್ಕ ಕಟ್ಟಿಲ್ಲ ಎಂಬ ಕಾರಣಕ್ಕೆ ಕಲಿಕೆಯಿಂದ ಹೊರಗುಳಿದಿದ್ದಾರೆ. ನಾನು ಮನೆ ನಡೆಸಲು ಸಾಲ ಮಾಡಿ ಸೋತಿದ್ದೇನೆ. ರೂ.4000/- ಮನೆ ಬಾಡಿಗೆ ಕಟ್ಟಲೇಬೇಕು. ಮಕ್ಕಳ ಶಿಕ್ಷಣದ ಭವಿಷ್ಯ ನನಗೆ ರೂಪಿಸಲು ಸಾಧ್ಯವಾಗುತ್ತಿಲ್ಲ.

## ಕೇಸ್ಟಡಿ 3

### ಚಾರುಲತಾ ಪೋಷಕರು: ನನ್ನ ಮಕ್ಕಳ ಶಿಕ್ಷಣಕ್ಕಾಗಿ ಸರ್ಕಾರ ಫೀಸ್ ವ್ಯವಸ್ಥೆ ಮಾಡಿಕೊಡಬೇಕು.

ನನ್ನ ಹೆಸರು ಚಾರುಲತಾ 24 ವರ್ಷ. ನಾನು ಬೆಂಗಳೂ-ರಿನ ಆನಂದಪುರದ ನಿವಾಸಿ. ನನ್ನ ಗಂಡ ಮಣಿ 27 ವರ್ಷ. ನಮಗೆ 2 ಮಕ್ಕಳು. ಮೊದಲನೆಯ ಮಗು ನಕ್ಕಲ್ 8ವರ್ಷ. ಎರಡನೆಯ ಮಗು ತೃಷಿಕಾ 4 ವರ್ಷ. ನನ್ನ ಗಂಡ ಕುಡಿತ ಚಟಕ್ಕೆ ಬಿದ್ದು, ಪ್ರತಿದಿನ ಕುಡಿದು ಬಂದು ಕಿರುಕುಳ ನೀಡುತ್ತಿದ್ದ ಕಾರಣ ಅವನನ್ನು ತೊರೆದು, ಅಮ್ಮನ ಮನೆಯಲ್ಲಿ 4 ವರ್ಷದಿಂದ ಬದುಕುತ್ತಿದ್ದೇವೆ, ನನ್ನ ಮತ್ತು ಮಕ್ಕಳ ಜೀವನ ಮುಂದುವರೆಸಲು ಚೌಲ್ಟ್ರೀ ಕೆಲಸದಲ್ಲಿ ಸೇ-ರಿಕೊಂಡೆ. ಕೋವಿಡ್ ಸಾಂಕ್ರಾಮಿಕ ಖಾಯಿಲೆ ಹರಡುವ ಮೊದಲು ವಾರದಲ್ಲಿ 2 ರಿಂದ 3 ಕೆಲಸ ಸಿಗುತ್ತಿತ್ತು. ದಿನಕ್ಕೆ ರೂ.300 ರಿಂದ ರೂ.400ರವರೆಗೂ ಸಂಪಾದಿಸುತ್ತಿದ್ದೆ. ನಾನು ಕಷ್ಟಪಟ್ಟು ದುಡಿದು ನನ್ನ ಮಕ್ಕಳ ಶಿಕ್ಷಣಕ್ಕೆ ಹಣ ಹೊಂದಾಣಿಕೆ ಮಾಡಿ, 2019ರಲ್ಲಿ ನನ್ನ ಮೊದಲ ಮಗನನ್ನು ಮನೆಗೆ ಸಮೀಪವಾಗಿರುವ ಪ್ರೆಸೆಂಟ್ ಖಾಸಗೀ ಶಾಲೆಗೆ ರೂ.3000 ಪಾವತಿ ಮಾಡಿ ಸೇರಿಸಿದೆ, ನಂತರ ಮಾಸಿಕವಾಗಿ ರೂ.500/-ರಂತೆ ಪ್ರತೀ ತಿಂಗಳು ಶಾಲಾ ಶುಲ್ಕ ಕಟ್ಟಿದ್ದೆ. ಕೋವಿಡ್ ನಿರ್ಭಂಧದಿಂದ ಯಾವುದೇ ಮದುವೆ ಸಮಾರಂಭಗಳು ಚೌಲ್ಟ್ರಿಯಲ್ಲಿ ನಡೆಯದ ಕಾರಣ ಆ ಕೆಲಸನೂ ಇಲ್ಲದಂತಾಯಿತು. ಉಳಿದಿರುವ ರೂ.7000/- ಶಾಲಾ ಶುಲ್ಕ ಪಾವತಿ ಮಾಡಲು ಸಾಧ್ಯವಾಗಿಲ್ಲ. ನನ್ನಲ್ಲಿ ಸ್ಮಾರ್ಟಫೋನು ಇರಲಿಲ್ಲ. ಆದ-ಕಾರಣ ನನ್ನ ಮಗ ಆನ್ಲೈನ್ ಶಿಕ್ಷಣನೂ ಪಡೆಯಲು ಸಾಧ್ಯವಾಗಿಲ್ಲ. ಅಕ್ಟೋಬರ್ ತಿಂಗಳಲ್ಲಿ ಮಗುವನ್ನು ಮರು ದಾಖಲು ನಡೆಸಲು ಶಾಲೆಗೆ ಹೋಗಿ ವಿಚಾರಿಸಿದಾಗ, ಶಾಲಾಡಳಿತ ಮಂಡಳಿ ನಮ್ಮ ಮಗುವಿನ 2019ರ ಶಾಲಾ ಶುಲ್ಕ ಬಾಕಿ ಮೊತ್ತ ರೂ 7000/- ಮತ್ತು 2021-22ರ ಸಾಲಿನ ರೂ.10500/- ಒಟ್ಟಿಗೆ ಪಾವತಿ ಮಾಡಲು ತಿಳಿಸಿದ್ದಾರೆ. ಕೋವಿಡ್ ನಿರ್ಬಂಧ ಸಡಿಲಿಕೆ ಸರ್ಕಾರ ಮಾಡಿದ್ದರೂ ನನಗೆ ತಿಂಗಳಲ್ಲಿ 7 ರಿಂದ 10 ದಿನ ಮಾತ್ರ ಕೆಲಸ ಸಿಗುತ್ತಿದೆ. ಹಸಿವು ನೀಗಿಸಿಕೊಳ್ಳಲು ಕಷ್ಟವಾಗಿರುವ ನನಗೆ ಮಗುವಿನ ಶಿಕ್ಷಣದ ಭವಿಷ್ಯ ರೂಪಣೆಗೆ ಹಣ ಹೊಂದಾಣಿಕೆ ಮಾಡಲು ಸಾಧ್ಯವಾಗುತ್ತಿಲ್ಲ. ನನ್ನ ಮಗು ಇಂಗ್ಲೀಷ್ ಮಾಧ್ಯಮದಲ್ಲಿ ಓದಬೇಕೆನ್ನುವ ಆಸೆಯಿದೆ. ನನ್ನ ಮಕ್ಕಳ ಶಿಕ್ಷಣಕ್ಕಾಗಿ ಸರ್ಕಾರ ಫೀಸ್ ವ್ಯವಸ್ಥೆ ಮಾಡಿಕೊಡಬೇಕು.

## ಕೇಸ್ಟಡಿ 4

### ವಿಮಲ: ಮಕ್ಕಳ ವರ್ಗಾವಣೆ (ಟಿ.ಸಿ) ಪತ್ರವನ್ನು ನೀಡಲು ಕೇಳಿಕೊಂಡರೂ ಶಾಲಾಡಳಿತ ನೀಡುತ್ತಿಲ್ಲ

ನನ್ನ ಹೆಸರು ವಿಮಲ 32 ವರ್ಷ. ನಾನು ಬೆಂಗಳೂ-ರಿನ ವಾರ್ಡು ನಂಬರ್ 138ರ ಚೆಲುವಾದಿಪಾಳ್ಯದಲ್ಲಿ ನನ್ನ ಗಂಡ ಮುರುಗೇಶ್, ಇಬ್ಬರು ಮಕ್ಕಳು ಮೋನಿಶ್ 11 ವರ್ಷ ಹಾಗೂ ರೋಹಿತ್ 7 ವರ್ಷ ಇವರೊಂದಿಗೆ ವಾಸಿಸುತ್ತಿದ್ದೇನೆ. ನನ್ನ ಗಂಡ ಅಂಗವಿಕಲರು. ನಡೆದಾಡಲು ಕಷ್ಟಪಡುತ್ತಾರೆ. ಇಲೆಕ್ಟ್ರೀಷನ್ ಕೆಲಸ ಮಾಡುತ್ತಾರೆ. ಮನೆಯ ಹತ್ತಿರವಿರುವಂತೆ ಯಾರಾದರೂ ಕೆಲಸಕ್ಕೆ ಕರೆದರೆ ಹೋಗುತ್ತಿದ್ದರು. ಕೋವಿಡ್ ಲಾಕ್ಡೌನ್ ಕಾರಣದಿಂದ, ತಿಂಗಳಲ್ಲಿ ಕೇವಲ 3-4 ದಿನ ಮಾತ್ರ ಅವರಿಗೆ ಕೆಲಸ ಸಿಗುತ್ತಿತ್ತು. ನಾನು ಗಾರ್ಮೆಂಟ್ಸ್‌ನಲ್ಲಿ ಸಹಾಯಕಿಯಾಗಿ ಕೆಲಸ ಮಾಡುತ್ತಿದ್ದು, ನನಗೆ ತಿಂಗಳ ಸಂಬಳ ರೂ.6000/- ಮಾತ್ರ ಸಿಗುತ್ತದೆ. ಆರೋಗ್ಯ ಸಮಸ್ಯೆ ಎದುರಿಸುತ್ತಿರುವ ನನಗೆ ಮಾಸಿಕ ರೂ.1000 ದಿಂದ ರೂ.2000 ಖರ್ಚು ಪ್ರತೀ ತಿಂಗಳು ಔಷಧಿಗಾಗಿ ಇಡಬೇಕು. 2019ರಲ್ಲಿ ನನ್ನ ಹಿರಿಯ ಮಗ ಮೌನೇಶ್‌ಗೆ ಆರ್.ಟಿ.ಇ. ಸೀಟು ಸಿಕ್ಕಿತು. ಅವನನ್ನು ಒಂದನೇ ತರಗತಿಗೆ ಗಾಡ್ವಿನ್ ಇಂಗ್ಲೀಷ್ ಶಾಲೆಯಲ್ಲಿ ದಾಖಲಾತಿ ಮಾಡಿ, ರೂ.7000/- ಮಾತ್ರ ಪಾವತಿ ಮಾಡಿದೆ. ಇನ್ನೊಬ್ಬ ಮಗ ರೋಹಿತ್‌ಗೆ ಆರ್.ಟಿ.ಇ. ಸೀಟು ಸಿಗದ ಕಾರಣ ರೂ.15000/- ಅದೇ ಶಾಲೆಗೆ ಕಟ್ಟಬೇಕಿತ್ತು. ಪ್ರತೀ ತಿಂಗಳು

ಶಾಲಾ ಶುಲ್ಕ ಪಾವತಿಸುವೆ ಎಂಬ ಆತ್ಮವಿಶ್ವಾಸದಲ್ಲಿದ್ದ ನನಗೆ ಕೋವಿಡ್ ಲಾಕ್ಡೌನ್ ಆಘಾತವನ್ನೇ ನೀಡಿತು. ನನ್ನ ಇಬ್ಬರೂ ಮಕ್ಕಳ ಶಾಲಾ ಶುಲ್ಕ ರೂ.10000/– ಇನ್ನೂ ಬಾಕಿ ಉಳಿದಿತ್ತು. ಕೋವಿಡ್ ಪ್ರಾರಂಭವಾದ 4–5ತಿಂಗಳಲ್ಲೇ ಗಾಡ್ವಿನ್ ಇಂಗ್ಲೀಷ್ ಶಾಲೆಯು ಮುಚ್ಚಲ್ಪಟ್ಟು ಮತ್ತೆ ತೆರೆಯಲೇ ಇಲ್ಲ. ಇಲ್ಲಿಯ ತನಕವೂ ಶಾಲೆ ಪುನರಾರಂಭವಾಗಿಲ್ಲ. ನನ್ನ ಇಬ್ಬರೂ ಮಕ್ಕಳು ಯಾವುದೇ ಆನ್ಲೈನ್ ಶಿಕ್ಷಣವಾಗಲಿ, ವಿದ್ಯಾಗಮವಾಗಲಿ ಪಡೆಯದೆ ಮನೆಯಲ್ಲಿಯೇ 2 ವರ್ಷದಿಂದಲೂ ಇದ್ದಾರೆ. ಕಳೆದ 4–5 ತಿಂಗಳಿನಿಂದ ಗಾಡ್ವಿನ್ ಶಾಲೆಯ ಆಡಳಿತ ಮಂಡಳಿ ಪದೇಪದೇ ಫೋನ್ ಮಾಡಿ 2019ರ ಬಾಕಿ ಶಾಲಾ ಶುಲ್ಕ ಕಟ್ಟಬೇಕೆಂದು ಪೀಡಿಸುತ್ತಿದ್ದಾರೆ. ನಾನು ಕೋವಿಡ್ ಲಾಕ್ಡೌನ್ ಸಂದರ್ಭದಲ್ಲಿ ಕೆಲಸ ಕಳೆದುಕೊಂಡು, ಇತ್ತೀಚೆಗಷ್ಟೇ ಗಾರ್ಮೆಂಟ್ಸ್‌ಗೆ ಕೆಲಸಕ್ಕಾಗಿ ಸೇರಿಕೊಂಡಿರುವೆ. ಬರುವ ರೂ.6000/– ದಲ್ಲಿ ಬಾಡಿಗೆ, ಮನೆ ನಡೆಸುವುದೇ ಕಷ್ಟಕರವಾಗಿದೆ. ಇನ್ನು ಶಾಲಾಡಳಿತಕ್ಕೆ ಎಲ್ಲಿಂದ ಹಣ ಕಟ್ಟಲಿ? ಮಕ್ಕಳ ಶಿಕ್ಷಣ ಮುಂದುವರಿಕೆಯಾಗಬೇಕು ಸರ್ಕಾರಿ ಶಾಲೆಗೆ ಹೋಗಲಿ ಎಂದು ಮಕ್ಕಳ ವರ್ಗಾವಣೆ (ಟಿ.ಸಿ.) ಪತ್ರವನ್ನು ನೀಡಲು ಕೇಳಿಕೊಂಡರೂ ಶಾಲಾಡಳಿತ ನೀಡುತ್ತಿಲ್ಲ. ರೂ.10000/– ನೀಡದ ಹೊರತು ವರ್ಗಾವಣೆ ಪತ್ರ ನೀಡುವುದಿಲ್ಲ ಎಂದು ಪಟ್ಟುಹಿಡಿದಿದ್ದಾರೆ. ಹೀಗಾಗಿ ನನ್ನ ಮಕ್ಕಳು 2 ವರ್ಷದಿಂದ ಸಂಪೂರ್ಣವಾಗಿ ಶಿಕ್ಷಣದಿಂದ ಹೊರಗುಳಿದಿರುವುದು ಬಹಳ ಸಂಕಟವನ್ನುಂಟು ಮಾಡುತ್ತಿದೆ.

## ಕೇಸ್ಟಡಿ 5

### ಕಾವ್ಯ: ಕೊರೋನಾ ಲಾಕ್ಡೌನ್ ಸಮಯದಲ್ಲಿ ಯಾವುದೇ ಕಲಿಕೆಯಾಗಿಲ್ಲ, ಶಿಕ್ಷಣದ ಮೇಲಿನ ಆಸಕ್ತಿ ಕಡಿಮೆಯಾಗಿದೆ.

ನನ್ನ ಹೆಸರು ಕಾವ್ಯ 12 ವರ್ಷ. ಬೆಂಗಳೂ–ರಿನ ಆಂಜನಪ್ಪಗಾರ್ಡನ್ ವಾರ್ಡು ನಂಬರ್ 138ರಲ್ಲಿ ವಾಸವಿದ್ದೇನೆ. ನನ್ನ ಅಮ್ಮನ ಹೆಸರು ಮಾಗೇಶ್ 30 ವರ್ಷ, ಅಪ್ಪ ರಾಜಮಣಿ 35 ವರ್ಷ. ಅಮ್ಮ 3ನೇ ತರಗತಿ ಓದಿದ್ದಾರೆ. ಅಪ್ಪ 10ನೇ ತರಗತಿ ಓದಿದ್ದಾರೆ. ಅಪ್ಪ ಮತ್ತು ಅಮ್ಮ ಇಬ್ಬರೂ ತಮಿಳುನಾಡಿನ ಪಡುಪಟ್ಟಿ ಎಂಬ ಗ್ರಾಮದಲ್ಲಿ ವಾಸಿಸುತ್ತಿದ್ದಾರೆ. ನಾನು ನನ್ನ ಅಜ್ಜಿ (60ವರ್ಷ) ಜೊತೆ 10 ವರ್ಷಗಳಿಂದ ಬೆಂಗಳೂರಿನ ಆಂಜನಪ್ಪ ಗಾರ್ಡನ್‌ನಲ್ಲಿ ವಾಸಿಸುತ್ತಿದ್ದೇನೆ. ನಾನು ನಮ್ಮ ಏರಿಯದಲ್ಲಿಯೇ ಇರುವ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ 1 ರಿಂದ 4ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿದೆ. ಕೋವಿಡ್ ಲಾಕ್ಡೌನ್ ಸಮಯದಲ್ಲಿ ನನಗೆ ಯಾವುದೇ ಆನ್‌ಲೈನ್ ಕಲಿಕೆಯಾಗಲಿ, ವಿದ್ಯಾಗಮವಾಗಲಿ ಸಿಗಲಿಲ್ಲ. ನನ್ನ ತಾತ ಆಟೋ ಚಾಲಕರು. ಅವರಿಗೂ ಕೋವಿಡ್ ಸಮಯದಲ್ಲಿ ಕೆಲಸವಿರಲಿಲ್ಲ. 2021 ಅಕ್ಟೋಬರ್‌ನಲ್ಲಿ ನನ್ನ ಅಜ್ಜಿ ನನ್ನನ್ನು ಬಂಗಿ ಕಾಲೋನಿಯಲ್ಲಿರುವ ಗಾಂಧಿ ಸರ್ಕಾರಿ ಪ್ರಾಥಮಿಕ ಶಾಲೆಗೆ 5ನೇ ತರಗತಿಗೆ ಸೇ–ರಿಸಿದರು. ನಮ್ಮ ಮನೆಯಿಂದ ಸುಮಾರು ಒಂದು ಕಿ.ಲೋ. ಮೀಟರ್ ದೂರದಲ್ಲಿದೆ. ಶಾಲೆಗೆ ಸೇರಿಕೊಂಡ ಮೊದಲು ಅಜ್ಜಿಯೇ ವಾಹನ ನಿಬಿಡವಾಗಿರುವ ಎರಡು ಮುಖ್ಯ ರಸ್ತೆಯನ್ನು ದಾಟಿಸಿ ಶಾಲೆಗೆ ಬಿಡುತ್ತಿದ್ದರು. ಎರಡು ತಿಂಗಳು ಕಷ್ಟಪಟ್ಟು ಶಾಲೆಗೆ ಹೋದೆ. ಆದ–ರೆ ನನಗೆ ಶಾಲೆಯಲ್ಲಿ ಹೇಳಿಕೊಟ್ಟಿರುವುದು ಯಾವುದೂ ತಲೆಗೆ ಹತ್ತುತ್ತಿರಲಿಲ್ಲ. ಒಂದೆಡೆ ವಾಹನದ ದಟ್ಟಣೆ ಇರುವ ರಸ್ತೆ, ಇನ್ನೊಂದೆಡೆ ಕಲಿಕೆಯಲ್ಲಿನ ನಿರಾಸಕ್ತಿಯಿಂದ ಮನೆಯಲ್ಲಿಯೇ ಉಳಿದಿದ್ದೇನೆ. ಮನೆಯ ಹತ್ತಿರದ ಮಕ್ಕಳು ಶಾಲೆಗೆ ಹೋಗಲು ತಯಾರಾದಾಗ ಶಾಲೆಗೆ ಹೋಗಬೇಕೆನ್ನಿಸುತ್ತದೆ. ಆದರೆ ಒಬ್ಬಳೇ ರಸ್ತೆ ಹೇಗೆ ದಾಟಲಿ? ಇದಕ್ಕೆ ಪರಿಹಾರವಿದೆಯೇ?

## ಕೇಸ್ಟಡಿ 6

### ಜಯಲಕ್ಷ್ಮಿ: ಬಾಕಿಯಿರುವ ಶಾಲಾ ಶುಲ್ಕ ಪಾವತಿ ಮಾಡದ ಕಾರಣಕ್ಕೆ ಶಾಲಾಡಳಿತ ಮಕ್ಕಳನ್ನು ಶಾಲೆಯಲ್ಲೂ ಇರಲು ಬಿಡದೆ, ಪರೀಕ್ಷೆ ಬರೆಸಲು ನಿರಾಕರಿಸುತ್ತಿದೆ.

ನನ್ನ ಹೆಸರು ಜಯಲಕ್ಷ್ಮಿ. ಬೆಂಗಳೂರಿನ 136 ವಾರ್ಡ್ ವ್ಯಾಪ್ತಿಯಲ್ಲಿರುವ ಜನತಾ ಕಾಲೋನಿಯಲ್ಲಿ ವಾಸವಾಗಿದ್ದೇನೆ, ನನ್ನ ಗಂಡ ಸುಂದರ್‌ರಾಜ್ 48 ವರ್ಷ. ನಮಗೆ ಇಬ್ಬರು ಮಕ್ಕಳು. ಮೊದಲನೆಯವಳು ಶಿಲ್ಪ 14 ವರ್ಷ. ಎರಡನೆಯ ಮಗಳು ವೈಷ್ಣವಿ. ನನಗೆ ಆರೋಗ್ಯ ಸಮಸ್ಯೆಯಿದೆ. ನಾನು ಚೌಲ್ಟ್ರೀ ಕಾರ್ಮಿಕಳು. ಕೊರೋನಾ ಲಾಕ್ಡೌನ್ ಸಮಯದಲ್ಲಿ ಯಾವುದೇ ಚೌಲ್ಟ್ರಿಗಳಲ್ಲಿ ಸಭೆ ಸಮಾರಂಭಗಳು ನಡೆಯದ ಕಾರಣ ನನಗೂ ಯಾವುದೇ ಕೆಲಸ ಸಿಗಲಿಲ್ಲ. ಕೋವಿಡ್ ಸರ್ಕಾರದ ಪರಿಹಾರವಾಗಲಿ ನಮ್ಮಂತಹ ಕೆಲಸಗಾರ–ರಿಗೆ ಸಿಗಲಿಲ್ಲ. ತಿಂಗಳಲ್ಲಿ 2 ದಿನ ಮಾತ್ರ ಕೆಲಸಕ್ಕೆ ಬನ್ನಿ ಎಂದು ಕರೆದರೂ ಆರೋಗ್ಯ ಸರಿಯಿಲ್ಲದ ಕಾರಣ ಕೆಲಸಕ್ಕೆ ಹೋಗಲು ಸಾಧ್ಯವಾಗಲಿಲ್ಲ. ನನ್ನ ಗಂಡ ಕಸದಲ್ಲಿ ಪ್ಲಾಸ್ಟಿಕ್ ಬೇರ್ಪಡಿಸುವ ಕೆಲಸ ಮಾಡುತ್ತಿದ್ದು ಅವರಿಗೆ ಪ್ರತಿದಿನ ರೂ.300/– ಕೂಲಿ ಸಿಗುತ್ತಿದ್ದೆ. ಅದರಲ್ಲಿಯೇ ನಮ್ಮ ಜೀವನ ಸಾಗಬೇಕಿದೆ. ಕೋವಿಡ್ ಸಮಯದಲ್ಲಿ ಇಬ್ಬರೂ ಕೆಲಸ ಕಳೆದುಕೊಂಡು ಸಾಲಕ್ಕೆ ಮೊರೆಹೋದೆವು. ಮಕ್ಕಳ ಹಸಿವು, ಆರೋಗ್ಯ, ಬಾಡಿಗೆ ಎಲ್ಲವೂ ನಿಭಾಯಿಸಲು ಬಹಳ ಕಷ್ಟವಾಯಿತು. ಹೀಗಾಗಿ 4 ಸಲ ನಾವು

ರೂ.5000/– ಸಾಲ ತೆಗೆದುಕೊಂಡಿದ್ದೇವೆ. ಪ್ರತೀವಾರ ರೂ.1000/–ದಂತೆ ಸಾಲ ಮರುಪಾವತಿ ಮಾಡಬೇಕಿತ್ತು. ಪ್ರತೀವಾರ ರೂ.4000/– ಈ ಸಾಲಗಳನ್ನು ತೀರಿಸಲು ಹಣ ಹೊಂದಾಣಿಕೆ ಮಾಡಬೇಕಾಗಿತ್ತು. ಒಟ್ಟಾರೆ ಚಕ್ರಬಡ್ಡಿ ಎಲ್ಲ ಸೇರಿ ರೂ.30000/–ದೊಡ್ಡದಾದ ಸಾಲವೇ ನಾವು ಕಟ್ಟಬೇಕಾದ ಪರಿಸ್ಥಿತಿ ಎದುರಾಯಿತು. ಈ ಸಾಲ ತೀ–ರಿಸಲೆಂದೆ ರೂ.30000/– ಭಾರತ್ ಫೈನಾನ್ಸ್‌ನಲ್ಲಿ ಪಡೆದೆ. ಅದಕ್ಕೆ ರೂ.650 ಪ್ರತೀ ವಾರ ಕಟ್ಟಬೇಕಾಗಿದೆ. ಕೋವಿಡ್ ಎದುರಾಗುವ ಮೊದಲು ನನ್ನ ಇಬ್ಬರೂ ಮಕ್ಕಳು ಮನೆಯ ಸಮೀಪದ ವಿನಾಯಕ ನಗರದಲ್ಲಿರುವ ಕಾವೇರಿ ಆಶ್ರಮ ಶಾಲೆ ಶಿಕ್ಷಣ ಪಡೆಯುತ್ತಿದ್ದರು. ಪ್ರತೀ ಮಗುವಿಗೆ ರೂ.5000/– ಹಣ ಕಟ್ಟುತ್ತಿದ್ದೆವು. ಕೋವಿಡ್ ಸಮಯದಲ್ಲಿ ಮಕ್ಕಳಿಗೆ ಆನ್ಲೈನ್ ಶಿಕ್ಷಣ ಪಡೆಯಲು ಸಾಧ್ಯವಾಗಿಲ್ಲ. ನಮ್ಮಲ್ಲಿ ಸ್ಮಾರ್ಟಫೋನು ಇರಲಿಲ್ಲ. ಅಕ್ಟೋಬರ್ ತಿಂಗಳಲ್ಲಿ ಶಾಲೆ ಆರಂಭವಾದಾಗ, ನಮ್ಮ ಮಕ್ಕಳನ್ನು ಮತ್ತೆ ಶಾಲೆಗೆ ಸೇರಿಸಲು ಹರಸಾಹಸ ಮಾಡಬೇಕಾಯಿತು. ಶಾಲಾಡಳಿತವು ನೀವು 2020–21ರ ಸಾಲಿನ ಶಾಲಾ ಶುಲ್ಕ ಪಾವತಿಸಿ, ನಂತರ ಮಕ್ಕಳನ್ನು ಶಾಲೆಗೆ ದಾಖಲು ಮಾಡುತ್ತೇವೆ ಎಂದರು. ಈ ಕಾರಣಕ್ಕಾಗಿ ಮತ್ತೊಮ್ಮೆ ರೂ.5000/– ಸಾಲ ಮಾಡಿ ರೂ.5000/–ದಂತೆ ಇಬ್ಬ–ರಿಗೂ ಕಟ್ಟಿದ್ದೇವೆ. ಈಗ ನನ್ನ ಮಗಳು ಶಿಲ್ಪ 8ನೇ ತರಗತಿಯಲ್ಲಿ ಓದುತ್ತಿದ್ದು, ಆಕೆಯ ಶಾಲಾ ಶುಲ್ಕ ರೂ.7000/– ನಾನು ಇನ್ನೂ ಪಾವತಿಸಿಲ್ಲ ಎಂಬ ಕಾರಣಕ್ಕೆ ಮಕ್ಕಳನ್ನು ಶಾಲೆಯಿಂದ ಮನೆಗೆ ವಾಪಾಸ್ಸು ಕಳುಹಿಸುತ್ತಿದ್ದಾರೆ. ಅದಲ್ಲದೆ. ಶಾಲಾ ಶುಲ್ಕ ಕಟ್ಟದೆ ಪರೀಕ್ಷೆ ಬರೆಸುವುದಿಲ್ಲ ಎಂದು ಬೆದರಿಸಿದ್ದಾರೆ. ಮಕ್ಕಳು ಅಳುತ್ತಾ ಮಾನಸಿಕ ವೇದನೆ ಪಡುತ್ತಿರುವುದನ್ನು ನೋಡಿದರೆ ಮಕ್ಕಳನ್ನು ಶಾಲೆಗೆ ಕಳುಹಿಸುವುದೇ ಬೇಡ ಎಂದೆನಿಸುತ್ತಿದೆ.

## ಕೇಸ್ಟಡಿ 7

### ಸುಜಾತ: ಶಾಲಾ ಶುಲ್ಕ ಕಟ್ಟಲು ಆರ್ಥಿಕವಾಗಿ ಕಷ್ಟವಾಗಿದೆ. ಹೀಗಾಗಿ ಮಗು ಮನೆಯಲ್ಲಿಯೇ ಇದೆ.

ನನ್ನ ಹೆಸರು ಸುಜಾತ, ನನಗೆ 29 ವರ್ಷ. ಬೆಂಗಳೂ–ರಿನ ಜಾಲಿಮೊಹಲ್ಲ ಸ್ಲಂನಲ್ಲಿ ವಾಸವಾಗಿದ್ದೇನೆ. ನನ್ನ ಗಂಡ ದಿಲೀಪ್, ಲೋಡಿಂಗ್ ಅಂಡ್ ಅನ್ ಲೋಡಿಂಗ್ ಕೆಲಸ ಮಾಡುತ್ತಿದ್ದಾರೆ. ಈ ಹಿಂದೆ ಕೋವಿಡ್ ಲಾಕ್ಡೌನ್ ಮೊದಲು ನನ್ನ ಗಂಡನಿಗೆ ಪ್ರತಿದಿನ ಕೂಲಿ 350 ರೂ. ಸಿಗುತ್ತಿತ್ತು. ನಾನು ಮನೆಯಲ್ಲಿ ಮಕ್ಕಳನ್ನು ನೋಡಿಕೊಳ್ಳುತ್ತಿದ್ದೆ. ನನಗೆ ಎರಡು ಮಕ್ಕಳು. ದೊಡ್ಡ ಮಗ ಸಚಿನ್ 8 ವರ್ಷ, ಎರಡನೆಯ ಮಗಳು ಲಿಯಾಶ್ರೀ. 4 ವರ್ಷ ಅಂಗನವಾಡಿಯಲ್ಲಿ ಓದುತ್ತಿದ್ದಾಳೆ. ಕೋವಿಡ್ ಬಂದ ವರ್ಷದಲ್ಲಿ ಚಾಮರಾಜಪೇಟೆಯಲ್ಲಿರುವ ಕ್ರೆಸೆಂಟ್ ಶಾಲೆಯಲ್ಲಿ ನನ್ನ ಮಗ ಸಚಿನ್‌ನನ್ನು ಎಲ್. ಕೆ.ಜಿ.ಗೆ ದಾಖಲಿಸಿದ್ದೆ. ಎಲ್.ಕೆ.ಜಿ. ಓದಿ ಆದ ಮೇಲೆ ಕೋವಿಡ್‌ನಿಂದಾಗಿ ಶಾಲೆಯನ್ನು ಮುಚ್ಚುವುದು ಮತ್ತು ತೆಗೆಯುವುದು ಮಾಡುತ್ತಿದ್ದರಿಂದ, ಆನ್ಲೈನ್ ಮುಖಾಂತರ ಪಾಠ ಕಲಿಯಬೇಕು ಎಂದು ಅನೇಕ ನಿಯಮಗಳು ಬಂದವು. ನಾವು ವಾಸಿಸುತ್ತಿರುವುದು ಸಣ್ಣ ಗುಡಿಸಲು ಮನೆಯಲ್ಲಿ. ಕೋವಿಡ್ ಸಂದರ್ಭದಲ್ಲಿ ನನ್ನ ಗಂಡ ಕೂಡ ಕೆಲಸ ಕಳೆದುಕೊಂಡಿದ್ದರು. ನಮ್ಮಲ್ಲಿ ಸ್ಮಾರ್ಟಫೋನು ಇರಲಿಲ್ಲ. ಇದರಿಂದಾಗಿ ನನ್ನ ಮಗ ಶಾಲಾ ಶಿಕ್ಷಣದಿಂದ 2 ವರ್ಷ ಸಂಪೂರ್ಣವಾಗಿ ಹೊರಗುಳಿಯುವಂತಾಯಿತು. ಈಗ ನನ್ನ ಮಗನಿಗೆ 8 ವರ್ಷ, ಇನ್ನೂ ಶಾಲಾ ಶುಲ್ಕ ಕಟ್ಟಲು ಸಾಧ್ಯವಾಗದೆ ಶಾಲೆಗೆ ಸೇರಿಸಲಿಲ್ಲ. ಈಗ ಅವನು 2ನೇ ತರಗತಿ ಓದುತ್ತಿರಬೇಕಾಗಿತ್ತು. ಮಗು ಮನೆಯಲ್ಲಿಯೇ ಇದೆ. ನನ್ನ ಗಂಡನಿಗೆ ಈಗ ಕೆಲಸ ಸಿಕ್ಕಿದರೂ ಅವರಿಗೆ ದಿನಕ್ಕೆ ರೂ.200/– ಮಾತ್ರ ಸಿಗುತ್ತಿದೆ. ಅದರಲ್ಲಿ ನಮಗೆ ಊಟ, ಸಾಲ ಮತ್ತು ಆಸ್ಪತ್ರೆ ಖರ್ಚಿಗೆ ಹಣ ಸರಿಯಾಗುತ್ತಿದೆ. ಅವನಿಗೆ ವರ್ಷಕ್ಕೆ 21000/–ರೂ. ಎಲ್.ಕೆ.ಜಿ.ಯಲ್ಲಿಯೇ ಶಾಲಾ ಶುಲ್ಕ ಕಟ್ಟಬೇಕಿತ್ತು. ಆದರೆ ನಾವು ಅರ್ಧಾಂಶ ಶಾಲಾ ಶುಲ್ಕ ಕಟ್ಟಿದ್ದೆವು. ಈಗ ನೀವು ಆದಷ್ಟು ಬೇಗ ಶಾಲೆಯ ಬಾಕಿ ಹಾಗೂ ಪ್ರಸ್ತುತ ಶಾಲಾ ಶುಲ್ಕ ಕೊಟ್ಟು ಶಾಲೆಗೆ ಬಂದು ಮಗುವನ್ನು ಸೇರಿಸಿ ಎಂದು ಶಾಲೆಯಲ್ಲಿ ಹೇಳುತ್ತಿದ್ದಾರೆ. ನಮ್ಮಲ್ಲಿ ಅಷ್ಟು ಹಣ ಇಲ್ಲ. ಶಾಲೆಯಲ್ಲಿ ಶುಲ್ಕ ಕಟ್ಟಲು ಆಗದ ಮಕ್ಕಳನ್ನು ಎಲ್ಲರೆದುರು ಬೈಯುವುದುರಿಂದ ನನ್ನ ಮಗನು ಶಾಲೆಗೆ ಹೋಗಲು ಹೆದರುತ್ತಿದ್ದಾನೆ.

## ಕೇಸ್ಟಡಿ 8

### ವಿಜಯ: ಶಾಲಾ ಶುಲ್ಕ ಪಾವತಿ ಮಾಡದ ಇತರ ಎಲ್ಲಾ ಮಕ್ಕಳನ್ನು ಶಾಲೆಯಿಂದ ಹೊರಗೆ ನಿಲ್ಲಿಸುವುದರಿಂದ ಮಗಳಿಗೆ ಅವಮಾನವಾಗಿದೆ. ಶಾಲೆಯೆಂದರೆ ಭಯ ಪಡುತ್ತಿದ್ದಾಳೆ.

ನನ್ನ ಹೆಸರು ವಿಜಯ. ನನಗೆ 27 ವರ್ಷ. ನಾನು ಬೆಂಗಳೂರಿನ ಜಾಲಿಮೊಹಲ್ಲ ಏರಿಯಾದಲ್ಲಿ ವಾಸವಾಗಿದ್ದೇನೆ. ನನ್ನ ಗಂಡನ ಹೆಸರು ವಿನೋದ್, ಅವರಿಗೆ 35 ವರ್ಷ. ಅದೇ ಜಾಲಿಮೊಹಲ್ಲ ಏರಿಯಾದಲ್ಲಿ ಲೋಡಿಂಗ್ ಅನ್‌ಲೋಡಿಂಗ್ ಕೆಲಸ ಮಾಡುತ್ತಿದ್ದಾರೆ. ಕೋವಿಡ್ ಲಾಕ್ಡೌನ್ ಮೊದಲು ಪ್ರತಿದಿನ ರೂ. 350–400 ದುಡಿಯುತ್ತಿದ್ದರು. ಕೋವಿಡ್ ನಂತರ ವಾರದಲ್ಲಿ 3 ದಿನ ಮಾತ್ರ ಕೆಲಸ ಸಿಗುತ್ತಿದೆ. ಅದು ನಮ್ಮ ಊಟದ ಖರ್ಚಿಗೆ

ಮತ್ತು ಶಾಲೆ ಸೇರಿಸಲು ಪಡೆದ ಸಾಲವನ್ನು ತೀ–ರಿಸಲು ನಮಗೆ ಸರಿಯಾಗಿದೆ. ನನಗೆ ಮೂರು ಮಕ್ಕಳು. ಮೊದಲನೆಯ ಮಗಳು ಶಾಲಿನಿ 9 ವರ್ಷ. ಎರಡನೇಯ ಮಗ ತರುಣ್ 7 ವರ್ಷ ಮತ್ತು ಮೂರನೇಯ ಮಗಳು ನಿತ್ಯಶ್ರೀ 4 ವರ್ಷ. ಮೊದಲನೆಯ ಮಗಳನ್ನು 2019ರಲ್ಲಿ ಚಾಮರಾಜಪೇಟೆಯಲ್ಲಿರುವ ಸಂತ ತೇರೆಸಮ್ಮನವರ ಶಾಲೆಯಲ್ಲಿ 1ನೇ ತರಗತಿಯಲ್ಲಿ ಓದಿಸುತ್ತಿದ್ದೆವು. 2019ರಲ್ಲಿ ಕೋವಿಡ್ ಬಂದಿದ್ದುದರಿಂದ ಆ ವರ್ಷ ಪರೀಕ್ಷೆ ಕೂಡ ಮಕ್ಕಳಿಗೆ ಇರಲಿಲ್ಲ. ಅವಳನ್ನು ಹಾಗೆಯೇ ಪಾಸ್ ಮಾಡಿರುತ್ತಾರೆ. ಎರಡನೇಯ ತರಗತಿಗೆ ನನ್ನ ಮಗಳಿಗೆ ಆನ್‌ಲೈನ್ ಶಿಕ್ಷಣ ನೀಡುತ್ತೇವೆಂದು ಶಾಲಾ ಶಿಕ್ಷಕರು ಹೇಳಿದಾಗ ನಮ್ಮಲ್ಲಿ ಸ್ಮಾರ್ಟ್‌ಫೋನ್ ಇರಲಿಲ್ಲ. ಮೊಬೈಲ್ ಖರೀದಿ ಮಾಡಲು ಆಗಿರಲಿಲ್ಲ. ಆದುದರಿಂದ ಅವಳು 2ನೇ ತರಗತಿ ಆನ್ಲೈನ್‌ನಲ್ಲಿ ಕೂಡ ಓದಲಿಲ್ಲ. 2021ರಲ್ಲಿ ಶಾಲೆಯಲ್ಲಿ ಅವಳನ್ನು 3ನೇ ತರಗತಿಯಲ್ಲಿ ಸೇ–ರಿಸಲು ಹೇಳಿದರು. ಫೀಸ್ ನಿಧಾನವಾಗಿ ಕಟ್ಟಿ ಎಂದು ಹೇಳಿದುದ್ದರಿಂದ ಶಾಲೆಗೆ ಕಳುಹಿಸಿದೆ. ಶುಲ್ಕ 2500/– ಎಂದು ಹೇಳಿದರು. ನಾನು 2 ತಿಂಗಳು ತಲಾ ರೂ.500 ಕಟ್ಟಿರುತ್ತೇನೆ. ಅಷ್ಟರಲ್ಲಿ ಪರೀಕ್ಷೆ ಬಂದಿದ್ದುರಿಂದ, ನನ್ನ ಮಗಳನ್ನು ಪರೀಕ್ಷೆ ಬರೆಸುತ್ತಿಲ್ಲ. ನನ್ನ ಮಗಳನ್ನು ಮತ್ತು ಅವಳೊಂದಿಗೆ ಶಾಲಾ ಶುಲ್ಕ ಪಾವತಿ ಮಾಡದ ಇತರ ಎಲ್ಲಾ ಮಕ್ಕಳನ್ನು ಶಾಲೆಯಿಂದ ಹೊರಗೆ ನಿಲ್ಲಿಸುವುದು ಅವಳಿಗೆ ಅವಮಾನವಾಗಿದೆ. ಶಾಲೆಗೆ ಹೋಗು ಎಂದರೆ ಭಯ ಪಡುತ್ತಿದ್ದಾಳೆ. ಎರಡನೆಯ ಮಗನನ್ನು ಸರ್ಕಾರಿ ಶಾಲೆಯಲ್ಲಿ ಸೇರಿಸಿದ್ದೇನೆ. ಮೂರನೇಯ ಮಗು ಅಂಗನವಾಡಿಯಲ್ಲಿ ಓದುತ್ತಿದ್ದಾಳೆ.

## ಕೇಸ್ಟಡಿ 9

### ಗಾಯತ್ರಿ: ಮಕ್ಕಳ ಶುಲ್ಕ ಕಟ್ಟಿ, ಮಕ್ಕಳಿಗೆ ಪರೀಕ್ಷೆ ಬರೆಸುತ್ತೇವೆ ಎಂದು ಶಾಲಾಡಳಿತ ಹೇಳುತ್ತಿದೆ

ನನ್ನ ಹೆಸರು ಗಾಯತ್ರಿ ನನಗೆ 28ವರ್ಷ. ನಾನು ಬೆಂಗಳೂರಿನ ಭಕ್ಷಿಗಾರ್ಡನ್ ಏರಿಯಾದಲ್ಲಿ ವಾಸವಾಗಿದ್ದೇನೆ. ನನ್ನ ಗಂಡ ಅಪ್ಪು. ಅವರು ಸೀರಿಯಲ್ ಸೆಟ್ ಹಾಕುವ ಕೆಲಸ ಮಾಡುತ್ತಿದ್ದರು. ಇದರಿಂದ ನಮಗೆ ತಿಂಗಳಿಗೆ ರೂ.15000 ಸಂಪಾದನೆ ಬರುತ್ತಿತ್ತು. ನನಗೆ 3 ಮಕ್ಕಳು. ದೊಡ್ಡವನು ಸಂತೋಷ್ ವಯಸ್ಸು 11, ಎರಡನೆಯ ಮಗಳು ಅಕ್ಷಯ 8 ವರ್ಷ, ಮತ್ತು ಮೂರನೆಯ ಮಗ ವಸಂತ್ 7 ವರ್ಷ. ಮೊದಲನೆಯ ಮಗ 5ನೇ ತರಗತಿಯಲ್ಲಿ ಪ್ರೆಸಿಡೆನ್ಸಿ ಶಾಲೆಯಲ್ಲಿ ಆರ್.ಟಿ.ಇ. ಸೀಟು ಪಡೆದು ದಾಖಲಾಗಿದ್ದಾನೆ. ಆರ್.ಟಿ.ಇ. ಯೋಜನೆಯಲ್ಲಿ ಇದ್ದರೂ ಅವನಿಗೆ ಶಾಲೆಯಲ್ಲಿ ಯೂನಿಫಾರಂಗೆ ರೂ.5000/–, ಪುಸ್ತಕ– ರೂ.6500/– ಹಣ ಕಟ್ಟಬೇಕಾಗಿತ್ತು. 2020ರ ಸಾಲಿನಲ್ಲಿ ಆನ್‌ಲೈನ್ ತರಗತಿ ನಡೆಯದಿದ್ದರೂ ರೂ.5000/– ಕಟ್ಟಬೇಕಾಗಿ–ತ್ತು. ಆದರೆ ನನಗೆ ಆ ಹಣ ಕಟ್ಟಲು ಸಾಧ್ಯವಾಗಿಲ್ಲ. ನನ್ನ ಉಳಿದ 2 ಮಕ್ಕಳು ಕ್ರೆಸೆಂಟ್ ಶಾಲೆಯಲ್ಲಿ ಓದುತ್ತಿದ್ದಾರೆ. ಅವರಿಗೆ ತಲಾ ರೂ.10,000/– ಕಟ್ಟಬೇಕು. ಇದರಿಂದ ಬಡ್ಡಿಗೆ ಹಣ ಪಡೆದು ಬಹಳ ಕಷ್ಟಪಡುತ್ತಿದ್ದೇನೆ. ಕೋವಿಡ್ ಬಂದ ನಂತರ ಸಮಾರಂಭಗಳು ಕಡಿಮೆಯಾಗಿದ್ದು, ಯಾವುದೆ ಕೆಲಸ ಇಲ್ಲ. ತಿಂಗಳಿಗೆ ರೂ.5000 ತರುವುದು ಕಷ್ಟವಾಗಿದೆ. ನಾನು ಒಬ್ಬರ ಮನೆಗೆ ಮನೆಕೆಲಸಕ್ಕೆ ಹೋಗುತ್ತಿದ್ದೆ. ಅಲ್ಲೂ ಕೋವಿಡ್ ಬಂದ ಮೇಲೆ ಸ್ಲಂನವರಿಂದ ಕೋವಿಡ್ ಹೆಚ್ಚಾಗಿ ಬರುತ್ತಿದೆ, ಇನ್ನು ಮುಂದೆ ಕೆಲಸಕ್ಕೆ ಬರಬೇಡಿ ಎಂದು ಬಿಟ್ಟರು. ಅವರು ನನಗೆ ರೂ.3000 ಸಂಬಳ ಕೊಡುತ್ತಿದ್ದರು. ಈಗ ಅದು ಇಲ್ಲ. ಮಗುವನ್ನು ಶಾಲೆಗೆ ಕಳುಹಿಸಿ ಎಂದು ಒತ್ತಾಯ ಮಾಡಿ, “ಹಿಂದಿನ ಬಾಕಿ ಮತ್ತು ಈಗಿನ ಶುಲ್ಕ ಎಲ್ಲವನ್ನೂ ಸೇರಿಸಿ ಕಟ್ಟಿ, ಇಲ್ಲದಿದ್ದರೆ ಪರೀಕ್ಷೆಗೆ ಕೂರಲು ಬಿಡುವುದಿಲ್ಲ” ಎಂದು ಹೇಳಿ ಮಗುವನ್ನು ಮಾತ್ರವಲ್ಲದೆ, ದೂರವಾಣಿ ಮುಖಾಂತರ ನನಗೂ ಹಿಂಸೆ ಮಾಡುತ್ತಿದ್ದಾರೆ.

## ಕೇಸ್ಟಡಿ 10

### ರಾಜೇಶ್ವರಿ

ನನ್ನ ಹೆಸರು ರಾಜೇಶ್ವರಿ, 32 ವರ್ಷ. ನಾನು ಬೆಂಗಳೂರಿನ ಭಕ್ಷಿಗಾರ್ಡನ್ ಏರಿಯಾದಲ್ಲಿ ವಾಸವಾಗಿದ್ದೇನೆ. ನನ್ನ ಗಂಡನ ಹೆಸರು ರಾಜೇಶ್. ನಾನು ಛತ್ರದ ಕೆಲಸ ಮಾಡುತ್ತಿದ್ದೇನೆ. ನನಗೆ 3 ಮಕ್ಕಳು. ಮೊದಲನೆಯ ಮಗಳು ಹೇಮಲತ 10 ವರ್ಷ, ಹರ್ಷಿತ್ 8 ವರ್ಷ ಮತ್ತು ಮೂರನೆಯ ಮಗ ಹೇಮಂತ್ 6 ವರ್ಷ. ನನ್ನ ಗಂಡ ಸರಿಯಾಗಿ ಮನೆಗೆ ಬರುವುದಿಲ್ಲ. ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲ. ಕೋವಿಡ್‌ಗೆ ಮುಂಚೆ ನನಗೆ ಸ್ವಲ್ಪ ಕೆಲಸ ಸಿಗುತ್ತಿತ್ತು. ಈಗ ನನಗೂ ಕೆಲಸ ಸಿಗುತ್ತಿಲ್ಲ. ಹೇಮಲತಾಳನ್ನು 2019ರಲ್ಲಿ ಕ್ರೆಸೆಂಟ್ ಶಾಲೆಯಲ್ಲಿ 1ನೇ ತರಗತಿಗೆ 12000 ರೂ. ಶುಲ್ಕ ಪಾವತಿ ಮಾಡಿ ಸೇರಿಸಿದ್ದೆ. ಹರ್ಷಿತ್‌ನನ್ನು ಎಲ್.ಕೆ.ಜಿ.ಯಲ್ಲಿ ಸೇರಿಸಿದ್ದೆ. ಕೋವಿಡ್ ಬಂದ ನಂತರ ಮಕ್ಕಳು ಯಾರೂ ಶಾಲೆಗೆ ಹೋಗಲಿಲ್ಲ. ಆನ್ಲೈನ್ ಶಿಕ್ಷಣನೂ ಪಡೆದಿಲ್ಲ. 2022ರಲ್ಲಿ ಶಾಲೆ ಪ್ರಾರಂಭವಾದ ಮೇಲೆ ಬಂದು ಮಕ್ಕಳನ್ನು ಶಾಲೆಗೆ ಸೇರಿಸಿ ಎಂದು ಹೇಳಿದರು. ಅದರಂತೆ ಶಾಲೆಗೆ ಸೇರಿಸಿದೆ. ಸೇ–

ರಿಸಿದ ನಂತರ ಈಗ ಶುಲ್ಕ ಕಟ್ಟಿ ಎಂದು ತುಂಬ ತೊಂದರೆ ಕೊಡುತ್ತಿದ್ದಾರೆ. ಮಕ್ಕಳನ್ನು ಶಾಲೆಯಲ್ಲಿ ಬೈಯುವುದು, ನೀವು ಶುಲ್ಕ ಕಟ್ಟದಿದ್ದರೆ ನಿಮಗೆ ಕಡಿಮೆ ಅಂಕ ಕೊಡುವುದಾಗಿ ಹೇಳಿದರು. ನನಗೂ ಕೆಲಸವಿಲ್ಲ. ಊಟಕ್ಕೆ ಬಹಳ ಕಷ್ಟ ಪಡುತ್ತಿರುವಾಗ ನಾನು ಹೇಗೆ ಶುಲ್ಕ ಕೊಡುವುದು ಎಂದು ಮಕ್ಕಳನ್ನು ಕರೆದುಕೊಂಡು ಬಂದು ಈಗ ಸರ್ಕಾರಿ ಶಾಲೆಯಲ್ಲಿ ಸೇರಿಸಿದ್ದೇನೆ. ಮೊದಲು ಆಂಗ್ಲ ಮಾಧ್ಯಮದಲ್ಲಿ ಓದಿ, ಈಗ ಕನ್ನಡ ನನಗೆ ಅರ್ಥವಾಗುತ್ತಿಲ್ಲ ಎಂದು ಇಬ್ಬರು ಮಕ್ಕಳು ಮನೆಯಲ್ಲಿದ್ದಾರೆ. ಅಲ್ಲೂ ಸರಿಯಾಗಿ ಶಾಲೆಗೆ ಹೋಗುವುದಿಲ್ಲ. ನಾನು ನನ್ನ ಕುಟುಂಬದೊಂದಿಗೆ ಒಂದು ಸಣ್ಣ ಮನೆಯಲ್ಲಿ ತಿಂಗಳ ಬಾಡಿಗೆ ರೂ.2000/– ಕಟ್ಟಿ ಬದುಕುತ್ತಿದ್ದೇನೆ. ಈಗ ಅಲ್ಲೂ ಬಾಡಿಗೆ ಕಟ್ಟಲಾಗದೆ, ಮನೆ ಬಾಡಿಗೆಗೆ ಕೊಟ್ಟ ಅಡ್ವಾನ್ಸ್ ಹಣವನ್ನು ಕಳೆದುಕೊಂಡು ವಾಪಸ್ಸು ಕಳುಹಿಸಿಬಿಟ್ಟರು. ಇದರಿಂದ ನನ್ನ ಮಕ್ಕಳು ಬಹಳ ಕಷ್ಟಪಡುತ್ತಿದ್ದಾರೆ. ನಾನು ಬೀದಿಯಲ್ಲೇ ಬದುಕಬೇಕಾದ ಪರಿಸ್ಥಿತಿಯಿದೆ.

## ಕೇಸ್ಟಡಿ 11

### ಸುಬ್ರಮಣಿ: ಫೋನ್ ಇಲ್ಲದ ಕಾರಣ ಅವನು ಓದಲಾಗಲಿಲ್ಲ. ಅದಕ್ಕೂ ಸೇರಿಸಿ ಶಾಲಾ ಶುಲ್ಕ ಕಟ್ಟಿ

ನನ್ನ ಹೆಸರು ಸುಬ್ರಮಣಿ. ನನಗೆ 52 ವರ್ಷ ವಯಸ್ಸಾಗಿದೆ. ನಾನು ಬೆಂಗಳೂರಿನ ಜಾಲಿಮೊಹಲ್ಲ ಏರಿಯಾದಲ್ಲಿ ವಾಸವಾಗಿದ್ದೇನೆ. ನನಗೆ 35 ವರ್ಷದ ವೇಲು ಎಂಬ ಮಗನಿದ್ದಾನೆ. ಅವನು ಮದುವೆಯಾಗಿ ಒಂದು ಮಗು ಹುಟ್ಟಿದ ಮೇಲೆ, ಸೊಸೆ ನನ್ನ ಮಗನನ್ನು ಮತ್ತು ಮಗುವನ್ನು ಬಿಟ್ಟು ಬೇರೆ ಮದುವೆ ಆಗಿರುತ್ತಾಳೆ. ಇದರಿಂದ ನನ್ನ ಮಗನ ಆರೋಗ್ಯ ಹದಗೆಟ್ಟು, ಯಾವ ಕೆಲಸವನ್ನು ಮಾಡಲಾಗದೆ ಮನೆಯಲ್ಲೇ ಕುಳಿತಿರುತ್ತಾನೆ. ಇದರಿಂದ ಚಿಕ್ಕ ವಯಸ್ಸಿನಿಂದ ನನ್ನ ಮೊಮ್ಮಗನನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ. ಅವನ ಹೆಸರು ಪ್ರವೀಣ್. 11 ವರ್ಷ ವಯಸ್ಸಾಗಿದೆ. ಅವನಿಗೆ ಆರ್.ಟಿ.ಇ. ಯೋಜನೆಯಡಿ ಸೀಟ್ ಸಿಕ್ಕಿದ್ದರೂ, ಬೇರೆ ಎಲ್ಲಾ ಖರ್ಚಿಗೆ ಪ್ರತಿ ವರ್ಷ ರೂ.10,000/– ಶಾಲೆಗೆ ಹಣ ಕಟ್ಟಬೇಕಿದೆ. ಅವನು ಕ್ರೆಸೆಂಟ್ ಶಾಲೆಯಲ್ಲಿ ಓದುತ್ತಿದ್ದಾನೆ. ನನ್ನ ಆರೋಗ್ಯ ಕೂಡ ಸರಿ ಇಲ್ಲ. ನನಗೂ ಸರಿಯಾಗಿ ಕೆಲಸಕ್ಕೆ ಹೋಗಲು ಆಗುತ್ತಿಲ್ಲ. ಶಾಲೆಯಲ್ಲಿ ಹಿಂದಿನ ವರ್ಷದ ಶುಲ್ಕವೂ ಸೇರಿ ಈ ವರ್ಷದ ಶುಲ್ಕವನ್ನು ಕಟ್ಟಲೇಬೇಕೆಂದು ಬಹಳ ಬೈಯುತ್ತಿದ್ದರು. ಇದರಿಂದ ನಾನು ಬಹಳ ಬೇಸರದಿಂದ ಮಗುವನ್ನು ಶಾಲೆಗೆ ಕಳುಹಿಸುವುದನ್ನು ನಿಲ್ಲಿಸಿರುತ್ತೇನೆ. ಈಗ ಅವನು 6ನೇ ತರಗತಿ ಉತ್ತೀರ್ಣಗೊಂಡು 7ನೇ ತರಗತಿಗೆ ಹೋಗಬೇಕು. ಕೋವಿಡ್ ಸಮಯದಲ್ಲಿ ಆನ್‌ಲೈನ್ ತರಗತಿ ಇದ್ದರೂ, ಫೋನ್ ಇಲ್ಲದ ಕಾರಣ ಅವನು ಓದಲಾಗಲಿಲ್ಲ. ಅದಕ್ಕೂ ಸೇರಿಸಿ ಶಾಲಾ ಶುಲ್ಕ ಕಟ್ಟಿ ಎಂದು ಒತ್ತಾಯಿಸುತ್ತಿದ್ದಾರೆ. ಇದರಿಂದ ನನಗೆ ಬಹಳ ನೋವಾಗಿದೆ.

## ಕೇಸ್ಟಡಿ 12

### “ಶಾಲಾ ಫೀಸು ಕಟ್ಟದೆ ಮಕ್ಕಳನ್ನು ಪರೀಕ್ಷೆಗೆ ಕೂರಿಸುವುದಿಲ್ಲವೆಂದರು”.

ನನ್ನ ಹೆಸರು ಶಾಂತಿ. ನಾನು ಬೆಂಗಳೂರಿನ ಜೆ.ಜೆ. ಆರ್.ನಗರ ವಾರ್ಡಿನ ಜನತಾ ಕಾಲೋನಿ ಏರಿಯಾದಲ್ಲಿ ವಾಸವಾಗಿದ್ದೇನೆ. ನನ್ನ ಮಗನ ಹೆಸರು ಶಿವ ವಯಸ್ಸು 30 ವರ್ಷ, ನನ್ನ ಸೊಸೆಯ ಹೆಸರು ಸಂಗೀತ 32 ವರ್ಷ. ಅವನಿಗೆ 3 ಮಕ್ಕಳಿದ್ದಾರೆ. ಮೊದಲನೆಯ ಮಗು ದೀಪ್ತಿ 9 ವರ್ಷ. ಎರಡನೆಯ ಮಗು ಕೀರ್ತಿ 4 ವರ್ಷ, ಮೂರನೆಯ ಮಗುವಿಗೆ ಈಗ 3 ತಿಂಗಳು. ಶಿವ, 2019ರಲ್ಲಿ ರೂ.2,60,000/– ಸಾಲಕ್ಕೆ ಆಟೋ ತೆಗೆದುಕೊಂಡಿರುತ್ತಾರೆ. ಅವರು ತೆಗೆದುಕೊಂಡ 6 ತಿಂಗಳಿಗೆ ಕೋವಿಡ್ ಲಾಕ್ಡೌನ್ ಇದ್ದುದರಿಂದ ಆಟೋ ಚಾಲನೆಯೂ ನಿಂತಿತು, ಸಾಲ ಕಟ್ಟಲೂ ಸಾಧ್ಯವಾಗಿಲ್ಲ. ಪ್ರತಿ ತಿಂಗಳು ಅವರು ಸಾಲವಾಗಿ ರೂ.3500/– ಕಟ್ಟಬೇಕು. ಮನೆ ಬಾಡಿಗೆ ರೂ.4500/–, ಮತ್ತು ಇತರ ಖರ್ಚುಗಳು. ಸಂಗೀತ ಮೊದಲು ಛತ್ರದ ಕೆಲಸಕ್ಕೆ ಹೋಗುತ್ತಿದ್ದರು. ಕೋವಿಡ್ ಬಂದ ಮೇಲೆ ಅವರೂ ಕೆಲಸ ಕಳೆದುಕೊಂಡರು. ದೀಪ್ತಿ ನನ್ನ ಮೊಮ್ಮಗಳು ಬಾಸ್ಟನ್ ಎಂಬ ಖಾಸಗಿ ಶಾಲೆಯಲ್ಲಿ 4ನೇ ತರಗತಿ ಓದುತ್ತಿದ್ದಳು. ಅಡ್ಮಿಷನ್ 10,000ರೂ.ಗಳು, ಮತ್ತು ತಿಂಗಳಿಗೆ ರೂ.1500/– ಕಟ್ಟಬೇಕಿತ್ತು. ಮೊದಲು ಕೆಲಸ ಇದ್ದಾಗಲೂ ಕೂಡ ಪ್ರತಿ ವರ್ಷ ಸಾಲ ಮಾಡಿ 6% ಬಡ್ಡಿಗೆ ಹಣ ಪಡೆದು ಮಕ್ಕಳನ್ನು ಶಾಲೆಗೆ ಸೇರಿಸಿರುತ್ತೇನೆ. ಈ ವರ್ಷವೂ ಮೊದಲಿಗೆ ಅರ್ಧಾಂಶ ಶುಲ್ಕ ಕಟ್ಟಿದರೂ, ಇನ್ನು ಇರುವುದು ನಿಧಾನವಾಗಿ ಕೊಡುತ್ತೇವೆ ಎಂದು ಹೇಳಿದರೂ ಶಾಲಾ ಫೀಸು ಕಟ್ಟದೆ ಮಕ್ಕಳನ್ನು ಪರೀಕ್ಷೆ ಬರೆಯಲು ಬಿಡುವುದಿಲ್ಲ ಎಂದಿದ್ದಾರೆ. ಶಾಲೆಯಲ್ಲಿ ಅವಮಾನವಾಗಬಾರದೆಂದು ಮತ್ತೆ ಸಾಲ ಮಾಡಿ ಮಗುವನ್ನು ಶಾಲೆಗೆ ಕಳುಹಿಸಿದ್ದೇನೆ.

## ಕೇಸ್ಟಡಿ 13

### "ಮಗಳು ಆನ್ಲೈನ್ ಶಿಕ್ಷಣ ಪಡೆಯದಿದ್ದರೂ ಫೀಸು ಕಟ್ಟಲೇಬೇಕೆನ್ನುವ ಒತ್ತಡ ನಮ್ಮನ್ನು ಸಾಲಗಾರರನ್ನಾಗಿ ಮಾಡಿದೆ"

ನನ್ನ ಹೆಸರು ಆಶಾ. ನನಗೆ 32 ವರ್ಷವಾಗಿದೆ. ಬೆಂಗಳೂರಿನ ಜನತಾ ಕಾಲೋನಿ ಏರಿಯಾದಲ್ಲಿ ವಾಸವಾಗಿದ್ದೇನೆ. ಮನೆಯಲ್ಲಿ ಕುಟುಂಬದ ಎಲ್ಲಾ ಜವಾಬ್ದಾರಿ ನಾನೇ ನಡೆಸಬೇಕಾಗಿದೆ. ಕೊರೋನಾ ಮೊದಲು ದಿನಕ್ಕೆ ರೂ.300 ಕೂಲಿ ಪಡೆಯುತ್ತಿದ್ದೆ. ತಿಂಗಳಲ್ಲಿ ಕೇವಲ 10 ರಿಂದ 15 ದಿನ ಮಾತ್ರ ಕೆಲಸ ಸಿಗುತ್ತಿತ್ತು. ನನ್ನ ಗಂಡನ ಹೆಸರು ರಾಜೇಶ್, 32 ವರ್ಷ. ಅವರು ಕಬ್ಬಿಣದ ಕಂಬಿಗಳನ್ನು ಕಟ್ಟುವ ಕೆಲಸ ಮಾಡುತ್ತಿದ್ದಾರೆ. ಕೋವಿಡ್ ಬಂದು ಹೋದ ಮೇಲೆ ಅವರು ಕೆಲಸವನ್ನು ಕಳೆದುಕೊಂಡಿರುತ್ತಾರೆ. ಅವರಿಗೂ ನಿರಂತರ ಕೆಲಸ ಇರುವುದಿಲ್ಲ. ವಾರಕ್ಕೆ 3 ದಿನ ಕೆಲಸ ಸಿಗುತ್ತದೆ. ನನಗೆ 1 ಮಗು, ಹೆಸರು ರಕ್ಷಿತ, ವಯಸ್ಸು 8 ವರ್ಷ ವಯಸ್ಸಾಗಿದೆ. ಅಲ್ಲೇ ಹತ್ತಿರದಲ್ಲಿರುವ ಬಾಸ್ಟನ್ ಶಾಲೆಯಲ್ಲಿ 3 ವರ್ಷದ ಹಿಂದೆ ಎಲ್.ಕೆ.ಜಿ.ಯಲ್ಲಿ ದಾಖಲಿಸಿದ್ದೇನೆ. ಈಗ ನನ್ನ ಮಗು 3ನೇ ತರಗತಿಯಲ್ಲಿ ಓದುತ್ತಿದ್ದಾಳೆ. ಅವಳಿಗೆ ಅಡ್ಮಿಷನ್‌ಗೆ ರೂ. 15000/– ಮತ್ತು ಪ್ರತಿ ತಿಂಗಳು ರೂ.1500/– ಶುಲ್ಕ ಕಟ್ಟಬೇಕಿತ್ತು. ನಾನು ಓದಲಿಲ್ಲ, ನನ್ನ ಗಂಡ ಕೂಡ ಶಾಲೆಗೆ ಹೋಗಲಿಲ್ಲ. ನನ್ನ ಮಗುವಾದರೂ ಚೆನ್ನಾಗಿ ಓದಲಿ ಎಂದು ನಾವು ಖಾಸಗಿ ಶಾಲೆಯಲ್ಲಿ ಓದಿಸಿರುತ್ತೇನೆ. ಆದರೆ ಅಲ್ಲಿ ಶುಲ್ಕ ಕಟ್ಟದಿದ್ದರೆ ಪರೀಕ್ಷೆಗೆ ಕೂರಿಸುವುದಿಲ್ಲ, ಒಟ್ಟಿಗೆ ಕಟ್ಟಿ ಎಂದು ಹೇಳುತ್ತಿದ್ದಾರೆ. ನಮಗೆ ಊಟಕ್ಕೆ ಬಹಳ ಕಷ್ಟವಾಗಿದೆ. ಕೆಲವೊಂದು ಸಲ ಮನೆ ಬಾಡಿಗೆ ಕಟ್ಟಲು ಕಷ್ಟವಾಗಿದೆ. ಅದರಲ್ಲಿ ಶುಲ್ಕ ಕಟ್ಟಲಿಲ್ಲವೆಂದು ಶಾಲೆಯಲ್ಲಿ ಬೈಯುತ್ತಾರೆಂದು ಮಗಳು ಶಾಲೆಗೆ ಹೋಗಲು ತುಂಬ ಹೆದರುತ್ತಾಳೆ. ಆನ್‌ಲೈನ್ ತರಗತಿಗೆ ಫೋನ್ ಇಲ್ಲದಿದ್ದರಿಂದ ಪಕ್ಕದ ಮನೆಯವರ ಫೋನ್ ಕೇಳಿ ಹೋಂವರ್ಕ್ ಮಾಡಿಸುತ್ತಿದ್ದೆ. ಆದರೆ ದಿನ ಕೇಳಲು ಮುಜುಗರವಾದುದರಿಂದ ಅದನ್ನು ಬಿಟ್ಟೆ. ಅವಳು ಸರಿಯಾಗಿ ಆನ್ಲೈನ್ ತರಗತಿ ಮಾಡಿಲ್ಲವಾದರೂ ಎಲ್ಲ ಫೀಸ್ ಕೇಳುತ್ತಿದ್ದಾರೆ. ಈ ಸಾಲವನ್ನು ತೀರಿಸಲು ಜನಲಕ್ಷ್ಮಿ ಹಣಕಾಸು ಸಂಸ್ಥೆಯಲ್ಲಿ ಸಾಲ ಪಡೆದು ಶುಲ್ಕ ಕಟ್ಟಿರುತ್ತೇನೆ. ಆದರೂ ರೂ. 5000/– ಬಾಕಿ ಇದೆ. ಇದೇ ನಮ್ಮ ಪರಿಸ್ಥಿತಿ.

## ಕೇಸ್ಟಡಿ 14

### ಸರ್ಕಾರಿ ಶಾಲೆಗೆ ಮಕ್ಕಳನ್ನು ದಾಖಲಾತಿ ಮಾಡೋಣ ಎಂದರೆ, ಮಕ್ಕಳ ವರ್ಗಾವಣೆ ಪತ್ರ ಪಡೆಯಲು ಎರಡು ವರ್ಷದ ಶಾಲಾ ಶುಲ್ಕ ಪಾವತಿ ಮಾಡಿ ಎನ್ನುತ್ತಿದ್ದಾರೆ.

ನನ್ನ ಹೆಸರು ಕವಿತಾ 35 ವರ್ಷ. ನಾನು 9ನೇ ತರಗತಿ ಓದಿದ್ದೇನೆ. ನಾನು ಬೆಂಗಳೂರಿನ 136ನೇ ವಾರ್ಡು ವ್ಯಾಪ್ತಿಯಲ್ಲಿ ಬರುವ ಫಾರುಕ್ಯ ನಗರದಲ್ಲಿ ವಾಸವಾಗಿದ್ದೇನೆ. ನನ್ನ ಗಂಡನ ಹೆಸರು ರವೀಂದ್ರ, 37ವರ್ಷ. 7ನೇ ತರಗತಿ ಓದಿದ್ದಾರೆ. ನಮಗೆ ಮೂರು ಮಕ್ಕಳಿದ್ದಾರೆ. ಮೊದಲನೆಯ ಮಗು ಮಂಜುನಾಥ 15 ವರ್ಷ, 9ನೇ ತರಗತಿಯಲ್ಲಿ ಓದುತ್ತಿದ್ದಾನೆ. ಎರಡನೆಯ ಮಗ ಶರತ್ 13ವರ್ಷ, 2ವರ್ಷಗಳ ಹಿಂದೆ ಎಸ್.ಎಂ.ಎಸ್. ಶಾಲೆಯಲ್ಲಿ 5ನೇ ತರಗತಿಗೆ ಹೋಗುತ್ತಿದ್ದನು. ಮೂರನೇ ಮಗಳು ರಕ್ಷಿತಾಶ್ರೀ 6 ವರ್ಷ, ಇನ್ನೂ ಶಾಲೆಗೆ ಸೇರಿಸಲು ಸಾಧ್ಯವಾಗಿಲ್ಲ. ನನ್ನ ಗಂಡ ಪೈಂಟರ್ ಆಗಿ ದುಡಿಯುತ್ತಿದ್ದರು. ಕೋವಿಡ್ ಲಾಕ್ಡೌನ್ ಕಾರಣದಿಂದ ಯಾವ ಕೆಲಸನೂ ಅವ–ರಿಗೆ ಸಿಗಲಿಲ್ಲ. ಸರ್ಕಾರ ಮಕ್ಕಳಿಗೆ ಆನ್ಲೈನ್ ಶಿಕ್ಷಣ ನೀಡಿ ಮಕ್ಕಳ ಕಲಿಕೆ ಮುಂದುವರೆಸುವಂತೆ ಶಾಲೆಗಳಿಗೆ ಸೂಚನೆ ನೀಡಿತು, ಜೊತೆಗೆ, ಶಾಲಾಡಳಿತದವರು ಪೋಷಕರಿಗೆ ಶಾಲಾ ಶುಲ್ಕ ಕಟ್ಟಬೇಕು ಎಂದು ತಾಕೀತು ಮಾಡಿದರು. ಆದರೆ ನಮ್ಮಲ್ಲಿ ಮಕ್ಕಳ ಶಾಲಾ ಶುಲ್ಕ ಭರಿಸಲು ಹಣ ಇರಲಿಲ್ಲ. ಎರಡನೆಯ ಮಗ ಶಾಲಾ ಕಲಿಕೆಯಿಲ್ಲದೆ 2 ವರ್ಷದಿಂದ ಮನೆಯಲ್ಲಿಯೇ ಉಳಿದಿದ್ದಾನೆ. ಮನೆಯ ನಿರ್ವಹಣೆಗಾಗಿ ರೂ.30000/– ಬಜಾಜ್ ಫೈನಾನ್ಸ್‌ನಲ್ಲಿ ಸಾಲ ತೆಗೆದುಕೊಂಡಿದ್ದೆ. ಇದನ್ನು ತೀರಿಸಲು ಕಳೆದ ಒಂದು ವರ್ಷದಿಂದ ಪ್ರಯತ್ನ ಮಾಡುತ್ತಿದ್ದೇನೆ. ಮನೆ ಬಾಡಿಗೆ, ವಿದ್ಯುತ್ ಬಿಲ್, ರೇಷನ್ ಎಲ್ಲವೂ ಸೇರಿ ಕನಿಷ್ಟ ರೂ.7000/– ಅಗತ್ಯತೆಯ ಖರ್ಚು ನಮ್ಮ ಕುಟುಂಬಕ್ಕೆ ಇದೆ. ನನ್ನ ಗಂಡನಿಗೆ ವಾರದಲ್ಲಿ ಒಂದು ಅಥವಾ ಎರಡು ದಿನ ಉದ್ಯೋಗ ಸಿಗುತ್ತದೆ. ಅವರಿಗೆ ಬರುವ ದಿನಗೂಲಿ ಕೇವಲ ರೂ.200/–. ನಾನು ನನ್ನ ಗಂಡ ದುಡಿಯುವ ಹಣದಿಂದ ಜೀವನ ನಡೆಸಬೇಕು. ಇನ್ನು ಎಲ್ಲಿಂದ ಮಗುವಿನ ಶೈಕ್ಷಣಿಕ ಶುಲ್ಕ ಭರಿಸಲಿ? ನನಗೂ ಮಗು ಚೆನ್ನಾಗಿ ಕಲಿಯಬೇಕು ಎಂಬ ಆಸೆಯಿದೆ. ಸರ್ಕಾರಿ ಶಾಲೆಗೆ ಮಕ್ಕಳನ್ನು ದಾಖಲಾತಿ ಮಾಡೋಣ ಎಂದರೆ, ಮಕ್ಕಳ ವರ್ಗಾವಣೆ ಪತ್ರ ಪಡೆಯಲು ಎರಡು ವರ್ಷದ ಶಾಲಾ ಶುಲ್ಕ ಪಾವತಿ ಮಾಡಿ, ನಂತರ ವರ್ಗಾವಣೆ ಪತ್ರ ಪಡೆದುಕೊಳ್ಳಿ ಎಂದು ಶಾಲಾಡಳಿತ ಹೇಳುತ್ತಿದೆ. ನಮ್ಮ ಮಕ್ಕಳ ಶಿಕ್ಷಣದ ಕುರಿತು ಯೋಚಿಸಿದರೆ ಬಹಳ ನೋವಾಗುತ್ತದೆ.

## ಕೇಸ್ಟಡಿ 15

### ಮಕ್ಕಳ ಶಾಲಾ ಶುಲ್ಕ ಭರಿಸಿಲ್ಲ ಎಂದಾದಲ್ಲಿ ಪರೀಕ್ಷೆ ಬರೆಯಲು ಸಾಧ್ಯವಿಲ್ಲ ಎಂದು ಶಾಲಾಡಳಿತ ಬೆದರಿಸಿದ್ದಾರೆ.

ನನ್ನ ಹೆಸರು ಮಹಮ್ಮದ್ ಜಿಲಾರಿ 45 ವರ್ಷ. ಬೆಂಗಳೂರು ವಾರ್ಡು ನಂಬರ್ 139ರಲ್ಲಿ ವಾಸವಿದ್ದೇನೆ, ನನ್ನ ಹೆಂಡತಿ ಹೆಸರು ಆಲ್ ಮೈ ಶಾ, 40 ವರ್ಷ. ನನಗೆ ಇಬ್ಬರು ಮಕ್ಕಳು. ಮೊದಲನೆಯ ಮಗ ಅಡ್ ನನ್ ಶೇಕ್ 13 ವರ್ಷ, 8ನೇ ತರಗತಿ ಓದುತ್ತಿದ್ದಾನೆ. ಇನ್ನೊಬ್ಬ ಮಗ ನೋಮನ್ ಶೇಕ್ 12 ವರ್ಷ, 7ನೇ ತರಗತಿ ಓದುತ್ತಿದ್ದಾನೆ. 2019ರ ತನಕ ನನ್ನ ಇಬ್ಬರು ಮಕ್ಕಳು ವಿಲ್ಲಂಗ್ಟನ್ ಶಾಲೆಯಲ್ಲಿ ಓದುತ್ತಿದ್ದರು. ನಾನು ಪ್ರತೀ ವರ್ಷ ರೂ.30000/- ಶಾಲಾ ಶುಲ್ಕವನ್ನು ಪಾವತಿ ಮಾಡಬೇಕಿತ್ತು. ನಾನು ಬೀದಿಬದಿ ವ್ಯಾಪಾರ ಮಾಡುವ ಕೂಲಿ ಕಾರ್ಮಿಕ. ಕೋವಿಡ್ ಲಾಕ್ಡೌನ್ ಸಮಯದಲ್ಲಿ ವ್ಯಾಪಾರ ಸಂಪೂರ್ಣ ನೆಲಕಚ್ಚಿ ಹೋಯಿತು. ಮಕ್ಕಳ ಶಾಲಾ ಶುಲ್ಕ ಭರಿಸುವುದು ಕಷ್ಟ ಎಂದು ಅರಿತು, ವಿಲ್ಲೊಗ್ಟನ್ ಶಾಲೆಯಿಂದ ಮಕ್ಕಳ ವರ್ಗಾವಣೆ ಪತ್ರ ಪಡೆದು, ಸೈಂಟ್ ಜೋಸೆಫ ಶಾಲೆಗೆ ದಾಖಲು ಮಾಡಿದೆ. ಪ್ರತೀ ಮಗುವಿಗೆ ರೂ.18000/- ಶುಲ್ಕ ಪಾವತಿ ಮಾಡಬೇಕಾಗಿತ್ತು. ನನ್ನಲ್ಲಿದ್ದ ರೂ. 6500/- ಹಣವನ್ನು ಶಾಲಾ ಶುಲ್ಕವಾಗಿ ಭರಿಸಿ ಮಕ್ಕಳ ವಿದ್ಯಾಭ್ಯಾಸ ಮುಂದುವರೆಸಲು ತಕ್ಷಣಕ್ಕೆ ಸಾಧ್ಯವಾಯಿತು. ಆದ-'ರೆ ಶಾಲಾಡಳಿತ ಮಂಡಳಿ ಪದೇ ಪದೇ ನೀವು ಉಳಿದ ಶಾಲಾ ಶುಲ್ಕ ಕೂಡಲೇ ಭರಿಸಲೇ ಬೇಕು ಎಂದು ಫೋನ್ ಮೂಲಕ ಒತ್ತಡ ಹಾಕುತ್ತಾ ಬಂದಿದ್ದಾರೆ. ಮಕ್ಕಳ ಶಾಲಾ ಶುಲ್ಕ ಭರಿಸಿಲ್ಲ ಎಂದಾದಲ್ಲಿ ಪರೀಕ್ಷೆ ಬರೆಯಲು ಸಾಧ್ಯವಿಲ್ಲ ಎಂದು ಶಾಲಾಡಳಿತ ಬೆದರಿಸಿದ್ದಾರೆ. ನನ್ನ ಹೆಂಡತಿ ಅಧಿಕ ರಕ್ತದೊತ್ತಡದ ಖಾಯಿಲೆಯಿಂದ ಬಳಲುತ್ತಿದ್ದು ಅವರ ಆರೋಗ್ಯಕ್ಕಾಗಿ ಹಣದ ಅವಶ್ಯಕತೆಯಿದೆ. ಮನೆಯ ಬಾಡಿಗೆ ಖರ್ಚು ರೂ.4000/- ಪ್ರತೀ ತಿಂಗಳೂ ಕಟ್ಟಬೇಕು. ಇವೆಲ್ಲವನ್ನು ನಿಭಾಯಿಸುವುದು ಬಹಳ ಕಷ್ಟಕರವಾಗಿದೆ. ಮಕ್ಕಳ ವಿದ್ಯಾಭ್ಯಾಸ ಮುಂದುವರೆಸಲು ಬೇಕಾದ ಶಾಲಾ ಶುಲ್ಕ ಹೇಗೆ ಭರಿಸಲಿ ಎಂದು ಆತಂಕವಾಗುತ್ತಿದೆ.

## ಕೇಸ್ಟಡಿ 16

### ಮಕ್ಕಳು ಈಗಾಗಲೇ ಆಂಗ್ಲ ಮಾಧ್ಯಮದಲ್ಲಿಯೇ ಕಲಿತಿರುವುದರಿಂದ, ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಮುಂದುವ-ರಿಸುವುದು ಕಷ್ಟ.

ನನ್ನ ಹೆಸರು ಅಸಿನ್ ಖಾನ್. ನಾನು ವಾರ್ಡು ನಂಬರ್ 139 ಬೆಂಗಳೂರಿನ ನಿವಾಸಿ. ನನಗೆ 38 ವರ್ಷ. 6ನೇ ತರಗತಿ ಓದಿದ್ದೇನೆ. ನನ್ನ ಗಂಡ ಜಾವಿದ್ ಖಾನ್, 40 ವರ್ಷ. ಅವರು 10ನೇ ತರಗತಿ ಓದಿದ್ದಾರೆ. ಕಸಾಯಿಖಾನೆಯಲ್ಲಿ ದುಡಿಯುತ್ತಿದ್ದಾರೆ. ತಿಂಗಳಿಗೆ ರೂ.20000/- ದುಡಿಮೆಯಿದೆ. ಮನೆ ಬಾಡಿಗೆ ರೂ.8000/- ವಿದ್ಯುತ್ ಬಿಲ್, ನೀರಿನ ಬಿಲ್, ರೇಷನ್ ಸೇರಿ ಸುಮಾರು 20,000 ಖರ್ಚು ಮನೆ ನಡೆಸಲು ಬೇಕಾಗಿದೆ. ನನಗೆ ಇಬ್ಬರು ಮಕ್ಕಳು. ಮುಜಾಹಿದ್ 14 ವರ್ಷ. ಕೊರೋನಾ ಲಾಕ್ಡೌನ್ ಮೊದಲು ಪ್ರೆಸೆಂಟ್ ಶಾಲೆಯಲ್ಲಿ ಓದುತ್ತಿದ್ದ. ಮಗಳು ಸಮ್ರೀನ್ ಖಾನ್ 11 ವರ್ಷ ಇವಳೂ 2 ವರ್ಷದ ಹಿಂದೆ ಪ್ರೆಸೆಂಟ್ ಶಾಲೆಯಲ್ಲಿಯೇ ವಿದ್ಯಾಭ್ಯಾಸ ಪಡೆಯುತ್ತಿದ್ದಳು. ನಾನು ಇಬ್ಬರೂ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಪ್ರತೀ ವರ್ಷ ರೂ.27000/- ಶಾಲಾ ಶುಲ್ಕ ಭರಿಸುತ್ತಿದ್ದೆ. ಕೋವಿಡ್ ನಮ್ಮ ಆರ್ಥಿಕತೆಗೆ ನೆರವಾಗಿದ್ದ ಕಸಾಯಿಖಾನೆಯ ಕೆಲಸವನ್ನೂ ಕಿತ್ತುಕೊಂಡಿತು. ನಾವು ರೂ.2ಲಕ್ಷದವರೆಗೂ ಕೈಸಾಲ ಮಾಡಿದ್ದೇವೆ. ಅದನ್ನೂ ಪಾವತಿ ಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಮಕ್ಕಳ ಶೈಕ್ಷಣಿಕ ಶುಲ್ಕ ಕಟ್ಟಲು ಬಹಳ ಕಷ್ಟವಾಗಿದೆ. ಸರ್ಕಾರಿ ಶಾಲೆಗೆ ಮಕ್ಕಳನ್ನು ಸೇರಿಸೋಣ ಎಂದರೆ, ಮಕ್ಕಳು ಈಗಾಗಲೇ ಆಂಗ್ಲ ಮಾಧ್ಯಮದಲ್ಲಿಯೇ ಕಲಿತಿರುವುದರಿಂದ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಮುಂದುವರೆಸುವುದು ಕಷ್ಟ ಎಂದು ಹೇಳುತ್ತಿದ್ದಾರೆ. ನನ್ನ ಮಕ್ಕಳು ಆನ್ಲೈನ್ ಶಿಕ್ಷಣನೂ ಪಡೆಯದೆ, 2 ವರ್ಷದಿಂದ ಮನೆಯಲ್ಲಿಯೇ ಉಳಿದಿರುವುದು ಬಹಳ ನೋವನ್ನುಂಟು ಮಾಡುತ್ತಿದೆ.

## ಕೇಸ್ಟಡಿ 17

### "ನಮ್ಮ ಮಕ್ಕಳಿಗೆ ಯಾವುದೇ ವಿದ್ಯಾಭ್ಯಾಸ ಶಾಲೆಯಿಂದ ಸಿಗದೆ ಶುಲ್ಕ ಯಾಕೆ ಭ-ರಿಸಬೇಕು?"

ನಾನು ಮಹಮ್ಮದ್ ಷಾ ನವಾಜ್, ನನಗೆ 46 ವರ್ಷ. ನಾನು ಬೆಂಗಳೂರಿನ ವಾರ್ಡು ನಂ.139ರ ಬಾಬಾಲೈನ್‌ನಲ್ಲಿ ವಾಸಿಸುತ್ತಿದ್ದೇನೆ. ನಾನು 10ನೇ ತರಗತಿಯವರೆಗೂ ಓದಿದ್ದೇನೆ. ನನ್ನ ಹೆಂಡತಿ ಫಿರೋಜ್ ಬಾನು 32 ವರ್ಷ. 7ನೇ ತರಗತಿ ಓದಿದ್ದಾರೆ. ನನಗೆ 4 ಮಕ್ಕಳು. ಮೊದಲನೆಯ ಮಗ ಮಹಮ್ಮದ್ ಯೂಹೆಜ್ 13 ವರ್ಷ. ಕೊರೋನಾ ಲಾಕ್ಡೌನ್ ಮೊದಲು ಸೈಂಟ್ ಜೋಸೆಫ್ ಶಾಲೆಯಲ್ಲಿ 5ನೇ ತರಗತಿ ಓದುತ್ತಿದ್ದ. ತದನಂತರ ಅವನ ವಿದ್ಯಾಭ್ಯಾಸ ಮುಂದುವರೆಸಲು ನಮ್ಮಲ್ಲಿ ಹಣಕಾಸಿನ ಕೊರತೆಯಿತ್ತು. ಮನೆಯಲ್ಲಿ ಜೀವನ ನಡೆಸಲು ಕಷ್ಟವಾದುದುರಿಂದ ಅವನು ಔಷಧಿ ಅಂಗಡಿಗೆ ಕೆಲಸಕ್ಕೆ ಸೇರಿದ್ದಾನೆ ಎಂದು ಹೇಳಲು

ದುಃಖವಾಗುತ್ತಿದೆ. ಎರಡನೆಯ ಮಗಳು ರಫಿಯಾ 10 ವರ್ಷ ಅವಳೂ ಕೂಡ 2 ವರ್ಷದ ಹಿಂದೆ ಸೈಂಟ್ ಜೋಸೆಫ್ ಶಾಲೆಯಲ್ಲಿ 3ನೇ ತರಗತಿಯಲ್ಲಿ ಓದುತ್ತಿದ್ದಳು. ನಾನು ಇಬ್ಬರೂ ಮಕ್ಕಳಿಗೆ ರೂ.18000/- ಶಾಲಾ ಶುಲ್ಕ ಭರಿಸಿ ಓದಿಸುತ್ತಿದ್ದೆ. ನಾನು 2020-21-22 ಸಾಲಿನಲ್ಲಿ ಮಕ್ಕಳ ಶಾಲಾ ಶುಲ್ಕ ಭರಿಸಿಲ್ಲ ಎಂಬ ಕಾರಣ-ಕ್ಕೆ ನನ್ನ ಇಬ್ಬರೂ ಮಕ್ಕಳು ಆನ್ಲೈನ್ ಶಿಕ್ಷಣದಿಂದ ವಂಚಿತರಾದರು. ಮೂರನೆಯ ಮಗು ಅಮ್ರೀನ್ ಸಬ 6 ವರ್ಷ ಅವಳನ್ನೂ ಇನ್ನೂ ಶಾಲೆಗೆ ದಾಖಲಿಸಿಲ್ಲ. ನಾಲ್ಕನೇ ಮಗು 6ತಿಂಗಳು. ನಾನು ಕಬ್ಬಿಣದ ಸರಳಿನ ವ್ಯಾಪಾರ ಮಾಡುವ ಅಂಗಡಿ ನಡೆಸುತ್ತಿದ್ದೆ. 2016ರಲ್ಲಿ ನಮ್ಮ ಅಂಗಡಿ ದರೋಡೆ ಮಾಡಿ, ರೂ.15 ಲಕ್ಷ ದರೋಡೆ ಮಾಡಿದ್ದರು. ಈ ಕೇಸ್ ಮೊಕ್ಕದ್ದಮೆ ಶುರುವಾಗಿ 22ದಿನಕ್ಕೆ ನಾನು ನಡೆಸುತ್ತಿದ್ದ ಉಳಿದ ಗೋದಾಮಿಗೆ ಬೆಂಕಿಬಿದ್ದು ಕಬ್ಬಿಣದ ಸರಳು ಎಲ್ಲವೂ ನಾಶವಾಯಿತು. ಒಟ್ಟಾರೆ ರೂ.15ಲಕ್ಷ ಮತ್ತೊಮ್ಮೆ ನಷ್ಟವುಂಟಾಯಿತು. ಕೋವಿಡ್ ಪರಿಸ್ಥಿತಿ ನಮ್ಮ ಆರ್ಥಿಕತೆಯನ್ನು ಇನ್ನಷ್ಟು ನಲುಗಿಸಿತು. ಮನೆಯ ಮಾಲೀಕರು ಬಾಡಿಗೆಗೆ ಮುಂಗಡವಾಗಿ ನೀಡಿದ್ದ ಬಾಬ್ತಿನಲ್ಲಿದ್ದ ಹಣವನ್ನೇ ತಿಂಗಳ ಬಾಡಿಗೆಯಾಗಿ ಕಡಿತಗೊಳಿಸಿದರು. ಈ ಸ್ಥಿತಿ ಮನೆಯಲ್ಲಾದರೆ, ಮಕ್ಕಳ ವಿದ್ಯಾಭ್ಯಾಸ ಸರ್ಕಾರಿ ಶಾಲೆಯಲ್ಲಾದರೂ ಮುಂದುವರೆಸೋಣ ಎಂದು ಶಾಲಾಡಳಿತವನ್ನು ವರ್ಗಾವಣೆ ಪತ್ರ ನೀಡಿ ಎಂದು ಕೇಳಿದರೆ, " ನಿಮ್ಮ ಮಕ್ಕಳ ಶಾಲಾ ಶುಲ್ಕ ಪಾವತಿಸಿ ವರ್ಗಾವಣೆ ಪತ್ರ ಪಡೆಯಿರಿ ಎಂದು ತಾಕೀತು ಮಾಡಿದ್ದಾರೆ". ನನ್ನ ಮಗು ಆನ್ಲೈನ್ ಶಿಕ್ಷಣ ಪಡೆದಿಲ್ಲ ಎಂದಾದರೂ ಶೈಕ್ಷಣಿಕ ಶುಲ್ಕ ಬಾಕಿಯಿದೆ ಎನ್ನುತ್ತಾರೆ. ನಮ್ಮ ಮಕ್ಕಳಿಗೆ ಯಾವುದೇ ವಿದ್ಯಾಭ್ಯಾಸ ಶಾಲೆಯಿಂದ ಸಿಗದೆ ಶುಲ್ಕ ಯಾಕೆ ಭ-ರಿಸಬೇಕು?

## ಕೇಸ್ಟಡಿ 18

### "ಮಗುವಿಗೆ ಶಾಲಾ ಶುಲ್ಕ ಭರಿಸದ ಕಾರಣಕ್ಕೆ ಆನ್ಲೈನ್ ತರಗತಿಯೂ ಸಿಕ್ಕಿಲ್ಲ."

ನನ್ನ ಹೆಸರು ಆಸ್ಮಾ ಬಾನು. ನನಗೆ 38 ವರ್ಷ. ನನ್ನ ಕುಟುಂಬದೊಂದಿಗೆ ಬೆಂಗಳೂರಿನ ವಾರ್ಡು ನಂ. 139ರ ವ್ಯಾಪ್ತಿಗೆ ಬರುವ ಬಾಬಾಲೈನ್‌ನಲ್ಲಿ 3ವರ್ಷಗಳಿಂದ ವಾಸವಾಗಿದ್ದೇನೆ. ನನ್ನ ಗಂಡನ ಹೆಸರು ಸಾಧಿಕ್ ಪಾಶ 45 ವರ್ಷ. ಅವರು 10ನೇ ತರಗತಿ ಓದಿದ್ದಾರೆ. ನಮ್ಮನ್ನೂ ಸೇರಿಕೊಂಡು ಮನೆಯಲ್ಲಿ 5 ಜನರು ವಾಸವಾಗಿದ್ದೇವೆ- ಅತ್ತೆ ಅಕ್ತರ್ ಉನ್ನೀಸ್, ಮೈದುನ ಜಾಬೀರ್ ಉಲ್ಲಾ (ಮಾನಸಿಕ ಅಸ್ವಸ್ಥ). ಹಾಗೂ ನನ್ನ ಮಗ ಸೈಯದ್ ಫೇಜಾನ್ 13 ವರ್ಷ. ನನ್ನ ಮಗ ಸೈದಯ್ ಕಳೆದೆರಡು ವರ್ಷಗಳಿಂದ ಶಾಲೆಗೆ ಹೋಗಿಲ್ಲ ಆನ್‌ಲೈನ್ ಶಿಕ್ಷಣನೂ ಪಡೆದಿಲ್ಲ. ಕೋವಿಡ್ ಲಾಕ್ಡೌನ್ ಮೊದಲು 3ನೇ ತರಗತಿಯಲ್ಲಿ ವಿಸ್ಡಮ್ ಶಾಲೆಯಲ್ಲಿ ಓದುತ್ತಿದ್ದ. ಅವನ ಶಿಕ್ಷಣಕ್ಕಾಗಿ ರೂ.25000/- ಫೀಸು ಕಟ್ಟಿದ್ದೆ. ನನ್ನ ಗಂಡ ಪಾದರಕ್ಷೆ ಮಾರುವ ಬೀದಿಬದಿ ವ್ಯಾಪಾರಿ. ಅವರ ದುಡಿಮೆಯೇ ನಮ್ಮ ಕುಟುಂಬದ ಜೀವನಾಧಾರ. 2019ರಲ್ಲಿ ಅತ್ತೆಯವರ ಆರೋಗ್ಯ, ತಮ್ಮನ ಮಾನಸಿಕ ಸ್ವಾಸ್ಥ್ಯಕ್ಕಾಗಿ ಸ್ವಂತ ಮನೆಯನ್ನೂ ಮಾರಿ ಬಾಡಿಗೆ ಮನೆಗೆ ಬಂದು ಸೇರಿಕೊಂಡೆವು. ಕೋವಿಡ್ ಸಾಂಕ್ರಾಮಿಕ ರೋಗ ಹರಡುವುದನ್ನು ತಡೆಯಲು ಸರ್ಕಾರ ವಿಧಿಸಿದ ಲಾಕ್ಡೌನ್ ನನ್ನ ಮಗುವಿನ ವಿದ್ಯಾಭ್ಯಾಸಕ್ಕೆ ಕೊಡಲಿ ಏಟನ್ನು ನೀಡಿತು. ನನ್ನ ಗಂಡ ಯಾವುದೇ ವ್ಯಾಪಾರವಿಲ್ಲದೆ ಕಂಗಾಲಾದರು. ಈ ಸಮಯದಲ್ಲಿ ಕೈ ಸಾಲನೂ ಮಾಡಿಕೊಂಡೆವು. ಮಗುವಿಗೆ ಶಾಲಾ ಶುಲ್ಕ ಭರಿಸದ ಕಾರಣಕ್ಕೆ ಆನ್ಲೈನ್ ತರಗತಿಯೂ ಸಿಕ್ಕಿಲ್ಲ. ಶಾಲಾ ಶುಲ್ಕ ಪಾವತಿಸಿ ನಿಮ್ಮ ಮಗುವಿಗೆ ಆನ್ಲೈನ್ ಶಿಕ್ಷಣ ಕಳುಹಿಸುತ್ತೇವೆಂದು ಶಾಲಾಡಳಿತದವರು ಹೇಳಿದರು. ಈ ಕಷ್ಟಕರ ಸಮಯದಲ್ಲಿ ಮಗುವಿನ ಶಿಕ್ಷಣಕ್ಕೆ ಹಣ ಸಂದಾಯ ಮಾಡಲಾಗದೆ ಮಗು ಶಾಲೆಗೆ ಹೋಗದೆ ಮನೆಯಲ್ಲಿಯೇ ಇದ್ದಾನೆ.

## ಕೇಸ್ಟಡಿ 19

### ಮಕ್ಕಳು ಶಾಲೆಗೆ ಸಮವಸ್ತ್ರ ಧರಿಸಿ, ಶಾಲಾ ಬ್ಯಾಗ್ ಪುಸ್ತಕ ಹಿಡಿದು ಹೋಗುತ್ತಿದ್ದರೆ ನನಗೂ ಶಾಲೆಗೆ ಹೋಗಬೇಕನ್ನಿಸುತ್ತದೆ.

ನನ್ನ ಹೆಸರು ಕಿಶೋರ್ 13 ವರ್ಷ. ನನ್ನ ತಂಗಿ ಕೀರ್ತಿ 11 ವರ್ಷ. ನಾವಿಬ್ಬರೂ ನಮ್ಮ ಅಜ್ಜಿ ಶಿವಗಾಮಿಯವರ ಬಳಿ ಬೆಂಗಳೂರಿನ ವಾರ್ಡು ನಂಬರ್ 139ರ ವ್ಯಾಪ್ತಿಯಲ್ಲಿ ಬರುವ ಆನಂದಪುರಂ ಏರಿಯಾದಲ್ಲಿ ವಾಸವಿದ್ದೇವೆ. ನಮಗೆ ಅಪ್ಪ ಅಮ್ಮ ಇಬ್ಬರೂ ಇಲ್ಲ. ನಮ್ಮ ಅಜ್ಜಿಯೇ ನಮ್ಮನ್ನು ನೋಡಿಕೊಳ್ಳುತ್ತಿದ್ದಾರೆ. ನಾನು 3 ವರ್ಷಗಳ ಹಿಂದೆ, ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಸ್ವಾಮಿ ವಿವೇಕಾನಂದ ಶಾಲೆಯ ಹಾಸ್ಟೆಲ್‌ನಲ್ಲಿ ಓದುತ್ತಿದ್ದೆ. ನನ್ನ ಅಜ್ಜಿ ಮನೆಗೆಲಸ ಮಾಡುತ್ತಾ ಜೀವನ ನಡೆಸುತ್ತಾರೆ. ನಾನ್ನನ್ನು ನೋಡಲು ಅವ-ರಿಗೆ ಬಿಡುವಾದಾಗ ಬರುತ್ತಿದ್ದರು. ಹಾಸ್ಟೆಲ್‌ನವರು ನೀವು ಮಕ್ಕಳನ್ನು ನೋಡಲು ಸರಿಯಾದ ಸಮಯಕ್ಕೆ ಬರುತ್ತಿಲ್ಲ ಎಂಬ ಕಾರಣ ನೀಡಿ ವರ್ಗಾವಣೆ ಪತ್ರ ನೀಡಿ ಕಳುಹಿಸಿ ಕೊಟ್ಟರು. ನಂತರ ನಮ್ಮ ಅಜ್ಜಿ ನನ್ನನ್ನು ಮತ್ತು ನನ್ನ ತಂಗಿಯನ್ನು ನಾಗದೇವನಹಳ್ಳಿ ವ್ಯಾಪ್ತಿಯಲ್ಲಿ ಬರುವ ಸಿಟಿಜನ್ಸ್ ಫೌಂಡೇಷನ್ ಸಂಸ್ಥೆಗೆ ಸೇರಿಸಿದರು. ನಾವು ಯಾವುದೇ ಶಿಕ್ಷಣನೂ ಪಡೆಯದೆ ಸಂಸ್ಥೆಯ ಹಾಸ್ಟೆಲ್‌ನಲ್ಲಿ ಉಳಿದೆವು. ನಮ್ಮ ಅಜ್ಜಿ ಅಲ್ಲಿ ಹಣವನ್ನು ಕಟ್ಟಬೇಕಿತ್ತು. ನಮ್ಮ ಅಜ್ಜಿ ಈ ಸಂಸ್ಥೆಗೆ ಹಣಕಟ್ಟಿಲ್ಲ ಎಂಬ ಕಾರಣಕ್ಕೆ

ನಮಗೆ ವಿದ್ಯಾಭ್ಯಾಸವನ್ನು ನಿರಾಕರಿಸಿತು. ಎಲ್ಲಾ ಮಕ್ಕಳು ಕಲಿಕಗೆ ಹೋದರೆ ನಾವು ಮಾತ್ರ ಹಾಸ್ಟೆಲ್‌ನಲ್ಲಿಯೇ ಉಳಿದಿದ್ದೆವು. ನಮಗೆ ಊಟಕ್ಕೂ ಕಷ್ಟವಾಗುತ್ತಿತ್ತು. ನಮ್ಮನ್ನು ನೋಡಲು ಬಂದ ಅಜ್ಜಿ ನಮ್ಮ ಆರೋಗ್ಯ ಸ್ಥಿತಿ ನೋಡಿ, ಅಲ್ಲಿಂದ ನಮ್ಮನ್ನು ಕರೆತಂದರು. ಮಕ್ಕಳು ಶಾಲೆಗೆ ಸಮವಸ್ತ್ರ ಧರಿಸಿ, ಶಾಲಾ ಬ್ಯಾಗ್ ಪುಸ್ತಕ ಹಿಡಿದು ಹೋಗುತ್ತಿದ್ದರೆ ನನಗೂ ಶಾಲೆಗೆ ಹೋಗಬೇಕನ್ನಿಸುತ್ತದೆ. ನನ್ನ ವಿದ್ಯೆಯ ಕನಸು ನಿಜವಾಗುವುದಾದರೂ ಹೇಗೆ?

## ಕೇಸ್ಟಡಿ 20

### ಇಬ್ಬರೂ ಮಕ್ಕಳಿಗೂ ಆರ್.ಟಿ.ಇ. ಸೀಟು ಸರ್ಕಾರ ನೀಡಿದರೆ ನಮ್ಮ ಮಗುವಿನ ಶಿಕ್ಷಣದ ಭವಿಷ್ಯ ರೂಪುಗೊಳ್ಳಬಹುದು

ನನ್ನ ಹೆಸರು ಅಂಜಲಿ. ನನಗೆ 37 ವರ್ಷ. ಬೆಂಗಳೂರಿನ ವಾರ್ಡು ನಂ 139ರ ವ್ಯಾಪ್ತಿಯಲ್ಲಿ ಬರುವ ಆನಂದಪುರಂ ಏರಿಯಾದಲ್ಲಿ ವಾಸವಾಗಿದ್ದೇನೆ. ನನ್ನ ಗಂಡನ ಹೆಸರು ಶ್ರೀಧರ್, 38 ವರ್ಷ. 9ನೇ ತರಗತಿ ಓದಿದ್ದಾರೆ.
ನನಗೆ ಇಬ್ಬರು ಮಕ್ಕಳು – ರಿತಿಕ್ 7ವರ್ಷ ಹಾಗೂ ಶ್ರೀವರ್ಷನ್‌ಗೆ 3 ವರ್ಷ ವಯಸ್ಸು. ನನ್ನ ಮೊದಲ ಮಗನಾದ ರಿತಿಕ್ ಆರ್.ಟಿ.ಇ. ಸೀಟು ಪಡೆದು ಕ್ರೆಸೆಂಟ್ ಶಾಲೆಗೆ ಸೇರಬೇಕೆನ್ನುವ ಹಂಬಲಕ್ಕೆ ಅವನ ಆಧಾರ್, ಜಾತಿ ಮತ್ತು ಆದಾಯ ಪ್ರಮಾಣಪತ್ರ ಪಡೆಯುವುದು ಅವಶ್ಯವಾಗಿತ್ತು. ಈ ದಾಖಲೆಗಳನ್ನು ಪಡೆಯಲು ಅಧಿಕಾ–ರಿಗಳಿಗೆ ರೂ.4000/– ಪಾವತಿ ಮಾಡಿ. ಹಾಗೆಯೇ ಆರ್.ಟಿ.ಇ. ಸೀಟಿಗಾಗಿ ಅರ್ಜಿಯೂ ಸಲ್ಲಿಸಿದ್ದೆ. ಆದ–ರೆ ಆರ್.ಟಿ.ಇ. ಸೀಟು ಸಿಗಲೇ ಇಲ್ಲ. ಹೀಗಾಗಿ ಅವನನ್ನು ಎಲ್.ಕೆ.ಜಿ.ಗೆ ಕ್ರೆಸೆಂಟ್ ಶಾಲೆಗೆ ಸೇರಿಸಿ ರೂ. 12000/– ಶಾಲಾ ಶುಲ್ಕ ಪಾವತಿ ಮಾಡಿದೆ. ಶಾಲೆಗೆ ಸೇರಿಸಿದ 8 ತಿಂಗಳಲ್ಲೇ ಕೋವಿಡ್ ಲಾಕ್ಡೌನ್ ಹೇ–ರಿಕೆಯಾಯಿತು. ಶಾಲೆಗಳು ಮುಚ್ಚಿದವು. ಆನ್ಲೈನ್ ತರಗತಿ ಆರಂಭಗೊಂಡಿತು. ನನ್ನಲ್ಲಿ ಸ್ಮಾರ್ಟ್‌ಫೋನ್ ಇರಲಿಲ್ಲ. ನನ್ನ ಮಗು ಆನ್ಲೈನ್ ಶಿಕ್ಷಣ ಪಡೆಯಲು ಸಾಧ್ಯವಾಗದೆ ಸಂಪೂರ್ಣವಾಗಿ ಹೊರಗುಳಿಯುವಂತಾಯಿತು.
ನಾನು ಬೀದಿಬದಿ ತರಕಾರಿ ವ್ಯಾಪಾರ ಮಾಡಿ ಜೀವನ ನಡೆಸುತ್ತಿದ್ದೆ. ಒಂದೆಡೆ ಮಾರ್ಕೆಟ್ ಅಭಿವೃದ್ಧಿ ಕಾಮಗಾ–ರಿಗಳು, ಇನ್ನೊಂದೆಡೆ ಕೊರೋನಾ ಸಾಂಕ್ರಾಮಿಕ ಕಾಯಿಲೆ ತಡೆಯಲು ತಂದ ಲಾಕ್ಡೌನ್ ನನ್ನ ದುಡಿಮೆಯನ್ನೂ ಕಸಿದುಕೊಂಡಿತು. ನನ್ನ ಗಂಡ ಪೈಂಟರ್ ಆಗಿ ಕೆಲಸ ಮಾಡುತ್ತಿದ್ದರು. ಅವರಿಗೂ ಕೆಲಸ ಇಲ್ಲದಂತಾಯಿತು. ಈಗ ವಾರದಲ್ಲಿ 2 ರಿಂದ 3 ದಿನ ಮಾತ್ರ ಕೆಲಸ ಸಿಗುತ್ತದೆ. ಅದರಿಂದ ಬರುವ ದಿನಗೂಲಿ ರೂ.200/– ಅದರಲ್ಲಿಯೇ ಬಾಡಿಗೆ ಕಟ್ಟಿ, ಹಸಿವನ್ನೂ ನೀಗಿಸಿಕೊಳ್ಳಬೇಕಾಗಿದೆ.

ನಮ್ಮ ಮಗುವಾದರೂ ಒಳ್ಳೆಯ ಶಿಕ್ಷಣ ಪಡೆಯಬೇಕು ಎಂಬ ಆಸೆಯಿದೆ. ಹತ್ತಿರದಲ್ಲಿ ಯಾವುದೇ ಸರ್ಕಾರಿ ಶಾಲೆಯಿಲ್ಲದಿರುವುದರಿಂದ ಸಮೀಪದಲ್ಲಿಯೇ ಇರುವ ಕ್ರೆಸೆಂಟ್ ಶಾಲೆಯಲ್ಲಿ ನನ್ನ ಇಬ್ಬರೂ ಮಕ್ಕಳಿಗೂ ಆರ್.ಟಿ.ಇ. ಸೀಟು ಸರ್ಕಾರ ನೀಡಿದರೆ ನಮ್ಮ ಮಗುವಿನ ಶಿಕ್ಷಣದ ಭವಿಷ್ಯ ರೂಪುಗೊಳ್ಳಬಹುದು.

## ಕೇಸ್ಟಡಿ 21

### ನಮ್ಮ ಮಗುವಿಗೆ 6 ವರ್ಷ ತುಂಬಿದರೂ ಶಾಲೆಗೆ ಹೋಗದೆ ಮನೆಯಲ್ಲಿಯೇ ಇರುವಂತಾಗಿದೆ

ನನ್ನ ಹೆಸರು ಅಮುದ. ನನಗೆ 25 ವರ್ಷ. ನಾನು ಬೆಂಗಳೂರಿನ ವಾರ್ಡು ನಂ.139ರ ಆನಂದಪುರಂನಲ್ಲಿ ವಾಸವಾಗಿದ್ದೇನೆ. ನನ್ನ ಗಂಡ ಪ್ರಶಾಂತ್ 26 ವರ್ಷ. ಇಲೆಕ್ಟ್ರೀಷಿಯನ್ ಹೆಲ್ಪರ್ ಕೆಲಸ ಮಾಡುತ್ತಿದ್ದು, ಅವರ ದಿನಗೂಲಿ ರೂ.300/–. ವಾರದಲ್ಲಿ 3 ರಿಂದ 4 ದಿನ ಮಾತ್ರ ಕೆಲಸ ಸಿಗುತ್ತದೆ. ನನಗೆ ಮೂರು ಮಕ್ಕಳು. ಮೊದಲನೆಯ ಮಗು ಯಾಲಿನಿ 6ವರ್ಷ, ಎರಡನೆಯ ಮಗು ಸಾನ್ವಿ 3 ವರ್ಷ, ಮೂರನೆಯ ಮಗು ಫೆರ್ರೈ 1ವರ್ಷ. 2 ವರ್ಷಗಳ ಹಿಂದೆ ನನ್ನ ಮಗಳಾದ ಯಾಲಿನಿಗೆ ಆರ್.ಟಿ.ಇ. ಸೀಟು ಸಿಗಬೇಕೆಂಬ ಹಂಬಲದಲ್ಲಿ ಜಾತಿ ಆದಾಯ ಪ್ರಮಾಣಪತ್ರ ಪಡೆಯಲು ಮುಂದಾದಾಗ ತಹಶೀಲ್ದಾರರ ಕಛೇರಿಯಲ್ಲಿ ರೂ.2000/– ಹಣ ಪಾವತಿಸಿ ಎಂದರು. ನನ್ನಲ್ಲಿ ಅಷ್ಟು ಹಣವೂ ಇರಲಿಲ್ಲ. ಅದಕ್ಕಾಗಿಯೇ ಆರ್.ಟಿ.ಇ. ಸೀಟಿಗೂ ಅರ್ಜಿ ಹಾಕಲು ಸಾಧ್ಯವಾಗಿರಲಿಲ್ಲ. ನಮ್ಮ ಮನೆಯ ಆಸುಪಾಸಿನಲ್ಲಿ ಯಾವುದೇ ಶುಲ್ಕರಹಿತ ಶಾಲೆಗಳಿಲ್ಲ. ಹೀಗಾಗಿ ನಮ್ಮ ಮಗುವಿಗೆ 6ವರ್ಷ ತುಂಬಿದರೂ ಶಾಲೆಗೆ ಹೋಗದೆ ಮನೆಯಲ್ಲಿಯೇ ಇರುವಂತಾಗಿದೆ. ಕೊರೋನಾ ಸಂದರ್ಭದಲ್ಲಿ ಜೀವನ ನಡೆಸಲು ತೆಗೆದುಕೊಂಡಿರುವ ಸಾಲವನ್ನೇ ತೀರಿಸಲಾಗಲಿಲ್ಲ. ಇನ್ನು ಮಗುವಿನ ಶಿಕ್ಷಣಕ್ಕೆ ಎಲ್ಲಿಂದ ಹಣ ಹೊಂದಿಸಲಿ.

## ಕೇಸ್ಟಡಿ 22

### ಮಗುವಿಗೆ ಒಳ್ಳೆಯ ಶಿಕ್ಷಣ ಸಿಗಬೇಕು ಎಂಬ ಆಕಾಂಕ್ಷೆ ನನ್ನದು.

ನನ್ನ ಹೆಸರು ಕಾಮಾಕ್ಷಿ, ನಾನು ಬೆಂಗಳೂರಿನ ವಾರ್ಡು ನಂ.139ರ ಆನಂದಪುರಂ ನಿವಾಸಿ. ಕಳೆದ 7 ವರ್ಷಗಳಿಂದ ನಾನು ನನ್ನ ಮಗ ಸಂಜೀಷನೊಂದಿಗೆ ಅಮ್ಮನ ಮನೆಯಲ್ಲಿ ವಾಸಿಸುತ್ತಿದ್ದೇನೆ. ನನ್ನ ಗಂಡ ಹಾಗೂ ಆತನ ಮನೆಯವರು ನೀಡುತ್ತಿದ್ದ ಕೌಟುಂಬಿಕ

ಕಿರುಕುಳದಿಂದ ಬೇಸತ್ತು ಅಮ್ಮನ ಮನೆಯಲ್ಲಿಯೇ ವಾಸವಿದ್ದೇನೆ. ನನ್ನ ತಾಯಿ ಚೌಲ್ಟ್ರೀ ಕಾರ್ಮಿಕಳು. ಅವರಿಗೆ ವಾರಕ್ಕೆ 2ದಿನ ಮಾತ್ರ ಕೆಲಸ ಸಿಗುತ್ತದೆ. ನಮ್ಮ ಮನೆಗೆ ಅವರೇ ಜೀವನಾಧಾರ. ನನ್ನ ಮಗನಿಗೆ ಶಾಲಾ ಶುಲ್ಕ ಪಾವತಿಸಿ ಶಾಲೆಗೆ ಸೇರಿಸಲು ನನ್ನಿಂದ ಸಾಧ್ಯವಿಲ್ಲ. ನನ್ನ ಮಗನನ್ನು ಸರ್ಕಾರಿ ಶಾಲೆಗೆ ಸೇರಸಲು ಬಯಸುತ್ತೇನೆ. ಆದರೆ ನಮ್ಮ ಮನೆಗೆ ಸಮೀಪವಾಗಿ ಸರ್ಕಾರಿ ಶಾಲೆಗಳು ಇಲ್ಲ. ದೂರವಿರುವ ಸರ್ಕಾರಿ ಶಾಲೆಗಳಲ್ಲಿ ಮಕ್ಕಳು ಕಲಿಯುತ್ತಿಲ್ಲ ಎಂದೂ ನೆರೆಹೊರೆಯವರಿಂದ ಕೇಳಲ್ಪಟ್ಟಿದ್ದೇನೆ. ಮಗುವಿಗೆ ಒಳ್ಳೆಯ ಶಿಕ್ಷಣ ಸಿಗಬೇಕು ಎಂಬ ಆಕಾಂಕ್ಷೆ ನನ್ನದು.

## ಕೇಸ್ಸ್ಟಡಿ 23

### ವಿದ್ಯಾಭ್ಯಾಸವಿಲ್ಲದೆ ಮನೆಯಲ್ಲಿಯೇ ಉಳಿದಿದ್ದಾನೆ.

ನನ್ನ ಹೆಸರು ಮಂಜು. ಬೆಂಗಳೂರಿನ ಮಿನಿ ಭಕ್ಷೀ ಗಾರ್ಡನ್, ವಾರ್ಡು ನಂ.139ರಲ್ಲಿ ವಾಸವಾಗಿದ್ದೇನೆ. ನನ್ನ ಗಂಡನ ಹೆಸರು ವೇಲು 48 ವರ್ಷ ವಯಸಾಗಿದ್ದು, ಇತ್ತೀಚೆಗೆ 3 ವಾರಗಳ ಹಿಂದೆಯೇ ಜಾಂಡೀಸ್ ಖಾಯಿಲೆಯಿಂದ ಮರಣ ಹೊಂದಿದ್ದಾರೆ. ನನಗೆ 2 ಮಕ್ಕಳು. ಮೊದಲನೆಯ ಮಗ ಸತೀಶ್ 19 ವರ್ಷ, 10ನೇ ತರಗತಿ ಓದಿದ್ದಾನೆ. ಈಗ ಪೈಂಟಿಂಗ್ ಕೆಲಸ ಮಾಡುತ್ತಿದ್ದಾನೆ. ಈಗ ವಾರದಲ್ಲಿ 2 ರಿಂದ 3 ದಿನದ ಕೆಲಸ ಅವನಿಗೆ ಸಿಗುತ್ತಿದೆ. ಎರಡನೆಯ ಮಗು ನಿತೀಶ್ ವಯಸ್ಸು 13. ಕೊರೋನಾ ಲಾಕ್ಡೌನ್‌ಗಿಂತ ಮೊದಲು ಸೈಂಟ್ ಜೋಸೆಫ್ ಶಾಲೆಯಲ್ಲಿ 4ನೇ ತರಗತಿ ಓದುತ್ತಿದ್ದ. ಅವನ ಶಿಕ್ಷಣಕ್ಕಾಗಿ ವಾರ್ಷಿಕ ರೂ.15000/– ರೂಪಾಯಿ ಶಾಲಾ ಶುಲ್ಕ ಭರಿಸುತ್ತಿದ್ದೆ. ಕೋವಿಡ್ ಸಂದರ್ಭದಲ್ಲಿ ನನಗೆ ಅವನ ಶುಲ್ಕ ಕಟ್ಟಲು ಸಾಧ್ಯವಾಗಿಲ್ಲ. ಹೀಗಾಗಿ 2 ವರ್ಷ ಸಂಪೂರ್ಣವಾಗಿ ಶಿಕ್ಷಣದಿಂದ ಹೊರಗುಳಿದಿದ್ದ. ನಂತರ ಸ್ವಲ್ಪ ಶಾಲಾ ಶುಲ್ಕ ಕಡಿಮೆಯಿರುವ ಶಾರದ ಸಮಾಜ ಶಾಲೆಯಲ್ಲಿ 2021ರಲ್ಲಿ ದಾಖಲಾತಿ ಮಾಡಿದೆ. ಅಲ್ಲಿ ಕೇವಲ ರೂ.4000/– ಶುಲ್ಕವಿದ್ದರೂ ನನಗೆ ಆ ಹಣವನ್ನೂ ಪಾವತಿಸಲಾಗದೆ, ಅತ್ತ ಸಮರ್ಪಕ ಶಿಕ್ಷಣನೂ ಸಿಗದೆ, ಕಲಿಕೆ ಅರ್ಥಮಾಡಿಕೊಳ್ಳಲಾಗದೆ ನನ್ನ ಎರಡನೇ ಮಗ ವಿದ್ಯಾಭ್ಯಾಸವಿಲ್ಲದೆ ಮನೆಯಲ್ಲಿಯೇ ಉಳಿದಿದ್ದಾನೆ. ನಾನು ಮನೆಯ ಮುಂಭಾಗದಲ್ಲಿಯೇ ಬೀದಿಬದಿ ವ್ಯಾಪಾರ ಮಾಡುತ್ತಿದೆ. ಕೋವಿಡ್ ಸಂದರ್ಭದಲ್ಲಿ ಅದೂ ಮುಚ್ಚಿಹೋಯಿತು. ಗಂಡ ಗಾರೆ ಕೆಲಸ ಮಾಡಿ ಜೀವನಕ್ಕೆ ನೆರವಾಗಿದ್ದರು. ಅವರನ್ನೂ ಕಳೆದುಕೊಂಡು ಅತಂತ್ರವಾಗಿ ಬದುಕು ನಡೆಸುತ್ತಿದ್ದೇನೆ.

## ಕೇಸ್ಸ್ಟಡಿ 24

### ಶಾಲಾ ಶುಲ್ಕ ಕಟ್ಟಲು ಹಣ ಎಲ್ಲಿಂದ ಹೊಂದಿಸಲಿ. ಮಗನನ್ನು ಶಾಲೆಗೆ ಕಳುಹಿಸುವುದು ಅಸಾಧ್ಯ ಎಂದೆನಿಸುತ್ತಿದೆ.

ನನ್ನ ಹೆಸರು ವಲ್ಲಿ, 38 ವರ್ಷ. ನಾನು ಬೆಂಗಳೂರಿನ ಮಿನಿಭಕ್ಷಿ ಗಾರ್ಡನ್ ನಿವಾಸಿ. 10ವರ್ಷಗಳಿಂದ 5 ಜನರು ವಾಸಿಸಲು ಸಾಧ್ಯವಾಗದೇ ಇರುವ ಪುಟ್ಟಮನೆಯಲ್ಲಿ ನನ್ನ ಗಂಡ ಬಾಲ 45 ವರ್ಷ ಮತ್ತು ಮೂವರು ಮಕ್ಕಳು ಧನುಷ್ 17 ವರ್ಷ, ಐಶ್ವರ್ಯ 15 ವರ್ಷ ಹಾಗೂ ರಾಜೇಶ್ 13 ವರ್ಷ ಇವರೊಂದಿಗೆ ವಾಸವಾಗಿದ್ದೇನೆ. ಧನುಷ್ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಪಿ.ಯು.ಸಿ. ಓದುತ್ತಿದ್ದಾನೆ. ಎರಡನೆಯ ಮಗಳು ಸರ್ಕಾರಿ ಶಾಲೆಯಲ್ಲಿ 10ನೇ ತರಗತಿ ಓದುತ್ತಿದ್ದಾಳೆ. ಕೊನೆಯ ಮಗ ರಾಜೇಶ್ ಸೈಂಟ್ ಜೋಸೆಫ್ ಶಾಲೆಯಲ್ಲಿ ಓದುತ್ತಿದ್ದ. ಕೊರೋನಾ ಸಂದರ್ಭದಲ್ಲಿ ಶಾಲಾ ಶುಲ್ಕ ಭರಿಸಲು ಕಷ್ಟವಾಯಿತು. ಸ್ಮಾರ್ಟ್‌ಫೋನ್ ಇಲ್ಲ ಎಂಬ ಕಾರಣಕ್ಕೆ ಆನ್ಲೈನ್ ಶಿಕ್ಷಣನೂ ಪಡೆಯಲಾಗಲಿಲ್ಲ. ಆಗ ಶಾರದ ಸಮಾಜ ಶಾಲೆಗೆ ದಾಖಲು ಮಾಡಿದೆ. ಮೊದಲ ಹಂತದಲ್ಲಿ ರೂ.4000/– ಶುಲ್ಕ ಕಟ್ಟಬೇಕು ಎಂದು ಶಾಲಾಡಳಿತ ಹೇಳಿತು. ನನಗೆ ಆ ಹಣವನ್ನು ಹೊಂದಿಸಲು ಸಾಧ್ಯವಾಗಿಲ್ಲ. ಶಾಲಾ ಶುಲ್ಕ ಕಟ್ಟಿಲ್ಲ ಎಂಬ ಕಾರಣಕ್ಕೆ ನನ್ನ ಮಗು ಶಾಲೆಯಿಂದ ಹೊರಗಡೆ ಉಳಿದಿದ್ದಾನೆ. ನನ್ನ ಗಂಡ ಬಾಲ ಮೂಟೆ ಹೊರುವ ಕೆಲಸ ಮಾಡುತ್ತಿದ್ದು, ಅವರಿಗೆ ವಾರದಲ್ಲಿ 4 ದಿನ ಮಾತ್ರ ಕೆಲಸ ಸಿಗುತ್ತದೆ. ನಾನು ಪ್ಲಾಸ್ಟಿಕ್ ವಿಂಗಡನೆ ಮಾಡುವ ಕಾರ್ಮಿಕಳು. ತಿಂಗಳಲ್ಲಿ ಗರಿಷ್ಠ 10ದಿನಗಳ ಕೆಲಸ ಮಾತ್ರ ಸಿಗುತ್ತದೆ. ನನಗೆ ಬರುವ ರೂ5000/– ಕೂಲಿಯಲ್ಲಿ ನಮ್ಮ ಮನೆ ಬಾಡಿಗೆ ರೂ.3000/– ಜೊತೆಗೆ, ಕರೆಂಟ್‌ಬಿಲ್, ನೀರಿನ ಬಿಲ್, ನಮ್ಮ ಆರೋಗ್ಯದ ಖರ್ಚು ಎಲ್ಲವನ್ನೂ ನಿಭಾಯಿಸಬೇಕು. ಜೀವನ ನಡೆಸುವುದೇ ಸಂಕಷ್ಟವಾದಾಗ ರಾಜೇಶ್‌ನ ಶಾಲಾ ಶುಲ್ಕ ಕಟ್ಟಲು ಹಣ ಎಲ್ಲಿಂದ ಹೊಂದಿಸಲಿ. ಮಗನನ್ನು ಶಾಲೆಗೆ ಕಳುಹಿಸುವುದು ಅಸಾಧ್ಯ ಎಂದೆನಿಸುತ್ತಿದೆ.

## ಕೇಸ್ಸ್ಟಡಿ 25

### 2022ರ ಶಾಲಾ ಶುಲ್ಕ ಭರಿಸಲು ನನ್ನಲ್ಲಿ ಹಣನೂ ಇಲ್ಲ, ಮಗ ಕಲಿಕೆಯಿಂದ ಆಸಕ್ತಿಯೂ ಕಳೆದುಕೊಂಡು ಶಾಲೆಯಿಂದ ಹೊರಗುಳಿದಿದ್ದಾನೆ.

ನನ್ನ ಹೆಸರು ರಂಜನಿ. ನನಗೆ 32 ವರ್ಷ. ನಾನು ಮಿನಿಭಕ್ಷಿ ಗಾರ್ಡನ್, ವಾರ್ಡು ನಂಬರ್ 139

ಬೆಂಗಳೂರಿನ ನಿವಾಸಿ. ನನ್ನ ಗಂಡನ ಹೆಸರು ರಂಗ. ಅವರಿಗೆ 37ವರ್ಷ. ಅವರು ಮೂಟೆ ಹೊರುವ ಕೆಲಸ ಮಾಡುತ್ತಿದ್ದರು. ಒಂದು ತಿಂಗಳ ಹಿಂದೆ ಅನಾರೋಗ್ಯದಿಂದ ಮರಣಹೊಂದಿದ್ದಾರೆ. ನನಗೆ ಇಬ್ಬರು ಮಕ್ಕಳು. ಮೊದಲನೆಯವ ಸಂದೀಪ 17 ವರ್ಷ ಹಾಗೂ ಎರಡನೆಯ ಮಗ ದರ್ಶನ್. ಸಂದೀಪ್ 6ನೇ ತರಗತಿಯಲ್ಲಿ ಶಾಲೆಯಿಂದ ಹೊರಗುಳಿದ. ನಂತರ ಅವನು ಗಾಂಜಾ ಮತ್ತು ಇನ್ನಿತರ ಮಾದಕ ಚಟಗಳ ವ್ಯಸನಿಯಾಗಿದ್ದಾನೆ. ದರ್ಶನ್ 2 ವರ್ಷಗಳ ಹಿಂದೆ ಶಾರದ ಸಮಾಜ ಶಾಲೆಯಲ್ಲಿ 7ನೇ ತರಗತಿ ಓದುತ್ತಿದ್ದ. ಶಾಲೆ 2019–20ರ ಸಾಲಿನಲ್ಲಿ ಶಾಲಾ ಶುಲ್ಕ ರೂ.4000/– ಭರಿಸಿದೆ ಆದರೂ ಅವನು ಆನ್ಲೈನ್ ಶಿಕ್ಷಣನೂ ಪಡೆದಿಲ್ಲ. ನನ್ನಲ್ಲಿ ಸ್ಮಾರ್ಟ್‌ಫೋನ್ ತೆಗೆದುಕೊಳ್ಳುವ ಸಾಮರ್ಥ್ಯ ಇಲ್ಲ. ಹೀಗಾಗಿ ಕಲಿಕೆಯಿಂದ ಆಸಕ್ತಿಯೂ ಕಳೆದುಕೊಂಡು ಶಾಲೆಯಿಂದ ಹೊರಗುಳಿದಿದ್ದಾನೆ. ಈಗ 2022ರಲ್ಲಿ ಶಾಲಾ ಶುಲ್ಕ ಭರಿಸಲು ನನ್ನಲ್ಲಿ ಹಣನೂ ಇಲ್ಲ. ನಾನು ಅಂಗವಿಕಲೆ. ನನಗೆ ಬರುವ ಪಿಂಚಣಿ ಹಣದಲ್ಲಿ ಜೀವನ ನಡೆಸಬೇಕಾಗಿದೆ. ನಾನು ಸಂಜೆಯ ಸಮಯದಲ್ಲಿ ಒಂದು ಪುಟ್ಟ ಅಂಗಡಿಯಿಟ್ಟು ಕಬಾಬು ವ್ಯಾಪಾರಮಾಡುತ್ತೇನೆ. ದಿನದಲ್ಲಿ ರೂ.50/– ರಿಂದ ರೂ.100/– ಆದಾಯ ಪಡೆಯುತ್ತಿದ್ದೇನೆ. ಮನೆಯ ಬಾಡಿಗೆ ರೂ.2000/– , ಕರೆಂಟ್ ಬಿಲ್, ನೀರಿನ ಬಿಲ್ ಇವುಗಳನ್ನು ಪಾವತಿಸುವುದೇ ಕಷ್ಟಕರವಾಗಿದೆ.

## ಕೇಸ್ಟಡಿ 26

### ಶಾಲಾ ಶುಲ್ಕ ಕಟ್ಟಿಲ್ಲವಾದ್ದರಿಂದ 2020ರಿಂದ ಅವಳು ಶಾಲೆಗೆ ಮರುದಾಖಲಾಗಲೇ ಇಲ್ಲ.

ನನ್ನ ಹೆಸರು ಸೀತಾ. ನನಗೆ 25ವರ್ಷ. ಬೆಂಗಳೂರಿನ ವಾರ್ಡು ನಂಬರ್ 139ರ ಆನಂದಪುರಂ ಏರಿಯಾದಲ್ಲಿ ವಾಸವಾಗಿದ್ದೇನೆ. ನನ್ನ ಗಂಡನ ಹೆಸರು ಪ್ರಭು 38 ವರ್ಷ. ನನಗೆ ಇಬ್ಬರು ಮಕ್ಕಳು. ನಿಕಿತಾ 8 ವರ್ಷ ಮತ್ತು ಚೋಟು 5 ವರ್ಷ. ನನ್ನ ಗಂಡ 2019ರಲ್ಲಿ ಚಾಮರಾಜಪೇಟೆಯಲ್ಲಿರುವ ಅಗರ್‌ಬತ್ತಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಪ್ರತಿದಿನ ರೂ.500/– ದಿನಗೂಲಿ ಪಡೆಯುತ್ತಿದ್ದರು. 2019ರಲ್ಲಿ ನಾನು ನನ್ನ ಮಗಳಾದ ನಿಕಿತಾಳನ್ನು ವಿಲ್ಲಿಂಗ್ಟನ್ ಶಾಲೆಗೆ ದಾಖಲಾತಿ ಮಾಡಿದ್ದೆ. ಮಗಳ ವಿದ್ಯಾಭ್ಯಾಸಕ್ಕಾಗಿ ಪ್ರತೀ ತಿಂಗಳು ರೂ.2000/– ಶಾಲಾ ಶುಲ್ಕ ಕಟ್ಟಲೇಬೇಕಾಗಿತ್ತು. ನಾನು ರೂ.15000/– ತನಕ ಹಣ ಪಾವತಿಸಿದ್ದೆ. ರೂ.5000/– ಮಾತ್ರ ಬಾಕಿ ಉಳಿದಿತ್ತು. 2019ರಲ್ಲಿ ನನ್ನ ಗಂಡ ಕೆಲಸ ಮಾಡುತ್ತಿದ್ದ ಅಗರ್‌ಬತ್ತಿ ಕಾರ್ಖಾನೆ ಬೇರೆಡೆಗೆ ವರ್ಗಾವಣೆಗೊಂಡಿತು. ನನ್ನ ಗಂಡ ಕೆಲಸ ಕಳೆದುಕೊಂಡರು. ನನ್ನ ಮಗಳ ಶಾಲಾ ಶುಲ್ಕ ಕಟ್ಟಿಲ್ಲವಾದ್ದರಿಂದ 2020ರಿಂದ ಅವಳು ಶಾಲೆಗೆ ಮರುದಾಖಲಾಗಲೇ ಇಲ್ಲ. ಹೀಗಾಗಿ ಅವಳು 2020–21–22ರ ಸಾಲಿನಲ್ಲಿ ಶಾಲೆಯಿಂದ ಹೊರಗುಳಿದಿದ್ದಾಳೆ.

## ಕೇಸ್ಟಡಿ 27

### ಆನ್ಲೈನ್ ಶಿಕ್ಷಣನೂ ಪಡೆದಿಲ್ಲ. ಶಾಲಾಡಳಿತ 2ವರ್ಷದ ಆನ್ಲೈನ್ ಶುಲ್ಕ ಭರಿಸಲು ಬಹಳ ಒತ್ತಡ ಹೇರುತ್ತಿದ್ದಾರೆ.

ನನ್ನ ಹೆಸರು ಉಮಾ 36 ವರ್ಷ. ನಾನು ವಾರ್ಡು ನಂ 138, ಆಂಜನಪ್ಪ ಗಾರ್ಡನ್‌ನಲ್ಲಿ ವಾಸವಾಗಿದ್ದೇನೆ, ನಾನು ಆಶಾ ಕಾರ್ಯಕರ್ತೆ. ನನಗೆ ರೂ.4000/– ತಿಂಗಳ ಸಂಭಾವನೆ ಸಿಗುತ್ತದೆ. ನನ್ನ ಗಂಡ ರಾಜಶೇಖರ್ 38 ವರ್ಷ, ಆಟೋ ಡ್ರೈವರ್ ಆಗಿ ದುಡಿಯುತ್ತಿದ್ದಾರೆ. ಕೋವಿಡ್ ಸಮಯದಲ್ಲಿ ಆಟೋ ಚಾಲನೆಗೆ ನಿರ್ಭಂಧ ಹಾಕಿದ್ದುದರಿಂದ ಮನೆಯಿಂದ 2ಕಿ.ಮೀ ದೂರದಲ್ಲಿ ಆಟೋ ನಿಲ್ಲಿಸುವಂತಾಯಿತು. 2 ರಿಂದ 3 ತಿಂಗಳು ಆಟೋ ಚಲಾಯಿಸದೇ ಇದ್ದುದರಿಂದ, ಆಟೋ ಓಡಿಸುವ ಸ್ಥಿತಿಯಲ್ಲಿರಲಿಲ್ಲ. ಅದರ ರಿಪೇರಿಗೆ ತಗಲುವ ಖರ್ಚು ರೂ.1ಲಕ್ಷ ಅಪಾರವಾಗಿತ್ತು. ನಮ್ಮ ಬಳಿ ಅಷ್ಟು ಹಣವೂ ಇರಲಿಲ್ಲ. ನನ್ನ ಮಕ್ಕಳಾದ ಪ್ರೀತಮ್ 11ವರ್ಷ ಮತ್ತು ಗೌತಮ್ 8ವರ್ಷ ಇಬ್ಬರೂ ಸೈಂಟ್ ಜೋಸೆಫ್ ಶಾಲೆಯಲ್ಲಿ ಓದುತ್ತಿದ್ದರು. ಇಬ್ಬರಿಗೂ ತಲಾ ರೂ.20000/– ರಿಂದ ರೂ.25000/– ವಾರ್ಷಿಕ ಶುಲ್ಕ ಪಾವತಿಸಬೇಕಿತ್ತು. ಕೋವಿಡ್ ಪ್ರಾರಂಭವಾದ ಮೇಲೆ ನಮಗೆ ಅಷ್ಟು ಶಾಲಾ ಶುಲ್ಕ ಭರಿಸಲು ಸಾಧ್ಯವಾಗಿಲ್ಲ. ನಮ್ಮ ಇಬ್ಬರು ಮಕ್ಕಳು ಆನ್ಲೈನ್ ಶಿಕ್ಷಣನೂ ಪಡೆದಿಲ್ಲ. ಶಾಲಾಡಳಿತ 2 ವರ್ಷದ ಆನ್ಲೈನ್ ಶುಲ್ಕ ಭರಿಸಲು ಬಹಳ ಒತ್ತಡ ಹೇರುತ್ತಿದ್ದಾರೆ. ನನ್ನ ಗಂಡನಿಗೂ ಕೆಲಸವಿಲ್ಲ. ಸಣ್ಣದಾಗಿ ಬ್ಯೂಟಿಪಾರ್ಲರ್ 2019ರಲ್ಲಿ ಆರಂಭಿಸಿದ್ದೆ. ಅದೂ ಕೂಡ ನೆಲಕಚ್ಚಿ ಹೋಗಿದೆ. ನನಗೆ ಬರುವ ತಿಂಗಳ ಸಂಭಾವನೆಯಲ್ಲಿ ರೂ.3000/– ಮನೆ ಬಾಡಿಗೆ ಕಟ್ಟಬೇಕಾಗಿದೆ. ನನ್ನ ಇಬ್ಬರು ಮಕ್ಕಳು ಶಾಲೆಯಿಂದ ಹೊರಗಡೆ ಉಳಿದಿರುವುದು ನನಗೆ ಬಹಳ ದುಃಖವಾಗುತ್ತಿದೆ.

## ಕೇಸ್ಟಡಿ 28

### ಇಲ್ಲಿಯ ತನಕ ಆಂಗ್ಲ ಮಾಧ್ಯಮದಲ್ಲಿ ಓದಿ ಕನ್ನಡ ಭಾಷಾ ಮಾಧ್ಯಮದಲ್ಲಿ ಓದು ಅರ್ಥಮಾಡಿಕೊಳ್ಳುವುದು ಹಾಗೂ ಗ್ರಹಿಸುವುದು ಕಷ್ಟ

ನನ್ನ ಹೆಸರು ಅರುಣಿಮಾ. ನನಗೆ 35 ವರ್ಷ. ನಾನು

ವಾರ್ಡು ನಂ 138, ಆಂಜನಪ್ಪ ಗಾರ್ಡನ್‌ನಲ್ಲಿ ವಾಸವಾಗಿದ್ದೇನೆ, ನನ್ನ ಗಂಡನ ಹೆಸರು ಜಾರ್ಜ್, 42 ವರ್ಷ. ಕಳೆದ 5 ವರ್ಷಗಳಿಂದ ಕ್ಷಯರೋಗ ಪೀಡಿತರಾಗಿದ್ದು, ಅಧಿಕ ರಕ್ತದೊತ್ತಡ ಕಾಯಿಲೆಯಿಂದ ಬಳಲುತ್ತಿದ್ದು, ಕುಡಿತದ ಚಟವೂ ಇದೆ. ನನಗೆ 4 ಮಕ್ಕಳು. ಹಿರಿಯ ಮಗ ತೇಜಸ್ 20 ವರ್ಷ, ದಿನಗೂಲಿ ಕೆಲಸ. ಅವನಿಗೆ ವಾರದಲ್ಲಿ 2 ರಿಂದ 3 ದಿನ ಮಾತ್ರ ಕೆಲಸ ಸಿಗುತ್ತದೆ. ಒಂದು ತಿಂಗಳಿನಿಂದ ಅವನೂ ಕ್ಷಯ ರೋಗದಿಂದ ಬಲಳುತ್ತಿದ್ದಾನೆ. ಎರಡನೆಯ ಮಗ ಗುಂಡ, 18 ವರ್ಷ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ 12ನೇ ತರಗತಿ ಓದುತ್ತಿದ್ದಾನೆ. ಮೂರನೆಯವಳು ಜೆನಿಫರ್ 13 ವರ್ಷ ಮತ್ತು ಕೊನೆಯ ಮಗಳು ಜನನಿ 9 ವರ್ಷ ವಿಲ್ಲಿಂಗ್ಟನ್ ಶಾಲೆಯಲ್ಲಿ ಓದುತ್ತಿದ್ದರು. ನಾನು ಚೌಲ್ಟ್ರಿ ಕಾರ್ಮಿಕಳು. ಕೊರೋನಾ ಮೊದಲು ತಿಂಗಳಿಗೆ 15 ರಿಂದ 20 ದಿನಗಳ ಕೆಲಸ ನನಗೆ ಸಿಗುತ್ತಿತ್ತು. ಚೌಲ್ಟ್ರಿಗಳು ಕೊರೋನಾ ಸಂದರ್ಭದಲ್ಲಿ ಮುಚ್ಚಿದ ಕಾರಣ-ಕ್ಕೆ ನನಗೆ ದುಡಿಮೆಯೇ ಇಲ್ಲದಂತಾಯಿತು. ನಂತರ ಆರಂಭವಾದರೂ ತಿಂಗಳಲ್ಲಿ 4-5 ದಿನ ಮಾತ್ರ ಉದ್ಯೋಗ ಸಿಗುತ್ತದೆ. ನನ್ನ ಗಂಡನ ವೈದ್ಯಕೀಯ ಖರ್ಚು, ಹಸಿವು ಎಲ್ಲದಕ್ಕೂ ಹಣ ಬೇಕಾಗಿರುವುದರಿಂದ ಮಕ್ಕಳ ಶುಲ್ಕ ಪಾವತಿಸಲು ಹಣವಿರಲಿಲ್ಲ. ನನ್ನ ಮಕ್ಕಳಿಗೆ ಆನ್ಲೈನ್ ಶಿಕ್ಷಣ ಪಡೆಯಲೂ ಸಾಧ್ಯವಾಗಿಲ್ಲ ಕಾರಣ ಶಾಲಾಡಳಿತ ಅದಕ್ಕೂ ಶುಲ್ಕ ವಿಧಿಸಿತ್ತು. ಈಗ ಮಕ್ಕಳನ್ನು ಕನ್ನಡ ಸರ್ಕಾರಿ ಶಾಲೆಗೆ ಸೇರಿಸೋಣ ಎಂದು ಯೋಚಿಸಿದರೂ ಅವರು ಕಲಿತದ್ದು ಇಲ್ಲಿಯ ತನಕ ಆಂಗ್ಲ ಮಾಧ್ಯಮದಲ್ಲಿ, ಇನ್ನು ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಮುಂದುವರಿಕೆ ಬಹಳ ಕಷ್ಟವಾಗುತ್ತದೆ, ನಮಗೆ ಗ್ರಹಿಸಲು ಸಾಧ್ಯವಿಲ್ಲ ಎನ್ನುತ್ತಾರೆ ಮಕ್ಕಳು. ನನ್ನ ಮಕ್ಕಳು ಶಾಲೆಯಿಂದ ಹೊರಗಡೆಯಿರುವುದು ಬಹಳ ನೋವನ್ನುಂಟು ಮಾಡಿದೆ. ಇಂತಹ ಅತಂತ್ರ ಸ್ಥಿತಿಯಲ್ಲಿ ನಾನು ಬದುಕುತ್ತಿದ್ದೇನೆ.

## ಕೇಸ್ಟಡಿ 29

### ಏರಿಯಾದಲ್ಲಿ ಸರ್ಕಾರಿ ಶಾಲೆಗಳಿಲ್ಲ, ನಮಗೆ ಸಮೀಪವಿರುವ ಶಾಲೆಯಲ್ಲಿ ನಮ್ಮ ಮಗುವಿಗೆ ಆರ್.ಟಿ.ಇ. ಸೀಟು ಸಿಗಬೇಕು

ನನ್ನ ಹೆಸರು ಅಶ್ವಿನಿ. ನಾನು ಬೆಂಗಳೂರಿನ ವಾರ್ಡ ನಂಬರ್ 139ರ ಆನಂದಪುರಂ ಏರಿಯಾದಲ್ಲಿ ವಾಸಿಸುತ್ತಿದ್ದೇನೆ, ನನ್ನ ಗಂಡನ ಹೆಸರು ಕುಮರೇಶ್. ಪೈಟಿಂಗ್ ಕೆಲಸ ಮಾಡುತ್ತಿದ್ದಾರೆ. ನನಗೆ ಇಬ್ಬರು ಮಕ್ಕಳು. ಮೊದಲನೆಯ ಮಗು ಕೆವಿನ್ 7 ವರ್ಷ. ಎರಡನೆಯ ಮಗು ಯಶ್ಮಿತಾ 2 ವರ್ಷ. ನನ್ನ ಗಂಡನಿಗೆ ವಾರದಲ್ಲಿ ಕೇವಲ 3 ಅಥವಾ 4 ದಿನ ಮಾತ್ರ ಕೆಲಸ ಸಿಗುತ್ತದೆ. ದಿನಗೂಲಿಯಾಗಿ ರೂ.300 ಕೂಲಿ ಪಡೆಯುತ್ತಾರೆ. ನನ್ನ ಮಗನಿಗೆ ಆರ್.ಟಿ.ಇ. ಸೀಟು ಪಡೆಯಲೆಂದು ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಮಾಡಲು ತಹಶೀಲ್ದಾರ್ ಕಛೇರಿಗೆ ಹೋದರೆ ಅಲ್ಲಿ ರೂ.1500/- ನೀಡಿ ನಿಮಗೆ ಕೂಡಲೆ ಜಾತಿ ಪ್ರಮಾಣಪತ್ರ ಹಾಗೂ ಆದಾಯ ಪ್ರಮಾಣಪತ್ರ ಸಿಗುತ್ತದೆ ಎಂದರು. ನನ್ನಲ್ಲಿ ಅಷ್ಟು ಹಣನೂ ಇರಲಿಲ್ಲ. ಹೀಗಾಗಿ ಆರ್.ಟಿ.ಇ.ಯಲ್ಲಿ ಅರ್ಜಿ ಹಾಕುವುದು ಕಷ್ಟವಾಯಿತು. ನಮ್ಮ ಕುಟುಂಬಕ್ಕೆ ಲಾಕ್ಡೌನ್ ಸಮಯದಲ್ಲಿ ಜೀವನ ನಡೆಸುವುದು ಕಷ್ಟವಾದಾಗ ರೂ.15000/- ಸಾಲ ತೆಗೆದುಕೊಂಡಿದ್ದೇವೆ. ನಮ್ಮ ಆನಂದಪುರಂ ಏರಿಯಾದಲ್ಲಿ ಸರ್ಕಾರಿ ಶಾಲೆಗಳಿಲ್ಲ. ಹೀಗಾಗಿ ನಮಗೆ ಸಮೀಪವಿರುವ ಶಾಲೆಯಲ್ಲಿ ನಮ್ಮ ಮಗುವಿಗೆ ಆರ್.ಟಿ.ಇ. ಸೀಟು ಸಿಗಬೇಕು ಎಂಬುದು ನಮ್ಮ ಆಶಯ.

## ಕೇಸ್ಟಡಿ 30

### ನಮ್ಮ ಕೊನೆಯ ಮಗ ರಿಕ್ಷಿತ್‌ನನ್ನು ಶಾಲೆಗೆ ದಾಖಲಾತಿ ಮಾಡಲಿಲ್ಲ.

ನನ್ನ ಹೆಸರು ಕಾವೇರಿ, ನನಗೆ 32 ವರ್ಷ. ನಾನು ಬೆಂಗಳೂರಿನ ವಾರ್ಡ ನಂಬರ್ 139ರ ಆನಂದಪುರಂ ಏರಿಯಾದಲ್ಲಿ ವಾಸಿಸುತ್ತಿದ್ದೇನೆ, ನನ್ನ ಗಂಡನ ಹೆಸರು ಸಂಜಯ್ 34 ವರ್ಷ. ನನಗೆ 4 ಮಕ್ಕಳಿದ್ದಾರೆ. ಮೊದಲನೆಯ ಮಗಳು ಐಶ್ವರ್ಯ 13 ವರ್ಷ. ಇವಳಿಗೆ ರೂ.36000/- ಶಾಲಾ ಶುಲ್ಕ ಕಟ್ಟಿ ವಿಲ್ಲಿಂಗ್ಟನ್ ಶಾಲೆಯಲ್ಲಿ 8ನೇ ತರಗತಿ ಓದುತ್ತಿದ್ದಾಳೆ. ಎರಡನೆಯ ಮಗಳು ಸಂಜನಾ 12 ವರ್ಷ. ಇವಳಿಗೂ ರೂ.34000/- ಶಾಲಾ ಶುಲ್ಕ ಕಟ್ಟಿ 6ನೇ ತರಗತಿಯಲ್ಲಿ ವಿಲ್ಲಿಂಗ್ಟನ್ ಶಾಲೆಯಲ್ಲಿ ಓದುತ್ತಿದ್ದಾಳೆ. ಮೂರನೆಯ ಮಗು ದೀಪಿಕ 10 ವರ್ಷ. ಮೂರನೇ ಮಗು ಭವನ್‌ಗೆ ಆರ್.ಟಿ.ಇ. ಸೀಟು ಸಿಕ್ಕಿದೆ. ಕೊನೆಯ ಮಗು ರಕ್ಷಿತ್ 8 ವರ್ಷ. ಇವನನ್ನು ಶಾಲೆಗೆ ದಾಖಲು ಮಾಡಿಲ್ಲ. ನನ್ನ ಮೊದಲ ಎರಡು ಮಕ್ಕಳ ಶಾಲಾ ಶುಲ್ಕವನ್ನು ಸಾಲ ಮಾಡಿಯೇ ಕಟ್ಟಿದ್ದೇನೆ. ಮೂರನೆಯ ಮಗುವಿಗೂ ಆರ್.ಟಿ.ಇ. ಸೀಟು ಪಡೆದುಕೊಂಡಿದ್ದರೂ ರೂ.14000/- ಶಾಲಾ ಶುಲ್ಕ ಪಾವತಿಸಿದ್ದೇನೆ. ನಾನು ಗೃಹಿಣಿ. ನನ್ನ ಗಂಡ ಕೆ.ಆರ್. ಮಾರ್ಕೆಟ್‌ನಲ್ಲಿ ತರಕಾರಿಯನ್ನು ಬೀದಿಬದಿ ಮಾರಾಟ ಮಾಡುವ ಸಣ್ಣ ವ್ಯಾಪಾರಸ್ಥರು. ನಮ್ಮ ಮನೆಯ ಬಾಡಿಗೆ, ಆಹಾರ, ಆರೋಗ್ಯ, ವಿದ್ಯುತ್ ಬಿಲ್, ನೀರಿನ ಬಿಲ್ ಎಲ್ಲ ಖರ್ಚುಗಳನ್ನು ನನ್ನ ಗಂಡನೇ ನೋಡಿಕೊಳ್ಳಬೇಕಾಗಿದೆ. ಮಕ್ಕಳ ಶಾಲಾ ಶುಲ್ಕ, ಮನೆ ನಡೆಸಲು ಒಟ್ಟು ರೂ.1ಲಕ್ಷ ಸಾಲ ಮಾಡಿ ಅದಕ್ಕೆ ಶೇ.10% ಬಡ್ಡಿ ಕಟ್ಟಬೇಕಾಗಿದೆ. ಹೀಗಾಗಿ ನಾವು ನಮ್ಮ ಕೊನೆಯ ಮಗ ರಿಕ್ಷಿತ್‌ನನ್ನು ಶಾಲೆಗೆ ದಾಖಲಾತಿ ಮಾಡಿಲ್ಲ.

## ಕೇಸ್ಸ್ಟಡಿ 31

### ಸಾಲವಿರುವುದರಿಂದ ಮಕ್ಕಳನ್ನು ಶಾಲೆಗೆ ಸೇರಿಸಿಲ್ಲ.

ನನ್ನ ಹೆಸರು ಕಲ್ಯೆವಾಣಿ 21 ವರ್ಷ. ನಾನು ಬೆಂಗಳೂರಿನ ವಾರ್ಡ ನಂಬರ್ 139ರ ಆನಂದಪುರಂ ಏರಿಯಾದಲ್ಲಿ ವಾಸಿಸುತ್ತಿದ್ದೇನೆ, ನನ್ನ ಗಂಡನ ಹೆಸರು ರಾಜು 31 ವರ್ಷ. ಇವರು ಪೈಂಟರ್ ಕೆಲಸ ಮಾಡುತ್ತಿದ್ದಾರೆ. 9 ತಿಂಗಳಿಂದ ಇವರು ಕೆಲಸವಿಲ್ಲದೆ ಮನೆಯಲ್ಲಿಯೇ ಉಳಿದಿದ್ದಾರೆ. ಈ ಹಿಂದೆ ಇವರಿಗೆ ರೂ.700/– ದಿನಗೂಲಿ ಸಿಗುತ್ತಿತ್ತು. ನಮಗೆ 4 ಮಕ್ಕಳಿದ್ದಾರೆ. ಮೊದಲನೆಯ ಮಗ ಇಮ್ಯಾನುವೆಲ್ 11 ವರ್ಷ. ಇವನು 5ನೇತರಗತಿಯಲ್ಲಿ ಕಸ್ತೂರಿಬಾಯಿ ಶಾಲೆಯಲ್ಲಿ ಓದುತ್ತಿದ್ದಾನೆ. ಎರಡನೆಯ ಮಗಳು ರೋಜಾ 9 ವರ್ಷ. 1ನೇ ತರಗತಿಯಲ್ಲಿ ಕಸ್ತೂರಿಬಾಯಿ ಶಾಲೆಯಲ್ಲಿ ಓದುತ್ತಿದ್ದಾಳೆ. ಪ್ರತೀ ಮಗುವಿಗೂ ರೂ.5500/– ಶಾಲಾ ಫೀಸು ಕಟ್ಟಬೇಕು. ನಾನು ಕೇವಲ ರೂ.3000/– ಮಾತ್ರ ಪಾವತಿಸಿದ್ದೇನೆ. ಮೂರನೆಯ ಮಗು ಲಕ್ಷಿತಾಳಿಗೆ 7 ವರ್ಷ. ಆದ–'ರೆ ನನ್ನಲ್ಲಿ ಶಾಲಾ ಶುಲ್ಕ ಕಟ್ಟಲು ಹಣವಿಲ್ಲದ ಕಾರಣ ಇನ್ನೂ ಆಕೆ ಮನೆಯಲ್ಲಿಯೇ ಉಳಿದಿದ್ದಾಳೆ. ನಾಲ್ಕನೆಯ ಮಗು ನಿತೀಶ 1ನೇ ತರಗತಿ. ನಮ್ಮ ಮನೆ ಬಾಡಿಗೆ ರೂ.3000/– ಪ್ರತೀ ತಿಂಗಳು ಕಟ್ಟುವುದೂ ಕಷ್ಟಕರವಾಗಿದೆ. ನಾನು ಕೋವಿಡ್ ಸಂದರ್ಭದಲ್ಲಿ ಹಾಗೂ ಆರೋಗ್ಯ ಸೇವೆ ಪಡೆಯಲು ರೂ.120000/– ಸಾಲ ಮಾಡಿದ್ದೇನೆ. ಶೇ10 ರಂತೆ 12500/– ರೂ ಬಡ್ಡಿ ಹಣ ಕಟ್ಟಬೇಕು. ಈ ಸ್ಥಿತಿಯಲ್ಲಿ ನಮ್ಮ ಮಕ್ಕಳ ಶಿಕ್ಷಣ ಮುಂದುವರಿಸಲು ಬಹಳ ಒತ್ತಡವಾಗುತ್ತಿದೆ.

## ಕೇಸ್ಸ್ಟಡಿ 32

### ಮಗುವಿನ ಶಾಲಾ ಶುಲ್ಕ ಭರಿಸದೆ ಶಾಲೆಯಲ್ಲಿ ಮಗುವನ್ನು ಪರೀಕ್ಷೆ ಬರೆಯಲು ಬಿಡುತ್ತಿಲ್ಲ.

ನನ್ನ ಹೆಸರು ಇಂದ್ರಾಣಿ. ನನಗೆ 28 ವರ್ಷ. ನಾನು ಬೆಂಗಳೂರಿನ ವಾರ್ಡ ನಂಬರ್ 139ರ ಆನಂದಪುರಂ ಏರಿಯಾದಲ್ಲಿ ವಾಸಿಸುತ್ತಿದ್ದೇನೆ, ನನ್ನ ಗಂಡನ ಹೆಸರು ರವೀಂದ್ರನ್. ಅವರಿಗೆ 35 ವರ್ಷ. ಇವರು ಪೈಂಟ–ರ್ ಕೆಲಸ ಮಾಡುತ್ತಾರೆ. ನನಗೆ ಇಬ್ಬರು ಮಕ್ಕಳು. ಮೊದಲನೆಯವಳು ರೋಹಿತ್ 7 ವರ್ಷ. 1ನೇ ತರಗತಿಯಲ್ಲಿ ಖಾಸಗಿ ಶಾಲೆಯಲ್ಲಿ ಓದುತ್ತಿದ್ದಾಳೆ. ಶಾಲಾ ಶುಲ್ಕ ರೂ.13000/– ಶಾಲೆಗೆ ಪಾವತಿಸಿಬೇಕು. ನಾನು ಕೇವಲ ರೂ.4000/– ಮಾತ್ರ ಶಾಲೆಗೆ ಕಟ್ಟಿದ್ದೇನೆ. ಇನ್ನೂ ಉಳಿದ ಹಣ ಕಟ್ಟಲು ಬಾಕಿಯಿದೆ. ಈಗ ಮಗು ಪರೀಕ್ಷೆ ಬರೆಯಬೇಕಾದರೆ ಶಾಲಾ ಶುಲ್ಕ ಪಾವತಿಸಬೇಕೆಂದು ಒತ್ತಡ ಹಾಕುತ್ತಿದ್ದಾರೆ. ಲಾಕ್ಡೌನ್ ಸಮಯದ ರೂ.50000/– ಪಾವತಿಸಲಿಲ್ಲ. ನನಗೆ ಜೀವನ ನಡೆಸುವುದೇ ಕಷ್ಟವಾಗಿದೆ.

## ಕೇಸ್ಸ್ಟಡಿ 33

### ನಾನು ಜೀವನ ನಡೆಸಲು ಕಷ್ಟಪಡುತ್ತಿರುವಾಗ ಮಗುವಿನ ಶಾಲಾ ಶುಲ್ಕ ಭರಿಸುವುದಾದರೂ ಹೇಗೆ?

ನನ್ನ ಹೆಸರು ಸುಮಿತ್ರ. 24 ವರ್ಷ. ನಾನು ಬೆಂಗಳೂರಿನ ವಾರ್ಡ ನಂಬರ್ 139ರ ಆನಂದಪುರಂ ಏರಿಯಾದಲ್ಲಿ ವಾಸಿಸುತ್ತಿದ್ದೇನೆ, ನನ್ನ ಗಂಡ ಪ್ರಶಾಂತ್. ಇವರಿಗೆ 24 ವರ್ಷ. ಕಳೆದ 7 ವರ್ಷಗಳಿಂದ ನಾನು ನನ್ನ ಗಂಡನಿಂದ ದೂರ ಉಳಿದಿದ್ದೇನೆ. ನನಗೆ ಒಬ್ಬಳು ಮಗಳು ಹೆಸರು ರಿತಿಕಾ. ಇವಳನ್ನು ಇನ್ನೂ ಶಾಲೆಗೆ ದಾಖಲು ಮಾಡಲಿಲ್ಲ. ನಾನು ಕೋವಿಡ್ ಲಾಕ್ಡೌನ್‌ಗಿಂತ ಮೊದಲು ಬೆಂಗಳೂರು ಪ್ರಸ್ನಲ್ಲಿ ಕೆಲಸ ಮಾಡುತ್ತಿದ್ದೆ ಹಾಗೂ ರೂ.7000/– ತಿಂಗಳಿಗೆ ದುಡಿಯುತ್ತಿದ್ದೆ. ನಂತರ ತಿಂಗಳಲ್ಲಿ ಕೇವಲ 10 ದಿನ ಮಾತ್ರ ಕೆಲಸ ಸಿಗುತ್ತಿತ್ತು. ಆಗ ಕೇವಲ ರೂ.250/– ದಿನಗೂಲಿ ಸಿಗುತ್ತಿತ್ತು. ಮನೆ ಬಾಡಿಗೆಗೆ ಮುಂಗಡ ಪಾವತಿಸಲು ರೂ.30000/– ಸಾಲ ಮಾಡಬೇಕಾಯಿತು. ನಾನು ಜೀವನ ನಡೆಸಲು ಕಷ್ಟಪಡುತ್ತಿರುವಾಗ ಮಗುವಿನ ಶಾಲಾ ಶುಲ್ಕ ಭರಿಸುವುದಾದರೂ ಹೇಗೆ?

## ಕೇಸ್ಸ್ಟಡಿ 34

### ನನ್ನ ಮಕ್ಕಳು ಸುಸಜ್ಜಿತವಾದ ಶಾಲೆಯಲ್ಲಿ ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣ ಪಡೆಯಬೇಕು ಎಂಬ ಆಸೆಯಿದೆ.

ನನ್ನ ಹೆಸರು ಸುಗಂಧಿ. ನಾನು ಬೆಂಗಳೂರಿನ ವಾರ್ಡ ನಂಬರ್ 139ರ ಆನಂದಪುರಂ ಏರಿಯಾದಲ್ಲಿ ವಾಸಿಸುತ್ತಿದ್ದೇನೆ, ನನಗೆ 25 ವರ್ಷ, ನನ್ನ ಗಂಡನ ಹೆಸರು ಪ್ರಶಾಂತ್ 29ವರ್ಷ. ನಮಗೆ ಮೂವರು ಮಕ್ಕಳಿದ್ದಾರೆ. ಮೊದಲನೆಯವಳು ಪ್ರಗ್ಯ 8 ವರ್ಷ. 2ನೆಯ ಮಗು ಪ್ರನನ್ಯ 6 ವರ್ಷ. ಇಬ್ಬರನ್ನೂ ಇನ್ನೂ ಶಾಲೆಗೆ ದಾಖಲಾತಿ ಮಾಡಲಿ. ಕಾರಣ ಆರ್ಥಿಕ ಸಮಸ್ಯೆ. ನನ್ನ ಗಂಡ ಶಾಮಿಯಾನ ಅಂಗಡಿಯಲ್ಲಿ ದುಡಿಯುತ್ತಿದ್ದಾರೆ. ತಿಂಗಳಲ್ಲಿ ಕೇವಲ 10 ದಿನ ಮಾತ್ರ ಕೆಲಸವಿದೆ. ಅವರಿಗೆ ದಿನಗೂಲಿ ರೂ.400/– ಮಾತ್ರ ಸಿಗುತ್ತದೆ. ಬರುವ ಈ ಹಣದಲ್ಲಿ ಮನೆಯ ಬಾಡಿಗೆ, ಇತರ ಜೀವನೋಪಾಯದ ಖರ್ಚು ನಿಭಾಯಿಸುವುದೇ ಕಷ್ಟವಾಗಿದೆ. ಇನ್ನು ಮಕ್ಕಳ ಶಾಲಾ ಶುಲ್ಕ ಕಟ್ಟುವುದಾದರೂ ಹೇಗೆ? ನಮ್ಮ ಮನೆಯ ಸಮೀಪ ಯಾವುದೇ ಸರ್ಕಾರಿ ಶಾಲೆಗಳಿಲ್ಲ. ನಾನು

ಕೇವಲ 7ನೇ ತರಗತಿ ಮಾತ್ರ ಓದಿದ್ದೇನೆ. ನನ್ನ ಮಕ್ಕಳು ಸುಸಜ್ಜಿತವಾದ ಶಾಲೆಯಲ್ಲಿ ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣ ಪಡೆಯಬೇಕು ಎಂಬ ಆಸೆಯಿದೆ.

## ಕೇಸ್ಟಡಿ 35

### ಆರ್.ಟಿ.ಇ.ಯಲ್ಲಿ ಅರ್ಜಿ ಸಲ್ಲಿಸಿದ್ದರೂ ಸೀಟು ಸಿಗಲಿಲ್ಲ, ಮಕ್ಕಳು ಚೆನ್ನಾಗಿ ವಿದ್ಯೆ ಕಲಿಯಬೇಕು ಎಂಬ ಬಯಕೆ ನಮ್ಮದು

ನನ್ನ ಹಸರು ಕೌಶಲ್ಯ. ನನಗೆ 28 ವರ್ಷ. ನಾನು ಬೆಂಗಳೂರಿನ ವಾರ್ಡ ನಂಬರ್ 139ರ ಆನಂದಪುರಂ ಏರಿಯಾದಲ್ಲಿ ವಾಸಿಸುತ್ತಿದ್ದೇನೆ. ನನ್ನ ಗಂಡನ ಹೆಸರು ಸಂಜು, ಅವರಿಗೆ 34 ವರ್ಷ. ಅವರು ಶಾಮಿಯಾನ ಅಂಗಡಿಯಲ್ಲಿ ದಿನಗೂಲಿ ಕಾರ್ಮಿಕರು. ಕೇವಲ ಹಬ್ಬ ಹರಿದಿನಗಳು ಹಾಗೂ ಸಮಾರಂಭಗಳಿರುವ ಸಂದರ್ಭಗಳಲ್ಲಿ ಮಾತ್ರ ಅವರಿಗೆ ಕೆಲಸ ಸಿಗುತ್ತದೆ. ಬೇರೆ ದಿನಗಳಲ್ಲಿ ಮನೆಯಲ್ಲಿಯೇ ಉಳಿದಿರುವರು. ನನಗೆ ಇಬ್ಬರು ಮಕ್ಕಳು. ನವೀನ್ 7 ವರ್ಷ. ಇನ್ನೂ ಶಾಲೆಗೆ ಸೇರಿಸಲಿಲ್ಲ. ಕಿರಿಯ ಮಗ ತನ್ವಿ ಮೂರು ವರ್ಷ. ಹಿರಿಯ ಮಗನಿಗೆ ಆರ್.ಟಿ.ಇ. ಯಲ್ಲಿ ಅರ್ಜಿ ಸಲ್ಲಿಸಿದ್ದರೂ ಸೀಟು ಸಿಗಲಿಲ್ಲ. ನಾನು, ನನ್ನ ಗಂಡ ಇಬ್ಬರೂ ಅನಕ್ಷರಸ್ಥರು. ನಮ್ಮ ಮಕ್ಕಳು ಚೆನ್ನಾಗಿ ವಿದ್ಯೆ ಕಲಿಯಬೇಕು ಎಂಬ ಬಯಕೆ ನಮ್ಮದು. ಆದರೆ ನಮ್ಮ ಮಕ್ಕಳ ಭವಿಷ್ಯಕ್ಕೆ ಬೇಕಾದ ಶಿಕ್ಷಣವನ್ನು ನೀಡಲು ಆಗುತ್ತಿಲ್ಲ. ನಮಗೆ ಬಾಡಿಗೆ ಹಣ ಕಟ್ಟಲೂ ಸಾಧ್ಯವಾಗದೆ, ಪ್ರಸ್ತುತವಾಗಿ ಸಂಬಂಧಿಕ ಮನೆಯಲ್ಲಿಯೇ ಉಳಿದುಕೊಂಡಿದ್ದೇವೆ.

## ಕೇಸ್ಟಡಿ 36

### ನಮ್ಮ ಮನೆಗೆ 19 ವರ್ಷದ ನನ್ನ ಮಗಳೇ ಜೀವನಾಧಾರ, ಪಾರ್ಶ್ವವಾಯು ತಗಲಿದ ನನಗೆ ನನ್ನ ಮಕ್ಕಳ ಶಿಕ್ಷಣದ ಭವಿಷ್ಯ ರೂಪಿಸಲು ಸಾಧ್ಯವಾಗುತ್ತಿಲ್ಲ.

ನನ್ನ ಹೆಸರು ವೆಂಡ 34 ವರ್ಷ. ನಾನು ಈಗ ಬೆಂಗಳೂರಿನ ವಾರ್ಡ ನಂಬರ್ 139ರ ಭಕ್ಷಿಗಾರ್ಡನ್ ಏರಿಯಾದಲ್ಲಿ ವಾಸಿಸುತ್ತಿದ್ದೇನೆ, ನನ್ನ ಗಂಡನ ಹೆಸರು ರಾಜು 40 ವರ್ಷ. ಅವರು ವೆಲ್ಡಿಂಗ್ ಕೆಲಸ ಮಾಡುತ್ತಾರೆ. ಮದ್ಯಪಾನ ವ್ಯಸನಿಯೂ ಆಗಿರುವರು. ನನಗೆ 4 ಮಕ್ಕಳು. ಮೊದಲನೆಯವಳು ಸತ್ಯ 19ವರ್ಷ. 10ನೇ ತರಗತಿ ಮಾತ್ರ ಓದಿದ್ದಾಳೆ. 2ನೇ ಮಗಳು ದರ್ಶಿನಿ 15 ವರ್ಷ; ಮೂರನೆಯ ಮಗಳು ವೈಷ್ಣವಿ 13 ವರ್ಷ ಮತ್ತು ನಾಲ್ಕನೆಯ ಮಗ ರಕ್ಷನ್ 10 ವರ್ಷ. ನನ್ನ ಮೂರು ಮಕ್ಕಳು ಕಳೆದ 2020ರಿಂದ ಇಲ್ಲಿಯವರೆಗೂ ಶಾಲೆಗೆ ಹೋಗುತ್ತಿಲ್ಲ. ದರ್ಶನಿ ಹಾಗೂ ವೈಷ್ಣವಿ ಸೈಂಟ್ ಥೆರೆಸಾ ಶಾಲೆಯಲ್ಲಿ ಎರಡು ವರ್ಷದ ಹಿಂದೆ ಓದುತ್ತಿದ್ದರು. ಕೇವಲ ರೂ.5000/– ಶಾಲಾ ಶುಲ್ಕ ಕಟ್ಟಬೇಕಿತ್ತು. ನನಗೆ ಅದನ್ನೂ ಕಟ್ಟಲು ಸಾಧ್ಯವಾಗಿಲ್ಲ. ಕೊನೆಯ ಮಗ ರಕ್ಷನ್, ಶಾರದಾ ಶಾಲೆಯಲ್ಲಿ 2019ರ ತನಕ ವಿದ್ಯಾಭ್ಯಾಸ ಮಾಡುತ್ತಿದ್ದ. ಅವನಿಗೂ ರೂ.4000/– ಶಾಲಾ ಶುಲ್ಕ ಭರಿಸಲಾಗದೆ ಅವನೂ ಮನೆಯಲ್ಲಿಯೇ ಉಳಿದಿದ್ದಾನೆ. ಕೋವಿಡ್ ಬರುವ ಮೊದಲು ಗೃಹಕಾರ್ಮಿಕಳಾಗಿ ದುಡಿಯುತ್ತಿದ್ದೆ. ಹೇಗೋ ಜೀವನ ಕಷ್ಟಪಟ್ಟು ನಿಭಾಯಿಸುತ್ತಿದ್ದೆ. ಕೋವಿಡ್ ಲಾಕ್ಡೌನ್ ಸಮಯದಲ್ಲಿ ಆ ಕೆಲಸಕ್ಕೂ ಚ್ಯುತಿ ಬಂತು. ಯಾರೂ ಮನೆ ಕೆಲಸ ನೀಡಲು ತಯಾರಿರಲಿಲ್ಲ. ಈ ಕಾರಣದಿಂದಲೇ ನನ್ನ ಹಿರಿಯ ಮಗಳು ಪದವಿ ತರಗತಿಗೂ ಹೋಗದೆ, ಶಿಕ್ಷಣ ನಿಲ್ಲಿಸಿ ದುಡಿಯಲು ಆರಂಭಿಸಿದ್ದಾಳೆ. ಅವಳು ದುಡಿದು ತಂದ ರೂ.8000/– ನಮ್ಮ ಮನೆಯ ಎಲ್ಲಾ ಖರ್ಚು ನಿಭಾಯಿಸಬೇಕು. ನಾನು ಮನೆ ನಡೆಸಲು ಮಾಡಿರುವ ಸಾಲ ರೂ.1 ಲಕ್ಷ. ಈ ಸಾಲಕ್ಕೆ ಚಕ್ರಬಡ್ಡಿ ಕಟ್ಟಬೇಕು. ಈಗ ಇದು ರೂ.3ಲಕ್ಷವಾಗಿದೆ. ನನಗೂ ಪಾರ್ಶ್ವವಾಯು ಆಗಿದ್ದು, ಆಸ್ಪತ್ರೆಗೂ ಹೋಗಲು ಕಷ್ಟವಾಗಿದೆ. ಹೀಗಿರುವಾಗ ಮಕ್ಕಳ ಶಿಕ್ಷಣದ ಭವಿಷ್ಯ ಹೇಗೆ ರೂಪಿಸಲಿ?

## ಕೇಸ್ಟಡಿ 37

### ಕೋವಿಡ್‌ನಿಂದ ಉಂಟಾದ ಆರ್ಥಿಕ ಸಂಕಷ್ಟ ನಮ್ಮ ಮಗುವನ್ನು ಶಿಕ್ಷಣದಿಂದ ಹೊರಗುಳಿಯುವಂತೆ ಮಾಡಿದೆ.

ನನ್ನ ಹೆಸರು ಮಂಜು ಬಾನು. ನನಗೆ 48 ವರ್ಷ. ನಾನು ಬೆಂಗಳೂರಿನ ವಾರ್ಡ ನಂಬರ್ 139ರ ಆನಂದಪುರಂ ಏರಿಯಾದಲ್ಲಿ ವಾಸಿಸುತ್ತಿದ್ದೇನೆ, ನನ್ನ ಗಂಡನ ಹೆಸರು ಜಮೀರ್ 52 ವರ್ಷ. ಕೆ.ಆರ್. ಮಾರ್ಕೆಟ್‌ನಲ್ಲಿ ಬೀದಿಬದಿಯಲ್ಲಿ ತರಕಾರಿ ವ್ಯಾಪಾರ ಮಾಡುತ್ತಾರೆ. ನಮ್ಮ ಮಗ ಜಬಿಗೆ 13ವರ್ಷ. 2019ರಲ್ಲಿ ಇವನನ್ನು ಟ್ರಿನಿಟಿ ಶಾಲೆಗೆ ರೂ.20000/– ಶುಲ್ಕ ಪಾವತಿಸಿ ದಾಖಲಾತಿ ಮಾಡಿದ್ದೆ. ಆದರೆ ಲಾಕ್ಡೌನ್ ನಂತರ ನಮ್ಮ ಮನೆಯಲ್ಲಿ ಆರ್ಥಿಕ ಸಂಕಷ್ಟ ಎದುರಾಯಿತು. ಇಲ್ಲಿಯವರೆಗೂ ಸುಮಾರು ರೂ.1ಲಕ್ಷ ಸಾಲಮಾಡಿದ್ದೇವೆ. ಅವನ ಶಾಲಾ ಶುಲ್ಕ ಕಟ್ಟಲಾಗದೆ, ಆನ್ಲೈನ್ ಶಿಕ್ಷಣದಿಂದ ನಮ್ಮ ಮಗ ಹೊರಗುಳಿಯುವಂತಾಯಿತು. ಈಗಲೂ ಶಾಲೆಗೆ ಸೇರಿಸಿಲ್ಲ. ಮನೆಯಲ್ಲಿಯೇ ಉಳಿದಿದ್ದಾನೆ.

## ಕೇಸ್ಸ್ಟಡಿ 38

### ಆನ್ಲೈನ್ ಶಿಕ್ಷಣವಿಲ್ಲದೆ, ಯಾವುದೇ ಇತರ ಕಲಿಕೆಯೂ ಇಲ್ಲದೆ ನಮ್ಮ ಮಕ್ಕಳು ಮುಂದಿನ ತರಗತಿಗೆ ಸೇರ್ಪಡೆಯಾಗಿದ್ದಾರೆ ಅವರ ಗುಣಾತ್ಮಕ ಕಲಿಕೆ ಹೇಗೆ?

ನನ್ನ ಹೆಸರು ಕೌಸಲ್ಯ 30 ವರ್ಷ. ನಾನು ಬೆಂಗಳೂರಿನ ವಾರ್ಡ್ ನಂಬರ್ 139ರ ಜಾಲಿಮೊಹಲ್ಲಾದ ನಿವಾಸಿ. ನನ್ನ ಗಂಡ ಮುನಿಸ್ವಾಮಿ 35 ವರ್ಷ. ನನಗೆ ಮೂರು ಮಕ್ಕಳು. ಮೊದಲನೆಯವಳು ಮಹಾಲಕ್ಷ್ಮಿ 13 ವರ್ಷ, 7ನೇ ತರಗತಿಯಲ್ಲಿ ಸೈಂಟ್ ಥೆರೆಸಾ ಶಾಲೆಯಲ್ಲಿ ಓದುತಿದ್ದಾಳೆ; ಇವಳು ಯಾವುದೇ ಆನ್ಲೈನ್ ಶಿಕ್ಷಣ ಪಡೆಯಲಿಲ್ಲ. ನಮ್ಮಲ್ಲಿ ಸ್ಮಾರ್ಟ್‌ಫೋನು ಇರಲಿಲ್ಲ. ಆದ‌ರೂ ನೇರವಾಗಿ 7ನೇ ತರಗತಿ ಓದಬೇಕಾದ ಅನಿವಾರ್ಯ ಸ್ಥಿತಿ. 5ನೇ ತರಗತಿಯ ನಂತರ ಶಾಲೆಯಲ್ಲಿ ಎಲ್ಲರೂ ಪಾಸ್, ಮುಂದಿನ ತರಗತಿಗೆ ತೇರ್ಗಡೆ ಎಂದರು. ಆದರೆ ಮಗುವಿನ ಕಲಿಕೆ ಏನಾಯಿತು ಎಂಬ ಪ್ರಶ್ನೆ ಹಾಗೆಯೇ ಉಳಿದುಕೊಂಡಿದೆ. ಆನ್ಲೈನ್ ತರಗತಿಗೆ ಶುಲ್ಕ ನೀಡಿ ಶಾಲಾ ಕಲಿಕೆ ಮುಂದುವರೆಸುವಷ್ಟು ಹಣಕಾಸು ನನ್ನಲ್ಲಿಲ್ಲ. ಈ ವರ್ಷ ರೂ.4500/– ಶಾಲೆಗೆ ಶೈಕ್ಷಣಿಕ ಶುಲ್ಕ ಕಟ್ಟಲೇಬೇಕು. ಆದರೆ ನಾನು ಕೇವಲ ರೂ.2500/– ಮಾತ್ರ ಪಾವತಿಸಿದ್ದೇನೆ. ಇನ್ನೂ ಬಾಕಿಯಿರುವ ಶುಲ್ಕ ಪಾವತಿಸುವಂತೆ ಶಾಲಾಡಳಿತ ಒತ್ತಡ ಹಾಕುತ್ತಿದ್ದಾರೆ. ಪರೀಕ್ಷೆ ಪತ್ರ ಕೊಡುವುದಿಲ್ಲ ಎಂದೂ ಹೇಳಿ ಬೆದರಿಕೆ ಒಡ್ಡುತ್ತಿದ್ದಾರೆ. ಎರಡನೆಯ ಮಗ ನಿತಿನ್ 11 ವರ್ಷ. ಇವನನ್ನು ವಿಸ್ಡಂ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಆರ್.ಟಿ.ಇ. ಸೀಟು ಪಡೆದು ಸೇರಿಸಿದ್ದರೂ ಪ್ರತೀ ವರ್ಷ ಒಟ್ಟಾರೆ ರೂ.13000/– ಕಟ್ಟಬೇಕು. ಕೇವಲ ಸಮವಸ್ತ್ರ ಹಾಗೂ ಪುಸ್ತಕಕ್ಕೆ ರೂ.7000/– ಕಟ್ಟಬೇಕು. ಬಿಲ್ ಕೊಡುತ್ತಾರೆ. ಉಳಿದ ರೂ.5000/– ಕಟ್ಟಿರುವುದಕ್ಕೆ ಯಾವುದೇ ಬಿಲ್ ಇಲ್ಲ. 2020–21ರ ಸಾಲಿನಲ್ಲಿ 2ನೇ ತರಗತಿ ನಡೆಯಲಿಲ್ಲ. ನಿತಿನ್ ಶಾಲಾ ವ್ಯವಸ್ಥೆ ಆನ್ಲೈನ್ ಶಿಕ್ಷಣ ಆರಂಭಿಸಿದ್ದರು. ಆದರೆ ನಮ್ಮಲ್ಲಿ ಆನ್ಲೈನ್ ಸೇವೆಯಾಧಾರಿತ ಶಿಕ್ಷಣ ಕೊಡುವ ಸಾಮರ್ಥ್ಯ ಇರಲಿಲ್ಲ. ಇನ್ನು ಕೊನೆಯ ಮಗ ರಿತಿಕ್ 8 ವರ್ಷ, ಇವನನ್ನು ಪ್ರೆಸೆಂಟ್ ಶಾಲೆಗೆ 2019ರಲ್ಲಿ ಎಲ್.ಕೆ.ಜಿ.ಗೆ ರೂ.4000/– ಶಾಲಾ ಶುಲ್ಕ ಕಟ್ಟಿ ದಾಖಲಿಸಿದ್ದೆ. ಕೋವಿಡ್ ಹಿನ್ನೆಲೆಯಲ್ಲಿ ಆತ ಯು.ಕೆ.ಜಿ. ವಿದ್ಯಾಭ್ಯಾಸನೂ ಪಡೆಯಲಿಲ್ಲ. ಈಗ 1ನೇ ತರಗತಿಯಲ್ಲಿರುವ ನನ್ನ 3ನೇ ಮಗುವಿನ ಬಾಕಿ ಶಾಲಾ ಶುಲ್ಕ ರೂ.10000/– ಪಾವತಿಸಲೇ ಬೇಕೆಂದು ಶಾಲಾಡಳಿತ ಒತ್ತಾಯಿಸಿದೆ. ಹಾಗೆಯೇ ಶುಲ್ಕ ಕಟ್ಟದಿದ್ದಲ್ಲಿ ಪರೀಕ್ಷೆ ಬರೆಸುವುದಿಲ್ಲ ಎಂದಿದ್ದಾರೆ. ಮಗುವನ್ನು ಪ್ರತಿದಿನ ಎಲ್ಲರ ಮುಂದೆ ನಿಲ್ಲಿಸಿ ಶುಲ್ಕ ಕೇಳುತ್ತಿದ್ದು ಅವರಿಗೆ ಬೇಸರವಾಗುತ್ತಿದೆ. ನನ್ನ ಗಂಡ ಮೂಟೆ ಹೊರುವ ಕೆಲಸವನ್ನು ಮಾಡುತ್ತಾರೆ. ವಾರದಲ್ಲಿ 2 ರಿಂದ 3 ದಿನ ಮಾತ್ರ ಕೆಲಸ ಸಿಗುತ್ತದೆ. ಕೇವಲ ರೂ.400 ರೂಪಾಯಿ ಅವರ ದಿನಗೂಲಿ. ನಾನು ಕೂಲಿ ಕಾರ್ಮಿಕಳು. ನನಗೆ ಮಾಸಿಕ ರೂ.9000/– ಸಿಗುತ್ತದೆ. ಮನೆಯ ಬಾಡಿಗೆ, ವಿದ್ಯಾಭ್ಯಾಸ, ಆರೋಗ್ಯ ಖರ್ಚು ಎಲ್ಲವನ್ನೂ ನಿಭಾಯಿಸುವುದು ಕಷ್ಟವಾಗಿದೆ. ಮಕ್ಕಳ ಶೈಕ್ಷಣಿಕ ಶುಲ್ಕ ಭರಿಸುವುದಾದರೂ ಹೇಗೆ?

## ಕೇಸ್ಸ್ಟಡಿ 39

### ಇಲ್ಲಿಯ ತನಕ ಮಕ್ಕಳು ಇಂಗ್ಲೀಷ್ ಮಾಧ್ಯಮದಲ್ಲಿ ಓದಿದ್ದಾರೆ. ಈಗ ಕನ್ನಡ ಮಾಧ್ಯಮಕ್ಕೆ ಸೇರಿಸಿದರೆ ಅವರಿಗೆ ಓದು ಅರ್ಥವಾಗದು

ನನ್ನ ಹೆಸರು ಚಂದ್ರಿಕಾ. ವಯಸ್ಸು 31 ವರ್ಷ. ನಾನು ಬೆಂಗಳೂರಿನ ವಾರ್ಡು ನಂಬರದ 139ರ ಭಕ್ಷಿ ಗಾರ್ಡನ್ ನಿವಾಸಿ. ನನ್ನ ಗಂಡನ ಹೆಸರು ಧನರಾಜ್ 40 ವರ್ಷ. ಆಟೋ ಚಾಲಕರಾಗಿ ದುಡಿಯುತ್ತಿದ್ದರು. ಕೋವಿಡ್ ಸಂದರ್ಭದಲ್ಲಿ ಆಟೋ ಚಾಲನೆಗೆ ನಿರ್ಬಂಧ ಹೇರಿತ್ತು ಸರ್ಕಾರ. ತದನಂತರದಲ್ಲಿ ಗಂಡ ನಿರಂತರವಾಗಿ ಅನಾರೋಗ್ಯದಿಂದ ಇದ್ದಾರೆ. ನನಗೆ ಇಬ್ಬರು ಮಕ್ಕಳು. ಮೊದಲನೆಯ ಮಗ ದಿಲೀಪ್ 15ವರ್ಷ, ಸನ್ ಕ್ಯಾಥರಿನ್ ಶಾಲೆಯಲ್ಲಿ ಓದುತ್ತಿದ್ದಾನೆ. ಶಾಲಾ ದಾಖಲಾತಿ ವೇಳೆ ರೂ.30000/– ಶುಲ್ಕ ಪಾವತಿಸಿದ್ದೆವು. ಎರಡನೆಯ ಮಗು ಪ್ರೀತಿ 6ನೇ ತರಗತಿಯಲ್ಲಿ ಅದೇ ಶಾಲೆಯಲ್ಲಿ ಓದುತ್ತಿದ್ದಾಳೆ. ಅವಳಿಗೂ ರೂ.30000/– ಶಾಲಾ ಶುಲ್ಕ ಪಾವತಿಸಿದ್ದೆ. ಕಳೆದೆರಡು ವರ್ಷದಿಂದ ಆನ್ಲೈನ್ ತರಗತಿ ಆರಂಭಿಸಿದ್ದರಿಂದ ನನ್ನ ಮಕ್ಕಳು ಶಿಕ್ಷಣದಿಂದ ಹೊರಗುಳಿಯುವಂತಾಯಿತು. ನಮ್ಮ ಮನೆಯಲ್ಲಿ ಸ್ಮಾರ್ಟ್‌ಫೋನು ಇಲ್ಲ. ಮನೆಯ ಬಾಡಿಗೆ ರೂ.4000/– ಹೊಂದಿಸಬೇಕು. ನಮ್ಮ ಮನೆಯಲ್ಲಿ 4ಜನರು ವಾಸ ಮಾಡುವಷ್ಟು ಜಾಗವಿಲ್ಲ. ಸರ್ಕಾರಿ ಶಾಲೆಗೆ ಸೇರಿಸೋಣ ಎಂದರೆ ಇಲ್ಲಿಯ ತನಕ ಮಕ್ಕಳು ಇಂಗ್ಲೀಷ್ ಮಾಧ್ಯಮದಲ್ಲಿ ಓದಿದ್ದಾರೆ. ಈಗ ಕನ್ನಡ ಮಾಧ್ಯಮಕ್ಕೆ ಸೇರಿಸಿದರೆ ಅವರಿಗೆ ಓದು ಅರ್ಥವಾಗದು. ಒಂದು ಕಡೆ ಶಾಲಾ ಶುಲ್ಕ ಕಟ್ಟಲು ಸಾಧ್ಯವಾಗದೆ ಇನ್ನೊಂದೆಡೆ ಸರ್ಕಾರಿ ಶಾಲೆಗೂ ಮಗುವನ್ನು ಸೇರಿಸಲಾಗದೆ ಅತಂತ್ರ ಸ್ಥಿತಿಯಲ್ಲಿದ್ದೇವೆ.

## ಕೇಸ್ಟಡಿ 40

### ಆನ್ಲೈನ್ ಶಿಕ್ಷಣವೂ ಇಲ್ಲ, ಶಾಲಾ ಶುಲ್ಕ ಕಟ್ಟಲೂ ಹಣವಿಲ್ಲ, ಶಾಲಾ ವಿದ್ಯಾಭ್ಯಾಸದಿಂದ ಮಕ್ಕಳು ಹೊರಗಿದ್ದಾರೆ.

ನನ್ನ ಹೆಸರು ಮುರುಗನ್ 33 ವರ್ಷ. ನಾನು ಬೆಂಗಳೂರಿನ ವಾರ್ಡು ನಂಬರ್ 138ರ ಫ್ಲವರ್ ಗಾರ್ಡನ್ ನಿವಾಸಿ. ನನ್ನ ಹೆಂಡತಿಯ ಹೆಸರು ಶಾಲಿನಿ.30 ವರ್ಷ. ನನಗೆ 3 ಮಕ್ಕಳು. ಮೊದಲನೆಯ ಮಗು ಅಕ್ಷಿತಾ 13 ವರ್ಷ. ವೆಲ್ಲಿಂಗ್ಟನ್ ಶಾಲೆಯಲ್ಲಿ 20000/– ರೂಪಾಯಿ ಶಾಲಾ ಶುಲ್ಕ ಕಟ್ಟಿ ಓದಿಸುತ್ತಿದ್ದೆ. ಈ ವರ್ಷ ಶೇ.50% ರಷ್ಟು ಶಾಲಾ ಶುಲ್ಕ ಪಾವತಿಸಿದ್ದೇವೆ. ಈ ಕಾರಣಕ್ಕೆ ಬಾಕಿ ಶುಲ್ಕ ಪಾವತಿಸಿ, ಇಲ್ಲವಾದಲ್ಲಿ ಮಗುವನ್ನು ಪರೀಕ್ಷೆ ಬರೆಯಲು ಬಿಡುವುದಿಲ್ಲ ಎಂದಿದ್ದಾರೆ. ಇನ್ನು 2ನೆಯ ಮಗು ಅಖಿಲ್‌ಗೆ 9ವರ್ಷ. 2ವರ್ಷಗಳ ಹಿಂದೆ ವಿಲ್ಲಿಂಗ್ಟನ್ ಶಾಲೆಗೆ ಸೇರಿಸಿದ್ದೆ. ಹಾಗೆಯೇ ಕೊನೆಯ ಮಗು ಸಾಧನಾಳನ್ನು ಸೈಂಟ್ ಥೆರೆಸಾ ಇಂಗ್ಲೀಷ್ ಶಾಲೆಯಲ್ಲಿ ರೂ.25000/– ಶುಲ್ಕ ಪಾವತಿಸಿ 2 ವರ್ಷದ ಹಿಂದೆ ಓದಿಸುತ್ತಿದ್ದೆ. ನನ್ನ ಕೊನೆಯ ಇಬ್ಬರೂ ಮಕ್ಕಳು 2ವರ್ಷದಿಂದ ವಿದ್ಯಾಭ್ಯಾಸದಿಂದ ಸಂಪೂರ್ಣವಾಗಿ ಹೊರಗುಳಿದಿದ್ದಾರೆ. ಆನ್ಲೈನ್ ಶಿಕ್ಷಣ ಪಡೆಯಲೂ ಶೈಕ್ಷಣಿಕ ಶುಲ್ಕ ಪಾವತಿಸಬೇಕು ಎಂದಾಗ ನಮ್ಮಲ್ಲಿ ಹಣವಿರಲಿಲ್ಲ. ನಾನು ಸ್ಟೀಲ್ ಅಂಗಡಿಯಲ್ಲಿ ದುಡಿದರೆ, ನನ್ನ ಹೆಂಡತಿ ಹೌಸ್ ಕೀಪಿಂಗ್ ಕೆಲಸ ಮಾಡುತ್ತಾರೆ. ನಮ್ಮ ಮಕ್ಕಳ ಶಾಲಾ ಶುಲ್ಕ ಭರಿಸುವಷ್ಟು ಶಕ್ತರಾಗಿಲ್ಲ. ಹೀಗಾಗಿ ಮಕ್ಕಳು ಶಾಲೆಯಿಂದ ಹೊರಗುಳಿಯುವಂತಾಗಿದೆ.

## ಕೇಸ್ಟಡಿ 41

### ನಮ್ಮ ಮಕ್ಕಳ ವಿದ್ಯಾಭ್ಯಾಸ ನೆನೆಗುದಿಗೆ ಹೋಗುತ್ತಿದ್ದು ಬಹಳ ದುಃಖವಾಗುತ್ತಿದೆ.

ನನ್ನ ಹೆಸರು ಸುಮತಿ. ನನಗೆ 34 ವರ್ಷ. ನಾನು ಬೆಂಗಳೂರಿನ ವಾರ್ಡು ನಂಬರ್ 138ರ ಫ್ಲವರ್ ಗಾರ್ಡನ್ ನಿವಾಸಿ. ನನ್ನ ಗಂಡನ ಹೆಸರು ಸಂಪತ್ 39ವರ್ಷ. ನನಗೆ 5 ಮಕ್ಕಳಿದ್ದಾರೆ. ಮೊದಲನೆಯ ಮಗು ಓವಿಯಾ 13 ವರ್ಷ. 2 ವರ್ಷಗಳ ಹಿಂದೆ ಆಲ್‌ಮಾಸ್ ಇಂಗ್ಲೀಷ್ ಶಾಲೆಯಲ್ಲಿ ಓದುತ್ತಿದ್ದನು. 2ನೆಯ ಮಗ ಸಂದೀಪ್ 10 ವರ್ಷ. 2019–20ರ ಸಾಲಿನಲ್ಲಿ ಗಣೇಶ ಶಾಲೆಯಲ್ಲಿ 4ನೇ ತರಗತಿ ಓದುತ್ತಿದ್ದಾನೆ. 3ನೆಯ ಮಗು ಸಾರಾ 9 ವರ್ಷ. ಇವಳು ಗಣೇಶ ಶಾಲೆಯಲ್ಲಿ 3ನೇ ತರಗತಿಯಲ್ಲಿ ಓದುತ್ತಿದ್ದಳು. 4ನೆಯ ಮಗು ಏಂಜಲ್ 4 ವರ್ಷ ಹಾಗೂ ಕೊನೆಯ ಮಗಳು ಅಪ್ಸಿಬಾ 11 ತಿಂಗಳು. ನನ್ನ ಮೂರು ಮಕ್ಕಳಾದ ಓವಿಯಾ, ಸಂದೀಪ್ ಮತ್ತು ಸಾರಾ ಕಳೆದ ಎರಡು ವರ್ಷಗಳಿಂದ ಸಂಪೂರ್ಣವಾಗಿ ಶಿಕ್ಷಣದಿಂದ ಹೊರಗುಳಿದ್ದಾರೆ. ಆನ್ಲೈನ್ ಶಿಕ್ಷಣ ನೀಡುವಷ್ಟು ಸವಲತ್ತುಗಳು ನಮ್ಮಲ್ಲಿ ಇಲ್ಲ. ಸ್ಮಾರ್ಟಫೋನು ಇಲ್ಲ ಎಂಬ ಕಾರಣಕ್ಕೆ ಶಿಕ್ಷಣದಿಂದ ಹೊರಗಿದ್ದಾರೆ. ನಾನು ಮನೆಗೆಲಸ ಮಾಡಿ ಬದುಕು ಸಾಗಿಸಬೇಕು. ಈಗ ಯಥಾಪ್ರಕಾರ ಶಾಲೆಗಳು ತೆರೆದಿದ್ದರೂ ನನ್ನ ಮಕ್ಕಳು ಶಾಲೆಗೆ ಸೇರುವ ಸ್ಥಿತಿಯಲ್ಲಿಲ್ಲ. ನಮ್ಮ ಮನೆಯ ಬಾಡಿಗೆ ಕಟ್ಟಲಿಲ್ಲ ಎಂದು ಮನೆ ಮಾಲೀಕರು ಬಂದು ಬಾಗಿಲ ಮುಂದೆ ನಿಂತರೆ ನಮ್ಮ ಮಕ್ಕಳ ವಿದ್ಯಾಭ್ಯಾಸ ನೆನೆಗುದಿಗೆ ಹೋಗುತ್ತಿದ್ದು ಬಹಳ ದುಃಖವಾಗುತ್ತಿದೆ.

## ಕೇಸ್ಟಡಿ 42

### 2 ವರ್ಷದ ಬಾಕಿ ಶುಲ್ಕ ಕಟ್ಟದೆ ಮಗುವಿನ ವರ್ಗಾವಣೆ ಪತ್ರ ನೀಡುವುದಿಲ್ಲ

ನನ್ನ ಹೆಸರು ರುಕ್ಸರ್ ಬಾನು. ನಾನು ಬೆಂಗಳೂರಿನ ವಾರ್ಡು ನಂಬರ್ 139ರ ಗಿರಿಪುರಂನ ನಿವಾಸಿ. ನನ್ನ ಗಂಡನ ಹೆಸರು ಸೈಯದ್ ಯಾಕುಬ್ ಅವರಿಗೆ 42 ವರ್ಷ. ನನಗೆ ಒಬ್ಬಳೇ ಮಗಳು ಹೆಸರು ಫಾತಿಮಾ ಜೊಹ್ರಾ 9 ವರ್ಷ. ಇವಳು 2019–2020ರ ಸಾಲಿನಲ್ಲಿ ಸಂತಸ ಶಾಲೆಯಲ್ಲಿ 1ನೇ ತರಗತಿ ಓದುತ್ತಿದ್ದಳು. ರೂ.23000/– ಶಾಲಾ ಶುಲ್ಕ ಪಾವತಿಸಿ ಶಾಲೆಗೆ ಸೇರಿಸಿದ್ದೆ. ನನ್ನ ಗಂಡ ಟೈಲರ್ ಕೆಲಸ ಮಾಡುತ್ತಾರೆ. ಕೋವಿಡ್ ಲಾಕ್ಡೌನ್ ನಂತರ ಹೊಲಿಗೆ ವೃತ್ತಿಯೂ ಇಲ್ಲದಂತಾಯಿತು. ಮನೆಯಲ್ಲಿಯೇ ಬಟ್ಟೆ ಹೊಲಿದು ರೂ.5000/– ಸಂಪಾದಿಸಿದರೆ ಅದರಲ್ಲಿ ಮನೆಯ ಖರ್ಚು, ಬಾಡಿಗೆ ರೂ.3000/– ಎಲ್ಲವೂ ನೋಡಿಕೊಂಡು ಜೀವನ ನಡೆಸುವುದೇ ಕಷ್ಟ. ಮಗಳ 2 ವರ್ಷದ ಶಾಲಾ ಶುಲ್ಕ ಕಟ್ಟಲಾಗಲಿಲ್ಲ. ಅದನ್ನು ಕಟ್ಟದೆ ವರ್ಗಾವಣೆ ಪತ್ರ ನೀಡುವುದಿಲ್ಲ ಎಂದು ಶಾಲಾಡಳಿತ ಮಂಡಳಿ ಹೇಳುತ್ತಿದೆ. ಮಗು ಮುಂದೆ ವಿದ್ಯಾಭ್ಯಾಸ ಪಡೆಯಬೇಕು ಆದರೆ ದಾರಿ ಕಾಣಿಸುತ್ತಿಲ್ಲ.

## ಕೇಸ್ಟಡಿ 43

### ಹೆಸರು: ಮಂಜುಳ

ಶಿಕ್ಷಣ ನಮ್ಮ ಮಕ್ಕಳ ಪಾಲಿಗೆ ನಮಗೆ ಕನಸಾಗದೆ ಅವರ ಭವಿಷ್ಯ ರೂಪುಗೊಳ್ಳುವ ಸಾಧನವಾಗಬೇಕು.

ನನ್ನ ಹೆಸರು ಮಂಜುಳ. ನನಗೆ 40 ವರ್ಷ. ಮೈಸೂರು ರಸ್ತೆಯ ಬಳಿಯ ಎಮ್.ಸಿ.ಟಿ. ಕ್ವಾರ್ಟಸ್ನಲ್ಲಿ ಸುಮಾರು 35 ವರ್ಷಗಳಿಂದ ವಾಸವಾಗಿರುತ್ತೇನೆ. ನನ್ನ ಗಂಡನ ಹೆಸರು ಮೂರ್ತಿ, 45 ವರ್ಷ ಕೋವಿಡ್ ಬರುವ

ಮುನ್ನ ಪ್ಲಂಬಿಂಗ್ ಕೆಲಸ ಮಾಡುತ್ತಿದ್ದರು. ಆಗ ಅವರಿಗೆ ಪ್ರತಿದಿನ ರೂ.500 ಸಿಗುತ್ತಿತ್ತು. ಕೋವಿಡ್ ಸಂದರ್ಭದಲ್ಲಿ ಅವರಿಗೆ ಪಾರ್ಶ್ವವಾಯುವಾಗಿ ಈಗ ಬೆಡ್‌ರಿಡನ್ ಆಗಿದ್ದಾರೆ. ಅವರಿಗೆ ಈಗ ಏನೂ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ನನಗೆ 2 ಮಕ್ಕಳು. ದೊಡ್ಡವಳು ಸಾರಿಕ 14 ವರ್ಷ, ಕೋವಿಡ್‌ಗೆ ಮುಂಚೆ 7ನೇ ತರಗತಿಯಲ್ಲಿ ಓದುತ್ತಿದ್ದಳು. ಎರಡನೆಯವಳು ಮೋನಿಕ 10 ವರ್ಷ, ಕೋವಿಡ್‌ಗೆ ಮುಂಚೆ 3ನೇ ತರಗತಿ ಓದುತ್ತಿದ್ದಳು. ಪಕ್ಕದಲ್ಲಿರುವ ಗುರುಶ್ರೀ ಶಾಲೆಯಲ್ಲಿ ವರ್ಷಕ್ಕೆ 25,000/–ರಂತೆ ಶುಲ್ಕ ಪಾವತಿ ಮಾಡಿ ಓದಿಸುತ್ತಿದ್ದೆವು. ನಂತರ ಶಾಲೆ ಆನ್‌ಲೈನ್‌ನಲ್ಲಿ ಪ್ರಾರಂಭವಾದಾಗಲೂ ಮಕ್ಕಳು ಕಲಿತಿಲ್ಲ. ಯಾಕೆಂದರೆ ಫೋನ್ ಇಲ್ಲ ಮತ್ತು ಅರ್ಧದಷ್ಟು ಶಾಲಾ ಶುಲ್ಕ ಕೂಡ ಕಟ್ಟಿಲ್ಲ. ಈಗ ನನ್ನ ಗಂಡನೂ ಕೆಲಸಕ್ಕೆ ಹೋಗುತ್ತಿಲ್ಲ. ನಾನು ಮನೆಯಲ್ಲಿದ್ದು ಅವರನ್ನು ನೋಡಿಕೊಳ್ಳುತ್ತಿದ್ದೇನೆ. ನನ್ನ ಗಂಡನ ಅಕ್ಕ ಲಕ್ಷಮಮ್ಮ ಅವರಿಗೆ ಮಕ್ಕಳಿಲ್ಲ, ಅವರೂ ನಮ್ಮ ಮನೆಯಲ್ಲಿ ಇದ್ದಾರೆ. ಅವರು ಹೂ ಹೊಲಿದು ತಂದು ಕೊಡುವ ಹಣದಲ್ಲಿ ನಾವು ಸ್ವಲ್ಪ ಊಟ ಮಾಡುತ್ತಿದ್ದೇವೆ. ಮಕ್ಕಳನ್ನು ಪಕ್ಕದಲ್ಲಿರುವ ಸರ್ಕಾರಿ ಶಾಲೆಗೆ ಸೇರಿಸೋಣವೆಂದರೆ ಮಕ್ಕಳು ಇಂಗ್ಲೀಷ್ ಮೀಡಿಯಂ ಓದಿ ಕನ್ನಡ ಓದಲು ಕಷ್ಟವಾಗುತ್ತಿದೆ ಎಂದು ಮಕ್ಕಳು ಹೋಗುತ್ತಿಲ್ಲ. 2 ವರ್ಷದಿಂದ ಮಾಡಿದ ಸಾಲ 1 ಲಕ್ಷ ರೂಪಾಯಿ, ಈಗ ಕಟ್ಟಬೇಕು. ಶಿಕ್ಷಣ ನಮ್ಮ ಮಕ್ಕಳ ಪಾಲಿಗೆ ನಮಗೆ ಕನಸಾಗದೆ ಅವರ ಭವಿಷ್ಯ ರೂಪುಗೊಳ್ಳುವ ಸಾಧನವಾಗಬೇಕು. ನಾವು ಮಾಡಿರುವ ಸಾಲಕ್ಕೆ 10% ಬಡ್ಡಿ ಕಟ್ಟಬೇಕು. ಹೀಗಾಗಿ ನಮ್ಮ ಮಕ್ಕಳು ಶಾಲೆಗೆ ಹೋಗದೆ ಮನೆಯಲ್ಲಿ ಉಳಿದಿದ್ದಾರೆ.

## ಕೇಸ್ಸ್ಟಡಿ 44

### ನನ್ನ ಮಗ ಶಾಲೆಯಿಂದ ಹೊರಗುಳಿದು ಇವತ್ತು ಕಾರ್ಮಿಕನಾಗಿ ದುಡಿಯುತ್ತಿದ್ದಾನೆ.

ನನ್ನ ಹೆಸರು ಅರಸನ್. ನನಗೆ 56 ವರ್ಷ ವಯಸ್ಸಾಗಿದೆ. ನಾನು ಮೈಸೂರು ರಸ್ತೆಯ ಎಮ್.ಸಿ.ಟಿ. ಕ್ವಾರ್ಟಸ್‌ನಲ್ಲಿ ಸುಮಾರು 20 ವರ್ಷಗಳಿಂದ ವಾಸವಾಗಿದ್ದೇನೆ. ನಾನು ಮೂರು ವರ್ಷಗಳ ಹಿಂದೆ ಪೈಂಟಿಂಗ್ ಕೆಲಸ ಮಾಡುತ್ತಿದ್ದೆ. ಈಗ ನಾನು ಯಾವುದೇ ಕೆಲಸ ಮಾಡುತ್ತಿಲ್ಲ. ಯಾಕೆಂದರೆ ನನಗೆ ಡಯಾಬಿಟಿಸ್ ಬಂದು ಅದು ಗ್ಯಾಂಗರೀನ್‌ಗೆ ತಿರುಗಿ ಈಗ ಓಡಾಡಲು ಆಗದೆ ಬೆಡ್‌ರಿಡನ್ ಆಗಿ ಮನೆಯಲ್ಲಿ ಇದ್ದೇನೆ. ನನ್ನ ಹೆಂಡತಿಯ ಹೆಸರು ಸುಮತಿ ಅವರಿಗೆ 46 ವರ್ಷ ವಯಸ್ಸಾಗಿದೆ, ಅವರು ಸರ್ಕಾರಿ ಬಸ್‌ಸ್ಟ್ಯಾಂಡಿನಲ್ಲಿ ಬಸ್‌ಗಳನ್ನು ಶುಚಿಗೊಳಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಒಂದು ಬಸ್ ಶುಚಿಗೊಳಿಸಿದರೆ ಅವರಿಗೆ ರೂ.8 ಕೊಡುತ್ತಾರೆ. ಹಾಗೆ ಪ್ರತಿದಿನ ಅವರು ರೂ.150 ಸಂಪಾದನೆ ಮಾಡುತ್ತಾರೆ. ನನಗೆ ಇಬ್ಬರು ಮಕ್ಕಳಿದ್ದು, ಮೊದಲನೆಯ ಮಗಳು ಅರ್ಪಿತ, 18 ವರ್ಷ, ಅವಳು 2ನೇ ಪಿ.ಯು.ಸಿ. ವಿಜಯ ಭಾರತಿ ಕಾಲೇಜಿನಲ್ಲಿ ಓದುತ್ತಿದ್ದಾಳೆ. ಎರಡನೆಯ ಮಗ ಸೂರ್ಯ 15 ವರ್ಷ, ಈಗ 10ನೇ ತರಗತಿ ಓದಬೇಕಾಗಿತ್ತು. ಆದರೆ ಕೋವಿಡ್ ನಿಂದ ಶಾಲಾ ಶುಲ್ಕ ಕಟ್ಟಲು ಸಾಧ್ಯವಾಗದೇ 8ನೇ ತರಗತಿಯಿಂದಲೇ ಶಾಲೆ ಬಿಟ್ಟಿರುತ್ತಾನೆ. ಅವನು ಮೌಂಟ್ ಎವರೆಸ್ಟ್ ಇಂಗ್ಲೀಷ್ ಶಾಲೆಯಲ್ಲಿ ಓದುತ್ತಿದ್ದ. ಅವನನ್ನು ಶಾಲೆಗೆ ಸೇರಿಸಲು ಹೋದಾಗ 2 ವರ್ಷದ್ದು ಸೇರಿ ಶಾಲಾ ಶುಲ್ಕ ರೂ.60,000/– ಗಳನ್ನು ಪಾವತಿಸಲು ತಿಳಿಸಿದರು. ನಮಗೆ ಅರ್ಧ ಶುಲ್ಕದ ಹಣ ಕಟ್ಟಿ ಆನ್‌ಲೈನ್ ಶಿಕ್ಷಣ ಪಡೆಯಲು ತಿಳಿಸಿದರು. ಅದಕ್ಕೂ ನಮಗೆ ದಾರಿ ಇಲ್ಲವಾಗಿ ನನ್ನ ಮಗ ಮನೆಯಲ್ಲಿದ್ದಾನೆ. ಕಳೆದ ಒಂದು ತಿಂಗಳಿನಿಂದ ಸ್ಟಿಕ್ಕರ್ ಮಾಡುವ ಕೆಲಸಕ್ಕೆ ನನ್ನ ಮಗನ ನ್ನು ಕಳುಹಿಸುತ್ತಿದ್ದೇವೆ. ದೊಡ್ಡ ಮಗಳನ್ನು ನನ್ನ ಹೆಂಡತಿಯ ಅಕ್ಕ ಓದಿಸುತ್ತಿದ್ದಾರೆ.

## ಕೇಸ್ಸ್ಟಡಿ 45

### ಶಾಲಾ ಶುಲ್ಕ ಕಟ್ಟಿಲ್ಲ ಎಂಬ ಕಾರಣಕ್ಕೆ ಮಕ್ಕಳನ್ನು ಅವಮಾನಿಸಿ ಪರೀಕ್ಷೆ ಬರೆಸಲು ಹಿಂದೇಟು ಹಾಕುತ್ತಿದೆ ಶಾಲಾಡಳಿತ.

ನನ್ನ ಹೆಸರು ಕುಮಾರಿ. ನನಗೆ 35 ವರ್ಷ ವಯಸ್ಸಾಗಿದೆ. ನಾವು ಎಮ್.ಸಿ.ಟಿ. ಸ್ಲಂನಲ್ಲಿ ಕಳೆದ 35 ವರ್ಷಗಳಿಂದ ಅಲ್ಲೇ ವಾಸವಾಗಿದ್ದೇನೆ. ಕೋವಿಡ್‌ಗೆ ಮುಂಚೆ ನಾನು ಹೌಸ್ ಕೀಪಿಂಗ್ ಕೆಲಸ ಮಾಡುತ್ತಿದ್ದೆ. ಆದ–'ರೆ ಕೋವಿಡ್ ಬಂದ ಮೇಲೆ ನನ್ನನ್ನು ಕೆಲಸಕ್ಕೆ ಬರಬೇಡಿ ಎಂದು ತಿಳಿಸಿದರು. ಹಾಗಾಗಿ ನಾನು ಈಗ ಮನೆಯಲ್ಲಿ ಹೂ ಹೊಲಿಯುತ್ತಿದ್ದೇನೆ. ಒಂದು ಕೆ.ಜಿ.ಗೆ ರೂ. 10 ಆಗಿ ಒಂದು ದಿನಕ್ಕೆ 20 ಕೆ.ಜಿ ಹೊಲಿಯುತ್ತೇನೆ. ಪ್ರತಿದಿನ ಕೆಲಸವೂ ಸಿಗುವುದಿಲ್ಲ. ನನ್ನ ಗಂಡನ ಹೆಸರು ಗೋಪಿ. ಅವರಿಗೆ 37 ವರ್ಷ, ಕೂಲಿ ಕೆಲಸಕ್ಕೆ ಹೋಗುತ್ತಾರೆ. ಅವರಿಗೆ ತಿಂಗಳಿಗೆ ರೂ. 12,000/– ಸಂಬಳ. ನನಗೆ 3 ಮಕ್ಕಳು; ಮೊದಲನೆಯವಳು ಕೃತಿಕ ಅವಳು 10ನೇ ತರಗತಿ ಓದುತ್ತಿದ್ದಾಳೆ, ಅವಳಿಗೆ ರೂ. 40,000/– ಶಾಲಾ ಶುಲ್ಕ. ಬಡ್ಡಿಗೆ ಸಾಲ ರೂಪದಲ್ಲಿ ಹಣ ಪಡೆದು ರೂ. 20,000/– ಶಾಲಾ ಶುಲ್ಕ ಪಾವತಿ ಮಾಡಿರುತ್ತೇನೆ. ಇನ್ನು ಉಳಿದ ಹಣ ಕಟ್ಟಲಿಲ್ಲವೆಂದು ಅವಳಿಗೆ ಹಾಲ್ ಟಿಕೆಟ್ ಕೊಟ್ಟಿಲ್ಲ. ಎರಡನೆಯವಳು ಶ್ರೀನಿಧಿ, ಅವಳು 8ನೇ ತರಗತಿ ಓದುತ್ತಿದ್ದಾಳೆ. ಅವಳಿಗೆ ರೂ. 28,000/–, ಮೂರನೆಯವಳು ಜಾಹ್ನವಿ, 10 ವರ್ಷ, 4ನೇ ತರಗತಿ,

ಮೂರು ಜನ ರೆಸಿಡೆನ್ಸಿ ಪಬ್ಲಿಕ್ ಶಾಲೆಯಲ್ಲಿ ಓದುತ್ತಿದ್ದಾರೆ. ಎಲ್ಲರಿಗೂ ಶಾಲೆ ಪ್ರಾರಂಭವಾದಾಗ ಸಾಲ ಮಾಡಿ ಅರ್ಧದಷ್ಟು ಶುಲ್ಕ ಪಾವತಿ ಮಾಡಿರುತ್ತೇನೆ. ರೂ. 2 ಲಕ್ಷ ಬಡ್ಡಿಗೆ ಪಡೆದು ಅದಕ್ಕೆ ತಿಂಗಳಿಗೆ ರೂ. 15000/– ಬಡ್ಡಿ ಕಟ್ಟುತ್ತಿದ್ದೇನೆ. ಈಗ ಎಲ್ಲರಿಗೂ ಪರೀಕ್ಷೆ ಇರುವುದರಿಂದ ಈಗಲೇ ಎಲ್ಲಾ ಹಣ ಪಾವತಿ ಮಾಡಿ ಇಲ್ಲದಿದ್ದರೆ ಪರೀಕ್ಷೆ ಬರೆಯಲು ಬಿಡುವುದಿಲ್ಲವೆಂದು ಹೇಳುತ್ತಿದ್ದಾರೆ. ಇದ–ರಿಂದ ನನ್ನ ಮಕ್ಕಳು ಶಾಲೆಯಲ್ಲಿ ಅವಮಾನಿತರಾಗಿ ಶಾಲೆಗೆ ಹೋಗುವುದಿಲ್ಲವೆಂದು ಹಟ ಮಾಡುತ್ತಿದ್ದಾರೆ. ನಮಗೆ ಬರುವ ಹಣದಲ್ಲಿ ನಾವು ನಮಗೆ ಸಾಲ ತೀ–ರಿಸಲೇ ಸಾಧ್ಯವಾಗುತ್ತಿಲ್ಲ. ನಮ್ಮ ಜೀವನ ಬಹಳ ದುಸ್ತರವಾಗಿದೆ.

## ಕೇಸ್ಟಡಿ 46

### ಮಕ್ಕಳ ಶಾಲಾ ಶುಲ್ಕ ಪಾವತಿಸಿಲ್ಲವಾದ್ದರಿಂದ ಮಕ್ಕಳು ಮನೆಯಲ್ಲಿಯೇ ಉಳಿದಿದ್ದಾರೆ.

ನನ್ನ ಹೆಸರು ಚಂದ್ರಕಲ. ನನಗೆ 32 ವರ್ಷ ವಯಸ್ಸಾಗಿದೆ. ನಾವು ಎಮ್.ಸಿ.ಟಿ. ಸ್ಲಂನಲ್ಲಿ ಸುಮಾರು 30 ವರ್ಷಗಳಿಂದ ವಾಸವಾಗಿದ್ದೇವೆ. ನಾನು ಮನೆಯ ಬಳಿ ಚಿಕ್ಕದಾದ ಅಂಗಡಿ ಒಂದನ್ನು ಇಟ್ಟುಕೊಂಡಿದ್ದೇನೆ. ಅದರಲ್ಲಿ ನನಗೆ ತಿಂಗಳಿಗೆ ರೂ.7000/– ಸಿಗುತ್ತದೆ. ಆದರೆ ಅದನ್ನು ನಾನು ಮತ್ತೆ ಬಂಡವಾಳವಾಗಿ ಉಪಯೋಗಿಸುತ್ತೇನೆ. ನನ್ನ ಗಂಡ ಪ್ರಶಾಂತ್ ಅವರು ಕಳೆದ 10 ವರ್ಷಗಳ ಹಿಂದೆ ಸತ್ತು ಹೋಗಿರುತ್ತಾರೆ. ಆಗಿನಿಂದ ನಾನು ಅಂಗಡಿ ಇಟ್ಟುಕೊಂಡು ನನ್ನ ಕುಟುಂಬವನ್ನು ನೋಡಿಕೊಳ್ಳುತ್ತಿದ್ದೇನೆ. ನನಗೆ ಇಬ್ಬರು ಮಕ್ಕಳು. ಮೊದಲನೆಯವಳು ಕೌಸಲ್ಯ, ಅವಳಿಗೆ 19 ವರ್ಷ, ಅವಳು 10ನೇ ತರಗತಿ ಫೇಲಾಗಿ ಮನೆಯಲ್ಲಿ ಇದ್ದಾಳೆ. ಎರಡನೆಯ ಮಗ ಮನೋಜ್ ಕುಮಾರು, ವಯಸ್ಸು 15 ವರ್ಷ, 10ನೇ ತರಗತಿ ಓದಬೇಕಾಗಿ–ತ್ತು. ಆದರೆ 2 ವರ್ಷದಿಂದ ಶುಲ್ಕ ಕಟ್ಟಲಿಕ್ಕೆ ಆಗದ ಕಾರಣ 8ನೇ ತರಗತಿಯಿಂದ ಮನೆಯಲ್ಲೇ ಇದ್ದಾನೆ. ಶಾಲೆ ಪ್ರಾರಂಭವಾದಾಗ ನಾನು ಅವನನ್ನು ಶಾಲೆಗೆ ಕರೆದುಕೊಂಡು ಹೋಗಿದ್ದಾಗ ಅವನಿಗೆ ರೂ.10,000/– ಮುಂಗಡ ಹಣ ಕಟ್ಟಲು ತಿಳಿಸಿದರು. ಆದರೆ ನನಗೆ ಅದು ಸಾಧ್ಯವಾಗದೆ ಸ್ವಲ್ಪ ಸಮಯ ಕೇಳಿದೆವು. ಅವರು ಬರೀ 2 ತಿಂಗಳು ಸಮಯ ಕೊಟ್ಟರು, ಅಷ್ಟರಲ್ಲಿ ನನಗೂ ಹಣ ಹೊಂದಿಸಲು ಸಾಧ್ಯವಾಗಲಿಲ್ಲ. ಇದರಿಂದ ನನ್ನ ಮಗ ಇನ್ನು ಶಾಲೆಗೆ ಹೋಗದೆ ಮನೆಯಲ್ಲೇ ಇದ್ದಾನೆ. ನನಗೆ ಈಗಾಗಲೇ ರೂ.2 ಲಕ್ಷ ಸಾಲವಿದ್ದು, ಅದರ ಬಡ್ಡಿ ತೀರಿಸಲು ಆಗದೆ ಕಷ್ಟ ಪಡುತ್ತಿದ್ದೇನೆ. ಹೀಗಾಗಿ ನನ್ನ ಮಗ ಮನೆಯಲ್ಲೇ ಇದ್ದಾನೆ.

## ಕೇಸ್ಟಡಿ 47

### ಮಕ್ಕಳ ಶಾಲಾ ಶುಲ್ಕ ಕಟ್ಟಲು ಹಣವಿಲ್ಲ.

ನನ್ನ ಹೆಸರು ಸುಧಾ. ವಯಸ್ಸು 36 ವರ್ಷ ವಯಸ್ಸಾಗಿದೆ. ನಾನು ಆಂಜನಪ್ಪ ಗಾರ್ಡನ್ ಏರಿಯಾದಲ್ಲಿ ವಾಸವಾಗಿದ್ದಾರೆ. ಕೋವಿಡ್‌ಗೆ ಮುಂಚೆ ನಾನು ಅಂಗನವಾಡಿಯಲ್ಲಿ ಸಹಾಯಕಿ ಆಗಿ ಕೆಲಸ ಮಾಡುತ್ತಿದ್ದೆ. ನನಗೆ ಮೂರನೇ ಮಗು ಹೆರಿಗೆ ಆಗಿದ್ದುದರಿಂದ ನಾನು ಅಲ್ಲಿ ಕೆಲಸ ಬಿಡಬೇಕಿತ್ತು. ನನಗೆ ತಿಂಗಳಿಗೆ ಅಲ್ಲಿ ರೂ.4000/– ಸಿಗುತ್ತಿತ್ತು. ನನ್ನ ಗಂಡನ ಹೆಸರು ಆನಂದರಾಜ್. ವಯಸ್ಸು, 45 ವರ್ಷ, ಕೆಲಸ ಪೈಂಟ–ರ್ ಆಗಿ ದುಡಿಯುತ್ತಿದ್ದಾರೆ. ಅವರಿಗೆ ವಾರದಲ್ಲಿ 2–3 ದಿನ ಕೆಲಸ ಸಿಗುತ್ತದೆ. ಕೆಲಸವಿದ್ದರೆ ರೂ.300–350 ಸಂಪಾದನೆ ಮಾಡುತ್ತಾರೆ. ಆದರೆ ಅವರಿಗೆ ಕುಡಿತದ ಚಟವಿದ್ದು, ನಮ್ಮನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ. ಮೊದಲನೆಯ ಮಗಳು ಅನುಷ್ಕ. ವಯಸ್ಸು 10 ವರ್ಷ, ಈಗ 4ನೇ ತರಗತಿ ಓದಬೇಕಾಗಿತ್ತು. ಆದರೆ ಕೋವಿಡ್ ಬಂದ ಮೇಲೆ ಶಾಲೆಯ ಶುಲ್ಕ ಕಟ್ಟಲಾಗದೇ ಅವಳು 2ನೇ ತರಗತಿಯಲ್ಲಿ ಶಾಲೆ ಬಿಟ್ಟಿರುತ್ತಾಳೆ. ಅವಳು ಪಕ್ಕದಲ್ಲಿರುವ ಅಲ್ಮಾಸ್ ಶಾಲೆಯಲ್ಲಿ ಓದುತ್ತಿದ್ದಳು. ಅಡ್ಮಿಷನ್ ರೂ.4500/–, ಅದಲ್ಲದೆ ತಿಂಗಳಿಗೆ ರೂ.380ನ್ನು ಕಟ್ಟಬೇಕಿತ್ತು. ಮಗುವಿಗೆ ಕೋವಿಡ್ ಸಂದರ್ಭದಲ್ಲಿ ಆನ್‌ಲೈನ್ ತರಗತಿಗೆ ಬಿಡಲಿಲ್ಲ. ಯಾಕೆಂದರೆ ನಾನು ಅದಕ್ಕೂ ಶುಲ್ಕ ಕಟ್ಟಬೇಕಿತ್ತು. ಎರಡನೆಯ ಮಗ ದಿಗಂತ್, ವಯಸ್ಸು 6 ವರ್ಷ, ಅವನಿಗೂ ಹಣವಿಲ್ಲದೆ ಇನ್ನೂ ಶಾಲೆಗೆ ಸೇರಿಸಲಿಲ್ಲ. ಮೂರನೇಯ ಮಗಳು ಮನೆಯಲ್ಲಿದ್ದಾಳೆ. ನನ್ನ ಗಂಡನ ಸಂಬಳ ಊಟಕ್ಕೆ ಮತ್ತು ಇರುವ ಸಾಲಕ್ಕೆ ಸಾಕಾಗುತ್ತಿಲ್ಲ. ಈ ಸಮಸ್ಯೆಯಿಂದ ನಮ್ಮ ಇಬ್ಬರು ಮಕ್ಕಳು ಈಗ ಮನೆಯಲ್ಲಿದ್ದಾರೆ.

## ಕೇಸ್ಟಡಿ 48

### ಶಾಲಾ ಶುಲ್ಕ ಕಟ್ಟಿಲ್ಲ ಎಂಬ ಕಾರಣಕ್ಕೆ ಶಾಲೆಯಿಂದ ಹೊರಗುಳಿದಿದ್ದೇವೆ.

ನನ್ನ ಹೆಸರು ಇವ್ಯಾಂಜಲಿನ್. ವಯಸ್ಸು 12 ವರ್ಷ, ನಾನು ನರಸಿಂಹಯ್ಯ ಕಾಲೋನಿಯಲ್ಲಿ ವಾಸವಾಗಿದ್ದೇನೆ. ನನ್ನ ತಾಯಿಯ ಹೆಸರು ಪುನಿತ ಮೇರಿ, ವಯಸ್ಸು 42 ವರ್ಷ, ಅವರು ಮನೆಕೆಲಸಕ್ಕೆಹೋಗುತ್ತಾರೆ. ಅವ–ರಿಗೆ ತಿಂಗಳಿಗೆ ರೂ.8000/– ಸಂಪಾದನೆ ಮಾಡುತ್ತಾರೆ. ತಂದೆ ಹೆಸರು ಯೇಸುಪಾದಂ ಅವರು ನಮ್ಮ ಮನೆಗೆ ಬರುವುದನ್ನು ನಿಲ್ಲಿಸಿದ್ದಾರೆ. ಮನೆಯಲ್ಲಿ ಅಪ್ಪ ಮತ್ತು ಅಮ್ಮ ಜಗಳವಾಡಿ ಬೇರೆ ಬೇರೆಯಾಗಿದ್ದಾರೆ. ಆದ–ದರಿಂದ ತಂದೆ ಯಾವಾಗಲಾದರೂ ಒಮ್ಮೆ ಬರುತ್ತಾರೆ.

ನನಗೆ ಇಬ್ಬರು ಅಕ್ಕಂದಿರು. ಒಬ್ಬಳು ಕಲ್ಪಿತ, ಅವಳು ಮೊದಲನೆಯ ವರ್ಷದ ಡಿಗ್ರಿ ಓದುತ್ತಿದ್ದಾಳೆ. ಎರಡನೆಯ ಅಕ್ಕ 16 ವರ್ಷ, ಅವಳ ಹೆಸರು ಜೆನಿಫರ್, 10ನೇ ತರಗತಿ ಓದುತ್ತಿದ್ದಾಳೆ. ಅವಳು ಸೆಂಟ್ ಮೈಕೆಲ್ ಶಾಲೆಯಲ್ಲಿ ಓದುತ್ತಿದ್ದಾಳೆ. ಅವಳು 2019–20ನೇ ಸಾಲಿನಲ್ಲಿ 10ನೇ ತರಗತಿದ್ದಳು, ಅಲ್ಲಿ ಪರೀಕ್ಷೆಯು ಬರೆದಿದ್ದಳು. ಆದ–ರೆ ಶುಲ್ಕ ಕಟ್ಟಲಿಲ್ಲವೆಂಬ ಕಾರಣಕ್ಕೆ ಅವಳನ್ನು 2021–22ನೇ ಸಾಲಿನಲ್ಲಿ ಅವರನ್ನು ಮತ್ತೆ 10ನೇ ತರಗತಿಯಲ್ಲಿ ಓದಿಸಬೇಕು. ಫೀಸ್ ಕಟ್ಟಿದರೆ ಮಾತ್ರ ಅವಳಿಗೆ ಮೊದಲನೇಯ ಪಿ.ಯು.ಸಿ.ಗೆ ಕಳುಹಿಸತ್ತೇವೆ ಎಂದು ಹೇಳಿದ್ದರಿಂದ ಮತ್ತೆ 10ನೇ ತರಗತಿಯಲ್ಲಿ ಓದುತ್ತಿದ್ದಾಳೆ. ನಾನು 2019–2020 ನೇ ಸಾಲಿನಲ್ಲಿ ಮೈಸೂರು ರಸ್ತೆಯ ಪಬ್ಲಿಕ್ ಶಾಲೆಯಲ್ಲಿ 5ನೇ ತರಗತಿ ಓದುತ್ತಿದ್ದೆ. ಅಲ್ಲಿ ನನ್ನ ಶುಲ್ಕ ರೂ.46000/– ರೂಗಳು 2 ವರ್ಷದ್ದು ಬಾಕಿ ಇರುವುದರಿಂದ, ನನ್ನ ತಾಯಿ ನನ್ನನ್ನು ಶಾಲೆಗೆ ಕಳುಹಿಸಲಿಲ್ಲ. ಕೋವಿಡ್‌ಗೂ ಮುನ್ನ ನನ್ನ ಸೋದರ ಮಾವ ಅವರು ನಮ್ಮ ಶಿಕ್ಷಣಕ್ಕಾಗಿ ಸ್ವಲ್ಪ ಸಹಾಯ ಮಾಡಿದರು. 2019 ರಲ್ಲಿ ಅವರಿಗೆ ಮದುವೆಯಾದ ಮೇಲೆ ಅವರು ತಮ್ಮ ಸಹಾಯವನ್ನು ನಿಲ್ಲಿಸಿರುತ್ತಾರೆ. ಹೀಗಾಗಿ ನಾನು ಶಾಲೆಗೆ ಹೋಗದೆ ಮನೆಯಲ್ಲಿದ್ದೇನೆ.

## ಕೇಸ್ಟಡಿ 49

### ಮಕ್ಕಳ ಕಲಿಕೆಗೆ ಕೋವಿಡ್ ನೀಡಿತು ಕೊಳ್ಳಿ – ಶಾಲಾ ಶುಲ್ಕ ಕಟ್ಟಲಾಗಲಿಲ್ಲ ಮಕ್ಕಳು ಮನೆಯಲ್ಲಿಯೇ ಉಳಿದರು

ನನ್ನ ಹೆಸರು ಸಾವಿತ್ರಮ್ಮ. ನನಗೆ 65 ವರ್ಷ ವಯಸ್ಸಾಗಿದೆ. ನಾನು ಮೈಸೂರು ರಸ್ತೆಯ ಸಂಜಯ್ ನಗರದಲ್ಲಿ ವಾಸವಾಗಿದ್ದೇನೆ. ನನ್ನ ಸೊಸೆ ಸುಮಿತ್ರ 10 ವರ್ಷಗಳ ಹಿಂದೆ ಆತ್ಮಹತ್ಯೆ ಮಾಡಿಕೊಂಡು ತೀ–ರಿಕೊಂಡಿರುತ್ತಾಳೆ. ಅದಾದ ಒಂದು ವರ್ಷಕ್ಕೆ ನನ್ನ ಮಗ ನರಸಿಂಹ ಕುಡಿತದ ಚಟಕ್ಕೆ ಬಿದ್ದು ಅವನು ಆರೋಗ್ಯ ಹದಗೆಡಿಸಿಕೊಂಡು ತೀರಿಕೊಂಡಿರುತ್ತಾನೆ. ಹಾಗಾಗಿ ಅವರ ಇಬ್ಬರು ಮಕ್ಕಳು ನನ್ನ ಜೊತೆಯಲ್ಲಿ ಉಳಿದುಬಿಟ್ಟರು. ನನ್ನ ಮಗಳು (ಮಕ್ಕಳ ಅತ್ತೆ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದರು. ಅವಳು ಈ ಮಕ್ಕಳನ್ನು ಓದಿಸುತ್ತಿದ್ದರು.) ಮೊದಲನೆಯವಳು ಸುಮಿತ್ರ 16 ವರ್ಷ, ಅವಳು 8ನೇ ತರಗತಿ 2019–2020 ನೇ ಸಾಲಿನಲ್ಲಿ ಓದುತ್ತಿದ್ದಳು. ಎರಡನೆಯ ಮಗ ಆಕಾಶ್, 13 ವರ್ಷ, ಅವನು ಸಹ ಕೋವಿಡ್ ಬಂದ ಮೇಲೆ 5ನೇ ತರಗತಿಗೆ ಶಾಲೆ ಬಿಟ್ಟಿರುತ್ತಾನೆ. ಯಾಕೆಂದರೆ ಇಬ್ಬರೂ ಖಾಸಗಿ ಶಾಲೆಯಲ್ಲಿ ಓದುತ್ತಿದ್ದರು. ನನ್ನ ಮಗಳು ಕೋವಿಡ್ ಪರಿಣಾಮ ಅವಳು ಗಾರ್ಮೆಂಟ್ಸ್‌ನಲ್ಲಿ ಕೆಲಸ ಕಳೆದುಕೊಂಡಿರುತ್ತಾರೆ. ಹೀಗಾಗಿ ಮನೆ ಬಾಡಿಗೆ ರೂ.2500/–, ಊಟದ ಖರ್ಚು, ಸಾಲ, ಹೀಗಾಗಿ ನಾನು ನನ್ನ ಮೊಮ್ಮಗಳಾದ ಸುಮಿತ್ರಾಳನ್ನು ಶಾಲೆ ಬಿಡಿಸಿ ಮನೆಯ ಬಳಿ ಪೀಸ್ ವರ್ಕ್ ಆಗಿ ತಿಂಗಳಿಗೆ ದುಡಿಯುತ್ತಿದ್ದಾಳೆ. ಅವಳಿಗೆ ರೂ.5000/– ಸಿಗುತ್ತದೆ. ಅದನ್ನು ಇಟ್ಟುಕೊಂಡು ನನ್ನ ಕುಟುಂಬವನ್ನು ನಡೆಸುತ್ತಿದ್ದೇನೆ.

## ಕೇಸ್ಟಡಿ 50

### ನಾನು ಓದಿದರೂ ಪಾಠಗಳು ಸುಲಭವಾಗಿ ಅರ್ಥವಾಗುತ್ತಿಲ್ಲ. ನೀ ಬ್ಹಾಳ ದಡ್ಡ ಆಗಿದ್ದಿ, ಮೊದಲಿನಂಗ ಓದುತ್ತಿಲ್ಲ ಎಂದು ತಾಯಿ ಬೈಯುತ್ತಾರೆ. ನನಗೆ 2 ವರ್ಷ ಸರಿಯಾದ ಶಿಕ್ಷಣ ಸಿಕ್ಕಿಲ್ಲ, ಪಠ್ಯ ಅರ್ಥವಾಗಿಲ್ಲ, ಬಹಳ ನೋವಾಗುತ್ತದೆ.

ನನ್ನ ಹೆಸರು ನೀಲಾವತಿ ಗೋಪಾಲ ಕಾಂಬಳೆ 16 ವರ್ಷ. ನಾನು ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ತೀರ್ಥ ಗ್ರಾಮದವಳು. ನಾನು ಸರ್ಕಾರಿ ಪ್ರೌಢ ಶಾಲೆ ಸಪ್ತಸಾಗರದಲ್ಲಿ ಓದುತ್ತಿದ್ದೇನೆ. 2019ರಲ್ಲಿ ಪ್ರವಾಹದ ತುರ್ತು ಪರಿಸ್ಥಿತಿಯಲ್ಲಿ ಶಾಲಾ ಕಲಿಕೆಯಿಂದ ದೂರ ಉಳಿದೆವು. ನಂತರ 2019ರ ಮಾರ್ಚನಲ್ಲಿ ಕೊರೋನಾ ಲಾಕ್ಡೌನ್ ಹೇರಿಕೆಯಿಂದ ವಿದ್ಯಾಭ್ಯಾಸ ಮತ್ತೆ ಹಾಳಾಯಿತು. 9ನೇ ತರಗತಿಗೆ ಬೇರೆ ಊರಿಗೆ ಹೋಗಬೇಕಾಯಿತು ಅಲ್ಲಿಯೂ ಕೊರೋನಾ ಭಯದ ನಡುವೆ ಸಮರ್ಪಕ ವಿದ್ಯಾಭ್ಯಾಸ ಇಲ್ಲದಂತಾಯಿತು. ಸರ್ಕಾರ ವಿದ್ಯಾಗಮವನ್ನು ನಮ್ಮೂರ ಶಾಲೆಯನ್ನು ಹೊರತುಪಡಿಸಿ, ಮಂದಿರ ಸಮುದಾಯ ಭವನಗಳಲ್ಲಿ ನಡೆಸಿ ಮಕ್ಕಳಿಗೆ ಕ್ಲಾಸ್ ಶುರು ಮಾಡಿದ್ದರು. ನಮ್ಮ ಶಾಲೆಯಲ್ಲಿ 5.30 ಗಂಟೆ ವಿದ್ಯಾಭ್ಯಾಸ ಮಾಡಿದರೂ ನಾವು ಅರ್ಥಮಾಡಿಕೊಳ್ಳಲು ಕಷ್ಟವಾಗಿ–ತ್ತು ಅದರಲ್ಲಿ ದಿನದ 2ಗಂಟೆಗೆ ವಿದ್ಯಾಗಮ ನಡೆಸಿ ಸ್ವಲ್ಪ ಮಟ್ಟಿಗೆ ಮಾತ್ರ ವಿದ್ಯಾಭ್ಯಾಸ ಅರ್ಥವಾಗುತ್ತಿತ್ತು. ನಾನು ಈಗ 10ನೇ ತರಗತಿಯಲ್ಲಿ ಓದುತ್ತಿದ್ದೇನೆ. ನನಗೆ ಆನ್ಲೈನ್ ತರಗತಿ ನಡೆದಿತ್ತು ಆದರೂ ಅದು ಅರ್ಥವಾಗುತ್ತಿರಲಿಲ್ಲ. ನನಗೆ ಈಗ ನೇರ ತರಗತಿ ಆರಂಭವಾಗಿದ್ದರೂ, ಲೆಕ್ಕ ವಿಷಯ ಅರ್ಥವಾಗುವುದು ಕಷ್ಟವಾಗುತ್ತಿದೆ. ನಾನು ಕಡಿಮೆ ಅಂಕ ಪಡೆದು ತೇರ್ಗಡೆ ಆದಲ್ಲಿ ಅದರ ಸಂಪೂರ್ಣ ಹೊಣೆಗಾರಿಕೆ ಸರ್ಕಾರ ವಹಿಸುವುದೇ? ನಾನು ಓದಿದರೂ ಪಾಠಗಳು ಸುಲಭವಾಗಿ ಅರ್ಥ–ವಾಗುತ್ತಿಲ್ಲ.

## ಕೇಸ್ಟಡಿ 51

### 2018-19ರ ಮಹಾ ಪ್ರವಾಹದಲ್ಲಿ ನಮ್ಮ ಕುಟುಂಬ ತತ್ತರಿಸಿಹೋಗಿ ಶಿಕ್ಷಣದ ನಿರಾಕರಣೆ ಅನುಭವಿಸಿದ ನಾವು ಮತ್ತೊಮ್ಮೆ ಕೊರೋನಾದಿಂದ ಶಿಕ್ಷಣದಿಂದ ವಂಚಿತರಾಗಿ ಹೊರಗುಳಿದೆವು.

ನನ್ನ ಹೆಸರು ಕುಮಾರಿ ರಕ್ಷಿತಾ ಮಹಾವೀರ ಖಾಡೆ. ನನಗೆ 14 ವರ್ಷ, ನಾನು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಇಂಗಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಕನ್ನಡ ಶಾಲೆಯಲ್ಲಿ 7ನೇ ತರಗತಿಯಲ್ಲಿ ಓದುತ್ತಿದ್ದೇನೆ. ನನ್ನ ಮನೆಯಲ್ಲಿ 7 ಜನರಿದ್ದೇವೆ. ನನ್ನ ಅಜ್ಜಿ ಮಾಲಾಬಾಯಿ (75 ವರ್ಷ), ತಂದೆ ಮಹಾವೀರ (42ವರ್ಷ), ತಾಯಿ ಚಂದ್ರವ್ವ (35ವರ್ಷ), ಅಣ್ಣ ರತನ್ (15ವರ್ಷ) ಮತ್ತು ತಮ್ಮ ರೋಹನ್ (10 ವರ್ಷ) ಮತ್ತು ನಮ್ಮ ಅತ್ತೆ ಭಾರತಿ (39ವರ್ಷ). ನಮ್ಮ ಅಜ್ಜಿ ಸಾಂಸ್ಕೃತಿಕ ಶೋಷಣೆಗೆ ಒಳಗಾಗಿದ್ದ ಸಮುದಾಯದವರು (ದೇವದಾಸಿ). ನನ್ನ ತಂದೆ ಮತ್ತು ತಾಯಿ ಕೃಷಿ ಕೂಲಿ ಕಾರ್ಮಿಕರು. ಅಣ್ಣ ನಮ್ಮೂರಿನ ಪ್ರೌಢ ಶಾಲೆಯಲ್ಲಿ 8ನೇ ತರಗತಿ ಓದುತ್ತಿದ್ದಾನೆ. ತಮ್ಮ ರೋಹನ್ ಮತ್ತು ನಾನು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದೇವೆ. ನಮ್ಮ ಅತ್ತೆ ಅಂಗವಿಕಲೆ. ನಾನು, ಅಣ್ಣ, ತಮ್ಮ ಕೊರೋನಾ ಬರುವ ಮೊದಲು ನಮ್ಮೂರಿನ ಖಾಸಗಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದೆವು. ಕೊರೋನಾ ಲಾಕ್ಡೌನ್ ಸಂದರ್ಭದಲ್ಲಿ ನಮ್ಮ ಕುಟುಂಬದ ಆರ್ಥಿಕ ಪರಿಸ್ಥಿತಿ ಕೆಟ್ಟಿತು. ದುಡಿಮೆಯಿಲ್ಲದಂತಾಗಿ ನಮ್ಮ ತಂದೆ-ತಾಯಿಯವರಿಗೆ ಶಾಲಾ ಶುಲ್ಕ ಕಟ್ಟಲು ಸಾಧ್ಯವಾಗಿಲ್ಲ. ಶಾಲೆಯವರು ಆನ್ಲೈನ್ ಆರಂಭಿಸಿದ್ದರೂ ನಮ್ಮಲ್ಲಿ ಮೊಬೈಲ್ ಇರಲಿಲ್ಲ. ಎರಡು ವರ್ಷ ಏನೂ ಓದಲಾಗಲಿಲ್ಲ. ಹೀಗಿದ್ದರೂ ಫೀಸ್ ಕಟ್ಟಲೇಬೇಕೆಂಬ ಒತ್ತಡ ಹಾಕುತ್ತಿದ್ದರು. ನಮ್ಮ ತಂದೆ ಅನಿವಾರ್ಯ ಪರಿಸ್ಥಿತಿಯಲ್ಲಿ ನಮ್ಮನ್ನು ಸರ್ಕಾರಿ ಶಾಲೆಗೆ ದಾಖಲಾತಿ ಮಾಡಿದರು. ಒಂದೆಡೆ 2018-19ರ ಮಹಾ ಪ್ರವಾಹದಲ್ಲಿ ನಮ್ಮ ಕುಟುಂಬ ತತ್ತರಿಸಿ ಹೋಗಿ ಶಿಕ್ಷಣದ ನಿರಾಕರಣೆ ಅನುಭವಿಸಿದ ನಾವು ಮತ್ತೊಮ್ಮೆ ಕೊರೋನಾದಿಂದ ಶಿಕ್ಷಣದಿಂದ ವಂಚಿತರಾಗಿ ಹೊರಗುಳಿದೆವು.. ನಮಗೂ ವಿದ್ಯಾಭ್ಯಾಸ ಪಡೆದು ಸ್ಪರ್ಧಾತ್ಮಕ ಪರೀಕ್ಷೆ ಪಾಸಾಗಬೇಕೆಂಬ ಆಸೆಯಿದೆ. ನಾವು ದಲಿತರು ನಮ್ಮ ಶಿಕ್ಷಣಕ್ಕೆ ಇನ್ನೂ ಹೆಚ್ಚಿನ ಆದ್ಯತೆ ಸರ್ಕಾರ ನೀಡಬೇಕು. ವಿಶೇಷ ತರಗತಿಗಳು ನಿರಂತರವಾಗಿ ನಡೆದರೆ ನಮ್ಮ ಶಿಕ್ಷಣದ ಭವಿಷ್ಯ ರೂಪಣೆಯಾಗುತ್ತದೆ.

## ಕೇಸ್ಟಡಿ 52

### ಮಕ್ಕಳು ದುಶ್ಚಟಗಳಿಗೆ ಬಲಿಯಾಗುತ್ತಿರುವುದು ದುಃಖ ತರುತ್ತಿದೆ.

ನನ್ನ ಹೆಸರು ಮಂಜುಳ. ನಾನು ಇಂಗಳಿ ಗ್ರಾಮ ಗ್ರಾಮ ಪಂಚಾಯಿತಿ ಅಧ್ಯಕ್ಷೆ. ನಮ್ಮ ಗ್ರಾಮ 2018, 2021ರ ಪ್ರವಾಹದಲ್ಲಿ ತತ್ತರಿಸಿ ಹೋಗಿತ್ತು. ನನ್ನ ಗಂಡ ರಾಮಾ ಐವಳ್ಳಿ. ಇವರು ಕಟ್ಟಡ ಕಾರ್ಮಿಕರು. ನಮಗೆ 3 ಮಕ್ಕಳು. ಹಿರಿಯ ಮಗ ಶ್ರೀನಾಥ್ ದ್ವಿತೀಯ ಪಿ.ಯು. ವಿದ್ಯಾರ್ಥಿ, 2ನೆಯ ಮಗ ಗೋಪಿನಾಥ 11ನೇ ತರಗತಿ ವಿದ್ಯಾರ್ಥಿ, ಹಾಗೂ ಕೊನೆಯವ ವಿಶ್ವನಾಥ ಶಾಲೆಯಿಂದ ಹೊರಗಡೆಯಿದ್ದಾನೆ. ತಂದೆ ಮಾಡುತ್ತಿದ್ದ ವೃತ್ತಿಯನ್ನು ಕಲಿತು ಕಟ್ಟಡ ಕಾರ್ಮಿಕನಾಗಿ ದುಡಿಯುತ್ತಿದ್ದಾನೆ. ಗೋಪಿನಾಥ ಕೂಡ ಅರ್ಧದಲ್ಲಿಯೇ ಶಾಲೆಬಿಟ್ಟು ಕಟ್ಟಡ ಕಾರ್ಮಿಕನಾಗಿ ದುಡಿಯುತ್ತಿದ್ದಾನೆ. ಕೊರೋನಾ ವೇಳೆಯಲ್ಲಿ ನಮ್ಮ ಮಕ್ಕಳು ಮನೆಯಲ್ಲಿಯೇ ಇದ್ದು ಸ್ಥಳೀಯ ಹುಡುಗರೊಂದಿಗೆ ಬೆರೆತು ಮಾದಕ ವ್ಯಸನಗಳ ಚಟ ಬೆಳೆಸಿಕೊಂಡಿದ್ದರು. ನನ್ನ ಗಂಡನಿಗೆ ಬರುವ ಕೂಲಿಯಷ್ಟೇ ಇವನಿಗೂ ಕೂಲಿ ಸಿಗುತ್ತಿದೆ. ಆದರೆ ಈತ ದುಶ್ಚಟಗಳಿಗೆ ಬಲಿಯಾಗುತ್ತಿರುವುದು ದುಃಖ ತರುತ್ತಿದೆ.

## ಕೇಸ್ಟಡಿ 53

### ಶಿಕ್ಷಣದ ಆಸಕ್ತಿಯನ್ನೂ ಕಳೆದುಕೊಳ್ಳುವಂತೆ ಮಾಡಿದೆ ಈ ವ್ಯವಸ್ಥೆ.

ನಾನು ಭಾಗ್ಯಶ್ರೀ 18 ವರ್ಷ. ನನ್ನ ಅಪ್ಪ ಶ್ರೀ ರಮೇಶ ಭೂಪಾಲ ಶಾಸ್ತ್ರಿ ವಯಸ್ಸು 50 ವರ್ಷ. ಯಾವುದೇ ಕೆಲಸ ಮಾಡುತ್ತಿಲ್ಲ. ಕುಡಿತದ ವ್ಯಸನಿ. ತಾಯಿ ಲಕ್ಷ್ಮೀ, 45 ವರ್ಷ. ಕೃಷಿಕೂಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ನಾನು ನನ್ನ ಕುಟಂಬದ ಸದಸ್ಯರೊಂದಿಗೆ ಬೆಳಗಾವಿ ಜಿಲ್ಲೆಯ, ಚಿಕ್ಕೋಡಿ ತಾಲ್ಲೂಕಿನ ಇಂಗಳಿ ಗ್ರಾಮದಲ್ಲಿ ವಾಸಿಸುತ್ತಿದ್ದೇವೆ. ನನ್ನ ತಮ್ಮ ಮಂಜುನಾಥ ಪ್ರಥಮ ಪಿಯುಸಿ ವಿದ್ಯಾರ್ಥಿ. ಆದರೆ ನಿರಂತರವಾಗಿ ತಲೆದೋರಿದ ಪ್ರವಾಹ ಹಾಗೂ ಕೊರೋನಾ ಪರಿಸ್ಥಿತಿ ನಮ್ಮನ್ನು ಸಂಪೂರ್ಣವಾಗಿ ನೆಲಕ್ಕಚ್ಚುವಂತೆ ಮಾಡಿದೆ. ಮಹಾಪೂರ ಸಂದರ್ಭದಲ್ಲೂ ಶಿಕ್ಷಣದಿಂದ ವಂಚಿತರಾದ ನಾವು ಮನೆಯನ್ನೂ ಕಳೆದುಕೊಂಡು ಇನ್ನೂ ಪರಿಹಾರದ ನಿರೀಕ್ಷೆಯಲ್ಲಿಯೇ ಇರುವಾಗ ಕೊರೋನ ಮಹಾಮಾರಿಯಂತೆ ಬಂದೊರಗಿತು. ನಮ್ಮ ಕುಟುಂಬದ ಆರ್ಥಿಕ ಪರಿಸ್ಥಿತಿ ಹದಗೆಟ್ಟ ಕಾರಣ ನಾನು ಮತ್ತು ನನ್ನ ತಮ್ಮ ಇಬ್ಬರೂ ಅರ್ಧದಲ್ಲಿಯೇ ಶಾಲೆ ಬಿಡಬೇಕಾಯಿತು. ನಾವು ಸಾಲಮಾಡಿ ನಮ್ಮ ಮನೆಯನ್ನು ಮತ್ತೆ ಪುನಃ

ಕಟ್ಟಿಕೊಂಡಿದ್ದೇವೆ. ನನ್ನ ತಮ್ಮ ಕಟ್ಟಡ ಕಾರ್ಮಿಕನಾಗಿ ದುಡಿಯುತ್ತಿರುವುದರಿಂದ ನಮ್ಮ ಮನೆ ನಡೆಯುತ್ತಿದೆ. ಆತ ಶಿಕ್ಷಣದ ಆಸಕ್ತಿಯನ್ನೂ ಕಳೆದುಕೊಳ್ಳುವಂತೆ ಮಾಡಿದೆ ಈ ವ್ಯವಸ್ಥೆ.

## ಕೇಸ್ಟಡಿ 54

### ನಾವು ಶಿಕ್ಷಣದಿಂದ ವಂಚಿತರಾಗಲು ವ್ಯವಸ್ಥೆಯೇ ಕಾರಣ ಹೊರತು ನನ್ನ ತಂದೆ ತಾಯಿಯರಲ್ಲ.

ನನ್ನ ಹೆಸರು ಕುಮಾರಿ ಸಂಜನಾ ರಾಜು ಕಾಂಬಳೆ. ಬೆಳಗಾವಿ ಜಿಲ್ಲೆಯ ಇಂಗಳಿ ಗ್ರಾಮದ ನಿವಾಸಿ. ನನ್ನ ಅಪ್ಪ ರಾಜು 43 ವರ್ಷ, ಅಮ್ಮ ಅಶ್ವಿನಿ 38 ವರ್ಷ, ಅಕ್ಕ ಕಿಶೋರಿ 16 ವರ್ಷ, ಹಾಗೂ ತಮ್ಮ ಓಂಕಾರ್ 12 ವರ್ಷ. ನನ್ನ ಅಪ್ಪ ಕಟ್ಟಡ ಕಾರ್ಮಿಕರು. ಅಮ್ಮ ಕೃಷಿ ಕೂಲಿ ಕೆಲಸ ಮಾಡುತ್ತಾರೆ. ನಮ್ಮ ಅಕ್ಕ 12ನೇ ತರಗತಿಯಲ್ಲಿ ಹಾಗು ತಮ್ಮ 8ನೇ ತರಗತಿ ಓದುತ್ತಿದ್ದಾನೆ. ನಮ್ಮ ಹಳ್ಳಿ ಪದೇಪದೇ ಪ್ರವಾಹಕ್ಕೆ ತುತ್ತಾಗುತ್ತಾ ನಮ್ಮ ಶಿಕ್ಷಣಕ್ಕೂ ಹಾನಿಯಾಗುತ್ತಿತ್ತು. ಕಳೆದೆರಡು ವರ್ಷದಿಂದ ಕೊರೋನಾ ತುರ್ತು ಪರಿಸ್ಥಿತಿಯಲ್ಲಿ ಶಾಲೆಗಳು ಮುಚ್ಚಿತು. ನನ್ನ ಓದು ಅಲ್ಲಿಗೇ ನಿಂತಿತು. ನಾನು ಮುಂದೆ ಓದಲೇ ಇಲ್ಲ. ನಮ್ಮ ಶಿಕ್ಷಕರು ಆನ್ಲೈನ್ ಶಿಕ್ಷಣಕ್ಕೆ ಮೊರೆಹೋದರು. ನಮ್ಮ ಮನೆಯಲ್ಲಿ ಸ್ಮಾರ್ಟಫೋನು ಇರಲಿಲ್ಲ. ನನ್ನಂತೆಯೇ ನನ್ನ ಒಡಹುಟ್ಟಿದವರು, ನನ್ನ ಸ್ನೇಹಿತರು ಶಾಲಾ ಶಿಕ್ಷಣದಿಂದ 2 ವರ್ಷ ಸಂಪೂರ್ಣವಾಗಿ ಹೊರಗುಳಿದರು. ನಾವು ಶಿಕ್ಷಣದಿಂದ ವಂಚಿತರಾಗಲು ವ್ಯವಸ್ಥೆಯೇ ಕಾರಣ ಹೊರತು ನನ್ನ ತಂದೆ ತಾಯಿಯರಲ್ಲ. ನಮಗೂ ಶಿಕ್ಷಣ ಬೇಕು. ನಮ್ಮ ಶಿಕ್ಷಣ ಮುಂದುವರಿಸಬೇಕಾದರೆ ಸರ್ಕಾರ ವಿಶೇಷ ಶಿಕ್ಷಣ ನೀಡಲೇಬೇಕು.

## ಕೇಸ್ಟಡಿ 55

### ಅಪ್ಪ ಮಾಡಿದ ಸಾಲ ತೀರಿಸಲು ನಾನು ಶಾಲೆಬಿಡಬೇಕಾಯಿತು.

ನಮಸ್ಕಾರ ನನ್ನ ಹೆಸರು ಸಚಿನ್ ಸದಾಶಿವ ಮೇತ್ರಿ ನನ್ನ ವಯಸ್ಸು16. ನಾನು ಗುಲಗಾಲ ಜಂಬಗಿ ಗ್ರಾಮದ ವಿದ್ಯಾರ್ಥಿಯಾಗಿರುತ್ತೇನೆ ನನ್ನ ತಾಯಿಯ ಹೆಸರು ಮಂಜುಳಾ ಸದಾಶಿವ್ ಮೇತ್ರಿ ವಯಸ್ಸು 37 ಆಗಿರುತ್ತದೆ ನನ್ನ ಅಕ್ಕನ ಹೆಸರು ಜ್ಯೋತಿ ವಯಸ್ಸು 20 ಆಗಿರುತ್ತದೆ ನಾನು ಈ ವರ್ಷ ಶಾಲೆ ಬಿಡಲು ಮುಖ್ಯ ಕಾರಣವೇನೆಂದರೆ ನನ್ನ ತಂದೆಗೆ ಹಾರ್ಟ ಆಪರೇಷನ್ ಆಗಿ ತೀರಿ ಕೊಂಡಿರುತ್ತಾರೆ ಆ ಒಂದು ಕಾರಣದಿಂದ ಸಾಕಷ್ಟು ಸಾಲ ಆಗಿರುತ್ತದೆ ಈ ಸಂಕಷ್ಟದಲ್ಲಿರುವಾಗ ಕೋವಿಡ್ ಬಂದಿರುವ ಕಾರಣದಿಂದಾಗಿ ನನಗೆ ಓದಲು ಆಸಕ್ತಿ ಇರುವುದಿಲ್ಲ ಅದಕ್ಕೋಸ್ಕರ ನಾನು ಈ ವರ್ಷ ಶಾಲೆಗೆ ಹೋಗಿಲ್ಲ

## ಕೇಸ್ಟಡಿ 56

### ಪ್ರವಾಹ ಮತ್ತು ಕೋವಿಡ್ ಬಂದಿರುವ ಕಾರಣಗಳಿಂದ ನಮಗೆ ಶಾಲೆಗೆ ಹೋಗಲು ಆಗಲಿಲ್ಲ

ನನ್ನ ಹೆಸರು ಸುಮಿತ್ರಾ ಅಡಿವೆಪ್ಪ ಕಳ್ಳಿಮನಿ ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ರೂಗಿ ಗ್ರಾಮದ ವಿದ್ಯಾರ್ಥಿನಿ ಆಗಿರುತ್ತೇನೆ. ನನ್ನ ವಯಸ್ಸು 17. ನನ್ನ ತಂದೆ ಹೆಸರು ಅಡವೇಶ್ ವಯಸ್ಸು 50 ಆಗಿರುತ್ತದೆ, ನನ್ನ ತಾಯಿಯ ಹೆಸರು ರೂಪ ವಯಸ್ಸು38. ನನ್ನ ತಮ್ಮನ ಹೆಸರು ರವಿ 14 ವರ್ಷ. ನಾನು ಈ ವರ್ಷ SSLC ಪರೀಕ್ಷೆಯಿಂದ ಹಿಂದೆ ಉಳಿಯಲು ಕಾರಣವೇನೆಂದರೆ ನನ್ನ ತಂದೆ ಸಾಕಷ್ಟು ಸಾಲ ಮಾಡಿದ್ದಾರೆ ಸಾಲಕ್ಕೆ ಕಾರಣವೇನೆಂದರೆ ಅವರು ಮೊದಲು ಅನಾರೋಗ್ಯಕ್ಕೆ ತುತ್ತಾಗಿದ್ದರು ಆದರೂ ಸಹಿತ ನಾವು ಶಾಲೆಗೆ ಹೋಗುತ್ತಿದ್ದೆವು ಕಳೆದ ಎರಡು ವರ್ಷಗಳಿಂದ ಪ್ರವಾಹ ಮತ್ತು ಕೋವಿಡ್ ಬಂದಿರುವ ಕಾರಣಗಳಿಂದ ನಮಗೆ ಶಾಲೆಗೆ ಹೋಗಲು ಆಗಲಿಲ್ಲ ಆ ಸಮಯದಲ್ಲಿ ನಾವು ನಮ್ಮ ತಾಯಿಯ ಜೊತೆಗೆ ಸಣ್ಣಪುಟ್ಟ ಕೂಲಿ ಕೆಲಸಕ್ಕೆ ಹೋದೆವು ಕಳೆದ ಎರಡು ವರ್ಷಗಳಲ್ಲಿ ಹಿಂದೆ ನಾವು ಓದಿದಂತಹ ವಿದ್ಯಾಭ್ಯಾಸ ಮರೆತುಹೋಗಿತ್ತು ಈ ಕಾರಣದಿಂದ ನಾವು ಈ ವರ್ಷ ಪರೀಕ್ಷೆಗೆ ಕೂರಲು ಆಗಲಿಲ್ಲ

## ಕೇಸ್ಟಡಿ 57

### ಪ್ರವಾಹ ಮತ್ತು ಕೋವಿಡ್ ಬಂದಿರುವ ಕಾರಣಗಳಿಂದ ನಮಗೆ ಶಾಲೆಗೆ ಹೋಗಲು ಆಗಲಿಲ್ಲ ಕಳೆದ ಎರಡು ವರ್ಷ ನಾವು ಓದಿದ್ದೇವೆ ಅನ್ನುವುದನ್ನು ಮರೆತಿದ್ದೇವೆ

ನನ್ನ ಹೆಸರು ಪ್ರಮೋದ್ ಸದಾಶಿವ ಮೇತ್ರಿ ನಾನು ನಾಗರಾಳ ಗ್ರಾಮದ ವಿದ್ಯಾರ್ಥಿ. ನಾನು ಈಗ ಏಳನೇ ತರಗತಿಯಲ್ಲಿ ಓದುತ್ತಿದ್ದೇನೆ ನನ್ನ ತಂದೆಯ ಹೆಸರು ಸದಾಶಿವ. ತಾಯಿ ಹೆಸರು ರೇಣುಕಾ. ತಂದೆ ಟ್ರ್ಯಾಕ್ಟರ್ ಡ್ರೈವರ್ ತಾಯಿ ಕೂಲಿ ಕೆಲಸ ಮಾಡುತ್ತಾರೆ. ನನಗೆ ಒಬ್ಬಳು ತಂಗಿ ಇದ್ದಾಳೆ. ಎರಡು ವರ್ಷಗಳಿಂದ ನನಗೆ ಸರಿಯಾದ ರೀತಿಯಲ್ಲಿ ಶಿಕ್ಷಣ ಸಿಕ್ಕಿಲ್ಲ. ಕಾರಣವೇನೆಂದರೆ ಘಟಪ್ರಭಾ ನದಿ ತೀರದ ಪಕ್ಕದಲ್ಲಿಯೇ ನಮ್ಮ ಊರು 2019ರ ಪ್ರವಾಹಕ್ಕೆ ಸಂಪೂರ್ಣ ಮುಳುಗಡೆಯಾಗಿತ್ತು

ಈ ಸಮಯದಲ್ಲಿ ನಮ್ಮ ಮನೆಯಲ್ಲಿ ಇದ್ದಂತಹ ಪುಸ್ತಕ ಮತ್ತು ಬಟ್ಟೆಗಳು ಹಾಳಾಗಿ ಹೋಗಿದ್ದವು ಇದರಿಂದ ಸ್ವಲ್ಪ ಶಿಕ್ಷಣಕ್ಕೆ ವ್ಯಥೆಯಾಯಿತು ಇದಾದನಂತರ ಕೋವಿಡ್ ಕಾರಣದಿಂದ ಶಾಲೆಗಳು ಮುಚ್ಚಿಹೋದವು ನಮಗೆ ಸರಿಯಾದ ಶಿಕ್ಷಣ ಸಿಗಲಿಲ್ಲ ಇಂತಹ ಸಮಯದಲ್ಲಿ ಆನ್ಲೈನ್ ವ್ಯವಸ್ಥೆ ಇದ್ದರೂ ಸಹಿತ ಆನ್ಲೈನ್ ಶಿಕ್ಷಣ ನಮಗೆ ಅಷ್ಟು ಸರಿಯಾಗಿ ತಿಳಿಯಲಿಲ್ಲ ಈಗ ನಾನು ಏಳನೇ ತರಗತಿ ಯಲ್ಲಿ ಇದ್ದೇನೆ. ಕಳೆದ ಎರಡು ವರ್ಷ ನಾವು ಓದಿದ್ದೇವೆ ಅನ್ನುವುದನ್ನು ಮರೆತಿದ್ದೇವೆ.

## ಕೇಸ್ಟಡಿ 58

### ಕೋವಿಡ್ ಕಾರಣದಿಂದ ಶಾಲಾ ಶಿಕ್ಷಣ ಸರಿಯಾಗಿ ಸಿಕ್ಕಿಲ್ಲ. ಆದ ಕಾರಣ ಈಗ ಶಾಲೆ ಶುರುವಾದರೂ ಪಾಠ ಅರ್ಥವಾಗುತ್ತಿಲ್ಲ

ನಮಸ್ಕಾರ ನನ್ನ ಹೆಸರು ಪ್ರವಿತ್ರ ಸಂತೋಷ್ ಗುಡಿಹಿಂದ್ ನಾನು ಗುಲಗಾಲ ಜಂಬಗಿ ಗ್ರಾಮದ ವಿಧ್ಯಾರ್ಥಿಯಾಗಿರುತ್ತೇನೆ. ನಾನು ಈಗ 5ನೇ ತರಗತಿಯಲ್ಲಿ ಓದುತ್ತಿದ್ದೇನೆ. ತಂದೆ, ತಾಯಿ ಕೂಲಿ ಕೆಲಸ ಮಾಡುತ್ತಾರೆ. ನನಗೆ ಇನ್ನೊಬ್ಬಳು ಸಣ್ಣ ತಂಗಿ ಇದ್ದಾಳೆ. ಮನೆ ಕಲಿಕೆಯಲ್ಲಿ ನಮಗೆ ತುಂಬಾ ಹಿನ್ನಡೆಯಾಗಿದೆ ಕಾರಣವೇನೆಂದರೆ, ನಾನು ತುಂಬಾ ಬಡ ಕುಟುಂಬದ ಮಗಳು ಇಂತಹ ಸಂದರ್ಭದಲ್ಲಿ ಬಡತನ ಇದ್ದರೂ ಸಹಿತ ನನ್ನ ತಂದೆ ಮತ್ತು ತಾಯಿ ನನಗೆ ಶಾಲೆಗೆ ಕಳಿಸುತ್ತಿದ್ದರು. ಕೋವಿಡ್ ಬಂದ ಕಾರಣದಿಂದ ಆನ್ಲೈನ್ ಶಿಕ್ಷಣ ಮಾಡಿದರು. ಈ ಸಂದರ್ಭದಲ್ಲಿ ನಮ್ಮ ಮನೆಯಲ್ಲಿ ಮೊಬೈಲ್ ಇರಲಿಲ್ಲ. ನಾಲ್ಕೈದು ತಿಂಗಳ ನಂತರ ಸಾಲ ಮಾಡಿ ಮೊಬೈಲ್ ತೆಗೆದುಕೊಂಡ ನಂತರ ಆನ್ಲೈನ್ ಶಿಕ್ಷಣ ನಮಗೆ ಸರಿಯಾಗಿ ಅರ್ಥವಾಗಲಿಲ್ಲ. ಈಗ ನಾನು 5ನೇ ತರಗತಿಯಲ್ಲಿ ಓದುತ್ತಿದ್ದೇನೆ. ಕಳೆದ ಎರಡು ವರ್ಷಗಳಿಂದ ಸಿಗಬೇಕಾದಂತಹ ಶಿಕ್ಷಣ ನಮಗೆ ದೊರಕಿಲ್ಲ.

## ಕೇಸ್ಟಡಿ 59

### ಕೋವಿಡ್ ಕಾರಣದಿಂದ ಶಾಲಾ ಶಿಕ್ಷಣ ಸರಿಯಾಗಿ ಸಿಕ್ಕಿಲ್ಲ. ಆದ ಕಾರಣ ಈಗ ಶಾಲೆ ಶುರುವಾದರೂ ಪಾಠ ಅರ್ಥವಾಗುತ್ತಿಲ್ಲ

ನಮಸ್ಕಾರ ನನ್ನ ಹೆಸರು ರಾಧಿಕಾ. ರೇಣುಕಾ ಕಳ್ಳಿಮನಿ ನಾನು ರೋಗಿ ಗ್ರಾಮದ ವಿಧ್ಯಾರ್ಥಿಯಾಗಿರುತ್ತೇನೆ. ನನ್ನ ತಾಯಿ ದೇವದಾಸಿ ಯಾಗಿರುತ್ತಾರೆ ನಾನು ಈಗ ಆರನೇ ಕ್ಲಾಸಿನಲ್ಲಿ ಓದುತ್ತಿದ್ದೇನೆ. ನಾನು 6ನೇ ತರಗತಿಯಲ್ಲಿ ಓದುತ್ತಿದ್ದರು ಸಹಿತ ನಾಲ್ಕನೇ ತರಗತಿಯಲ್ಲಿ ಇದ್ದ ಹಾಗೆ ಇದೆ. ಶಿಕ್ಷಣದಿಂದ ನಾವು ತುಂಬಾ ವಂಚಿತರಾಗಿದ್ದೇವೆ. ಕಳೆದ ಎರಡೂವರೆ ವರ್ಷಗಳಿಂದ ನಮಗೆ ಸರಿಯಾದ ಶಿಕ್ಷಣ ಸಿಕ್ಕಿಲ್ಲ. ಮೊದಲು ನಮ್ಮ ಗ್ರಾಮ ಪ್ರವಾಹಕ್ಕೆ ತುತ್ತಾಗಿ ತ್ತು ನಮ್ಮ ಶಾಲೆ ಕೂಡ ಮುಳುಗಿಹೋಗಿತ್ತು. ಇಂತಹ ಸಂದರ್ಭದಲ್ಲಿ ಕೋವಿಡ್ ಬಂದು ಲಾಕ್ಡೌನ್ ಆಯಿತು. ಈ ಎಲ್ಲಾ ವಿಚಾರದಲ್ಲಿ ನಮಗೆ ಯಾವುದೇ ರೀತಿ ಉತ್ತಮವಾದಂತಹ ಶಿಕ್ಷಣ ಸಿಗಲಿಲ್ಲ. ಮತ್ತೆ ನಮಗೆ ಯಾವುದೇ ರೀತಿ ಆನ್ಲೈನ್ ಕ್ಲಾಸಿನಿಂದ ಉಪಯೋಗ ಆಗಿಲ್ಲ. ಏಕೆಂದರೆ ಆನ್ಲೈನ್ ಶಿಕ್ಷಣದಲ್ಲಿ ಯಾವುದೇ ರೀತಿ ನಮಗೆ ಓದಲು-ಬರೆಯಲು ಉತ್ತರ ಹೇಳಲು ಅವಕಾಶ ಇರಲಿಲ್ಲ. ನಾವು ಒಂದೇ ಮೊಬೈಲಿನಲ್ಲಿ ಆರು ಜನ ನಮ್ಮ ಕೇರಿಯಲ್ಲಿ ಕ್ಲಾಸ್ ಅಟೆಂಡ್ ಮಾಡುತ್ತಿದ್ದವು. ಒಂದೊಂದು ಸಮಯದಲ್ಲಿ ಅದು ಮೊಬೈಲ್ ಇರುತ್ತಿರಲಿಲ್ಲ ಈ ಎಲ್ಲಾ ಕಾರಣಗಳಿಂದ ನಾವು ವಿದ್ಯಾಭ್ಯಾಸದಲ್ಲಿ ಹಿನ್ನಡೆ ಅನುಭವಿಸುತ್ತಿದ್ದೇವೆ.

## ಕೇಸ್ಟಡಿ 60

### ತುರ್ತು ಪರಿಸ್ಥಿತಿ ನಮ್ಮ ವಿದ್ಯಾಭ್ಯಾಸವನ್ನು ಮಾತ್ರವಲ್ಲ ನಮ್ಮ ಶಾಲೆಯಲ್ಲಿದ್ದ ಮೂಲಸೌಕರ್ಯಗಳನ್ನು ನುಂಗಿತು

ನನ್ನ ಹೆಸರು ಸವಿತಾ ಪ್ರೇಮ ಸಣ್ಣಪ್ಪಗೋಳ ನಾನು ಮಳಲಿ ಗ್ರಾಮದ ವಿದ್ಯಾರ್ಥಿನಿಯಾಗಿರುತ್ತೇನೆ. ಐದನೇ ತರಗತಿಯಲ್ಲಿ ಓದುತ್ತಿದ್ದೇನೆ. ನನ್ನ ತಾಯಿ ದೇವದಾಸಿ ತಾಯಂದಿರಿಗಾಗಿ ಇರುತ್ತಾರೆ. ನನಗೆ ಇಬ್ಬರು ಅಣ್ಣಂದಿರು. ಇಬ್ಬರೂ ಕೂಡ ಕೂಲಿ ಕೆಲಸ ಮಾಡುತ್ತಾರೆ. ಅವರೆಲ್ಲರೂ ಕೂಲಿ ಕೆಲಸ ಮಾಡಿ ನನಗೆ ಓದಿಸಲು ಸಹಾಯ ಮಾಡುತ್ತಿದ್ದಾರೆ. ಆದರೆ ಕಳೆದ ಎರಡು ವರ್ಷಗಳಿಂದ ಬೇರೆಬೇರೆ ಕಾರಣಗಳಿಂದ ನಮಗೆ ಸಿಗಬೇಕಾದಂತಹ ವಿದ್ಯಾಭ್ಯಾಸ ಸಿಕ್ಕಿಲ್ಲ. ವಿದ್ಯಾಭ್ಯಾಸ ಒಂದುಕಡೆಯಾದರೆ ಇನ್ನೊಂದು ಕಡೆ ಮಕ್ಕಳಿಗೆ ಸಿಗಬೇಕಾದಂತಹ ಹಕ್ಕುಗಳು ಉಲ್ಲಂಘನೆಯಾಗುತ್ತಿದೆ. ಪ್ರವಾಹ ಬಂದು ಹೋದ ತಕ್ಷಣ ನಮ್ಮ ಶಾಲೆಯಲ್ಲಿದ್ದ ಶೌಚಾಲಯಗಳು ಒಡೆದು ಹೋದವು. ಪುಸ್ತಕ ಪೀಠೋಪಕರಣಗಳು ಹಾಳಾದವು. ಶಾಲೆಯ ದುರಸ್ತಿ ಸಲುವಾಗಿ ಸರಿಯಾಗಿ ಶಿಕ್ಷಣ ಸಿಗಲಿಲ್ಲ. ಅದೆಲ್ಲ ಮುಗಿದ ನಂತರ ಕೋವಿಡ್ ಕಾರಣಗಳಿಂದ ಶಾಲೆಗಳನ್ನು ಬಂದ್ ಮಾಡಿದರು. ಇದರ ಮಧ್ಯೆ ಆನ್ಲೈನ್ ಕ್ಲಾಸ್ ನಡೆಸಿದರು. ಸಹಿತ ಯಾವುದೇ ರೀತಿ ನಮಗೆ ಅದರ ಪ್ರಯೋಜನ ಆಗಲಿಲ್ಲ. ಈಗ ನಾವು ಕಲಿಯಬೇಕಿದ್ದ ವ್ಯಂಜನಗಳು, ಸ್ವರಗಳು, ಮೂಲಕ್ಷರಗಳು, ಮಗ್ಗಿಗಳನ್ನು ಹೊರತುಪಡಿಸಿ ಬೇರೆ ವಿಷಯಗಳನ್ನು ನಮಗೆ ಹೇಳುತ್ತಿದ್ದಾರೆ. ಈ ಎಲ್ಲದರ ಗೊಂದಲದಲ್ಲಿ ನಾವಿದ್ದೇವೆ.

## ಕೇಸ್ಟಡಿ 61

### ಆದರೆ ಕಳೆದ ಎರಡು ವರ್ಷಗಳಿಂದ ಪ್ರವಾಹ ಮತ್ತು ಕೋವಿಡ್ ಬಂದ ಕಾರಣ ನಾವು ಶಾಲೆಗೆ ಹೋಗಲು ಆಗಲಿಲ್ಲ

ನಮಸ್ಕಾರ, ನನ್ನ ಹೆಸರು ಸಂತೋಷ ಅಶೋಕ್ ಮ್ಯಾಗೇರಿ. ನಾನು ಸೋರಗಾವ ಗ್ರಾಮದ ವಿಧ್ಯಾರ್ಥಿಯಾಗಿರುತ್ತೇನೆ. ನಾನು ಈ ವರ್ಷ ಏಳನೇ ತರಗತಿಯಲ್ಲಿ ಓದಬೇಕಾಗಿತ್ತು. ಆದರೆ ನನಗೆ ವಿದ್ಯಾಭ್ಯಾಸದ ಕೊರತೆ ಇದ್ದ ಸಲುವಾಗಿ ನಾನು ಈ ವರ್ಷ ಏಳನೇ ತರಗತಿ ಹೋಗುತ್ತಿಲ್ಲ. ಯಾಕೆಂದರೆ ಕಳೆದ ಎರಡು ವರ್ಷಗಳಿಂದ ಯಾವುದೇ ರೀತಿ ಶಿಕ್ಷಣ ನನಗೆ ಸಿಕ್ಕಿಲ್ಲ. ಒಂದು ವೇಳೆ ಆನ್ಲೈನ್ ಶಿಕ್ಷಣ ಸಿಕ್ಕರು ಸಹಿತ, ನನಗೆ ಯಾವುದೇ ರೀತಿ ಪ್ರಯೋಜನ ಆಗಿಲ್ಲ. ಒಂದು ಮನೆಯಲ್ಲಿ ಕಿತ್ತು ತಿನ್ನುವ ಬಡತನ, ನಮ್ಮ ತಂದೆ ಸಾಕಷ್ಟು ಸಾಲ ಮಾಡಿದ್ದಾರೆ. ಇದರ ಮಧ್ಯದಲ್ಲಿ ನಾವು ಶಾಲೆಗೆ ಹೋಗುತ್ತಿದ್ದೆವು. ಆದರೆ ಕಳೆದ ಎರಡು ವರ್ಷಗಳಿಂದ ಪ್ರವಾಹ ಮತ್ತು ಕೋವಿಡ್ ಬಂದ ಕಾರಣ ನಾವು ಶಾಲೆಗೆ ಹೋಗಲು ಆಗಲಿಲ್ಲ. ತರಗತಿ ಪ್ರಾರಂಭವಾದ ನಂತರ ನಾವು ತರಗತಿಗೆ ಹೋದಾಗ ನಮಗೆ ಅಲ್ಲಿ ಏನು ಬರಲಿಲ್ಲ. ಈ ಒಂದು ಕಾರಣಗಳಿಂದ ನಾನು ಈಗ ಶಾಲೆಗೆ ಹೋಗುತ್ತಿಲ್ಲ ನಮ್ಮ ತಾಯಿಯ ಜೊತೆಗೆ ಕೂಲಿ ಕೆಲಸಕ್ಕೆ ಹೋಗುತ್ತಿದ್ದೇನೆ. ನಮಗೆ ಸರಿಯಾದ ಸಮಯದಲ್ಲಿ ಶಿಕ್ಷಣ ಸಿಕ್ಕಿದ್ದರೆ ನಾವು ಕೂಲಿಕೆಲಸಕ್ಕೆ ಹೋಗುತ್ತಿರಲಿಲ್ಲ.

## ಕೇಸ್ಟಡಿ 62

### ಶಾಲೆಬಿಟ್ಟು ಶುಂಠಿ ಮಾಲೀಕರ ಜಮೀನಿನಲ್ಲಿ ಅವಳ ವಯಸ್ಸಿಗೂ ಮೀರಿದ ಕೂಲಿ ಕೆಲಸ ಮಾಡುತ್ತಿದ್ದಾಳೆ.

ನನ್ನ ಹೆಸರು ಗೌರಮ್ಮ 36 ವರ್ಷ. ನಾನು ಮೈಸೂ–ರಿನ ಹುಣಸೂರು ತಾಲ್ಲೂಕಿನ ಕೊಳವಿಗೆ ಹಾಡಿಯಲ್ಲಿ ವಾಸವಾಗಿದ್ದೇನೆ. ನನ್ನ ಗಂಡನ ಹೆಸರು ಲಕ್ಷ್ಮಣ 48 ವರ್ಷ. ನನಗೆ ಒಬ್ಬಳು ಮಗಳಿದ್ದಾಳೆ. ಅವರ ಹೆಸರು ವೀರಮಣಿ 15 ವರ್ಷ. ಕೋವಿಡ್ ಮೊದಲು ಕೊಳವಿಗೆ ಗ್ರಾಮದ ಸುತ್ತಮುತ್ತಲಿನ ಭೂಮಾಲೀಕರ ಮನೆಗಳಲ್ಲಿ, ಶುಂಠಿ ಕೃಷಿ ಭೂಮಿಯಲ್ಲಿ ಹಾಗೂ ಕಾಫಿ ತೋಟದ ಮಾಲೀಕರ ಮನೆಗಳಲ್ಲಿ ಕೆಲಸಮಾಡಿಕೊಂಡು ಜೀವನಸಾಗಿಸುತ್ತಿದ್ದೇನೆ. ನನ್ನ ಗಂಡ ಕು–ರಿಗಳನ್ನು ಮೇಯಿಸಿಕೊಂಡು ಇದ್ದಾರೆ. ಕೋವಿಡ್ ಲಾಕ್ಡೌನ್ ಸಂದರ್ಭದಲ್ಲಿ ನಮಗೆ ಭೂ ಮಾಲೀಕರ ತೋಟಗಳಲ್ಲಿಯಾಗಲಿ, ಕೃಷಿ ಭೂಮಿಯಲ್ಲಾಗಲಿ ಅಥವಾ ಕಾಫಿತೋಟದಲ್ಲಾಗಲಿ ಕೆಲಸ ಮಾಡಲು ಸಾಧ್ಯವಾಗಲಿಲ್ಲ. ಈ ಹಿಂದೆ ನಾವು ಕೂಲಿ ಕೆಲಸಕ್ಕೆ ಹೋದಾಗ ರೂ.200/– ಪಡೆಯುತ್ತಿದ್ದೆ. ಕೋವಿಡ್ ಬಂದ ಕಾರಣ ನಮ್ಮ ಕೂಲಿ ಕೆಲಸಗಳ ಮೇಲೆ ಪರಿಣಾಮ ಬೀರಿ ಆಹಾರಕ್ಕೂ ಕೂಡ ಸಮಸ್ಯೆಯಾಯೊತು. ನನ್ನ ಮಗಳು ವೀರಮಣಿಯೂ ದೊಡ್ಡಹೆಜ್ಜೂರು ಗ್ರಾಮದ ಶಾಲೆಯಲ್ಲಿ ಕಲಿಯುತ್ತಿದ್ದು, ಕೋವಿಡ್ ಸಮಯದಲ್ಲಿ ಶಾಲೆ ಮುಚ್ಚಿತು. ಆ ಸಂದರ್ಭದಲ್ಲಿ ಶಿಕ್ಷಣ ಇಲಾಖೆಯು ಆನ್ಲೈನ್ ತರಗತಿಗಳನ್ನು ಪ್ರಾರಂಭಿಸಿದರು. ನನ್ನ ಮಗಳು ಆನ್ಲೈನ್ ಶಿಕ್ಷಣ ಪಡೆಯಲು ನಾನು ಮೈಕ್ರೋ ಭಾರತ್ ಫೈನಾನ್ಸನಿಂದ ರೂ.30000/– ಹಣವನ್ನು ಸಾಲವಾಗಿ ಪಡೆದು, ತಿಂಗಳಿಗೆ ರೂ.1750/– ಕಂತು ರೂಪದಲ್ಲಿ ಕಟ್ಟಲು ತೆಗೆದುಕೊಂಡಿದ್ದೇನೆ. ಸರಿಯಾದ ಕೂಲಿಕೆಲಸ ಸಿಗದ ಕಾರಣ ಈ ಸಾಲದ ಕಂತು ತೀ–ರಿಸಲು ಸಾಧ್ಯವಾಗುತ್ತಿಲ್ಲ. ಫೈನಾನ್ಸ ಪ್ರತಿನಿಧಿಗಳು ಪ್ರತಿದಿನ ಮನೆ ಬಾಗಿಲಿಗೆ ಬಂದು ಹಣಕಟ್ಟಬೇಕು, ಇಲ್ಲದಿದ್ದಲ್ಲಿ ನಿಮ್ಮ ರೇಷನ್ ಕಾರ್ಡು, ಆಧಾರ್ ಕಾರ್ಡು ಬ್ಲಾಕ್ ಮಾಡುತ್ತೇವೆಂದು ಭಯ ಹುಟ್ಟಿಸಿದರು. ಇದರ ಪರಿಣಾಮವಾಗಿ ನನ್ನ ಮಗಳಾದ ವೀರಮಣಿ ಶಾಲೆಬಿಟ್ಟು ಶುಂಠಿ ಮಾಲೀಕರ ಜಮೀನಿನಲ್ಲಿ ಅವಳ ವಯಸ್ಸಿಗೂ ಮೀರಿದ ಕೂಲಿ ಕೆಲಸ ಮಾಡುತ್ತಿದ್ದಾಳೆ. ಅವಳು ದುಡಿದ ಹಣವನ್ನು ಆನ್ಲೈನ್ ಶಿಕ್ಷಣ–ಕ್ಕೆ ಬೇಕಾದ ಸೌಕರ್ಯ ಪಡೆಯಲು ತೆಗೆದುಕೊಂಡ ಸಾಲವನ್ನು ಕಟ್ಟಲು ಪ್ರಾರಂಭಿಸಿದಳು. ನಂತರ ಅವಳಿಗೆ ಶಾಲೆಗೆ ಹೋಗಲು ಆಸಕ್ತಿಯಿದ್ದರೂ ಕೂಡ, ಕೊಳವಿಗೆ ಹಾಡಿಯಿಂದ ಹುಣಸೂರು ಪಟ್ಟಣಕ್ಕೆ ನಮಗೆ ಶಾಲೆಗೆ ದಾಖಲಿಸಲು ಸಮಸ್ಯೆಯಾಗಿ, ಅವಳು ಶಾಲೆಯಿಂದ ಹೊರಗಿರುವಂತಾಗಿದೆ.

## ಕೇಸ್ಟಡಿ 63

### ಮನೆಯ ಆರ್ಥಿಕ ಪರಿಸ್ಥಿತಿ ಬುಡಕಟ್ಟು ಸಮುದಾಯದ ಮಕ್ಕಳನ್ನು ಬಾಲದುಡಿಮೆಗೆ ದೂಡುತ್ತಿದೆ.

ನನ್ನ ಹೆಸರು ಮಂಗಳ. ನಾನು ಮೈಸೂರಿನ ಹುಣಸೂರು ತಾಲ್ಲೂಕಿನ ಭೀಮನಹಳ್ಳಿ ಹಾಡಿಯಲ್ಲಿ ವಾಸವಾಗಿದ್ದೇನೆ. ನನ್ನ ಗಂಡನ ಹೆಸರು ನಾಗರಾಜು 38 ವರ್ಷ. ನನಗೆ ಇಬ್ಬರು ಮಕ್ಕಳಿದ್ದಾರೆ. ಅವರ ಹೆಸರು ಬಿಂದು 15 ವರ್ಷ. ಎರಡನೆಯ ಮಗು ತೇಜು 13ವರ್ಷ. ನಾವು ಅರಣ್ಯದಂಚಿನಲ್ಲಿ ವಾಸವಾಗಿದ್ದು, ನಾವು ಹಾಡಿಯಿಂದ ಹೊರಬಂದ ಮೇಲೆ ಸರಕಾರವು ಯಾವುದೇ ಪುನರ್ವಸತಿಯನ್ನು ಕಲ್ಪಿಸದೆ ನಮಗೆ ಅನ್ಯಾಯ ಎಸಗಿತು.

ಈ ಹಿಂದೆ ನವು ಭೀಮನಹಳ್ಳಿ ಗ್ರಾಮದ ಭೂಮಾಲೀಕರ ಮನೆಗಳಲ್ಲಿ ಹೊಗೆ ಸೊಪ್ಪು ಕಟಾವು ನಡೆಸುವುದು, ಹತ್ತಿ ಬಿಡಿಸುವುದು, ಹುರುಳಿ ಕೊಯ್ಯುವುದು, ಕೊಡಗಿನ ಕಾಫಿ ತೋಟದಲ್ಲಿ ಕೆಲಸಮಾಡಿಕೊಂಡು ಜೀವನಸಾಗಿಸುತ್ತಿದ್ದೇವೆ. ನನ್ನ ಮಗಳು ಬಿಂದು ಆಶ್ರಮ ಶಾಲೆಯಲ್ಲಿ 7ನೇ ತರಗತಿ ವ್ಯಾಸಾಂಗ ಮಾಡುತ್ತಿದ್ದಳು. ನನ್ನ ಮಗ ತೇಜು 5ನೇ ತರಗತಿಯಲ್ಲಿ ಕಲಿಯುತ್ತಿದ್ದನು. ಕೋವಿಡ್ ಪರಿಣಾಮವಾಗಿ ನಮ್ಮ ಕೂಲಿ ಹಣ ಕೂಡ ಕಡಿತಗೊಂಡು, ಕೇವಲರೂ.150/– ಮಾತ್ರ ಮಾಲೀಕರು ಕೊಡುತ್ತಿದ್ದರು. ಇದೇ ಸಂದರ್ಭದಲ್ಲಿ ಶಾಲೆಗಳೂ ಮುಚ್ಚಿದವು. 7ನೇ ತರಗತಿ ಮತ್ತು 5ನೇ ತರಗತಿಯ ಮಕ್ಕಳಿಗೆ ಶಿಕ್ಷಣ ಇಲಾಖೆಯು ಆನ್ಲೈನ್ ಶಿಕ್ಷಣ ಪ್ರಾರಂಭಿಸಿತು. ಮೊಬೈಲ್ ಮೂಲಕ ನಡೆಯುವ ಶಿಕ್ಷಣವನ್ನು ನನ್ನ ಮಕ್ಕಳು ಪಡೆಯಲು ಸಾಧ್ಯವಾಗಲಿಲ್ಲ. 8ನೇ ತರಗತಿಗಾಗಿ ಗುರುಪುರ ಶಾಲೆಗೆ ದಾಖಲಾಗುತ್ತೇನೆ ಎಂದು ಹೇಳುತ್ತಿದ್ದ ಬಿಂದು ಸರಿಯಾದ ಶಿಕ್ಷಣ ಸಿಗದೆ ಇಂದು ಶಾಲೆಯಿಂದ ಹೊರಗಡೆಯಿದ್ದಾಳೆ. ನನ್ನ ಮಗ 7ನೇ ತರಗತಿಯ ಶಿಕ್ಷಣವನ್ನು ಸರಿಯಾದ ರೀತಿಯಲ್ಲಿ ಸಾಧ್ಯವಾಗದೆ, ಹಿಂಜರಿಕೆಯಿಂದ ಶಾಲೆ ಬಿಟ್ಟನು. ನನ್ನ ಗಂಡ ಅನಾರೋಗ್ಯದಿಂದ ಇದ್ದ ಕಾರಣ ಜೀವನ ನಿರ್ವಹಿಸಲು ನಾವು ಮತ್ತೆ ಪುನಃ ಕೊಡಗಿನ ಕಾಫಿ ತೋಟದ ಲೈನ್ ಮನೆಗೆ ತೆರಳುವಂತಾಯಿತು. ಮನೆಯ ಖರ್ಚು ಹಾಗು ತಂದೆಯ ಆರೋಗ್ಯ ಚಿಕಿತ್ಸೆಗೆ ಹಣದ ಅವಶ್ಯಕತೆ ಇದ್ದುದರಿಂದ ನನ್ನ ಇಬ್ಬರೂ ಮಕ್ಕಳು ದುಡಿಯಲು ಆರಂಭಿಸಿದ್ದಾರೆ.

# Annexure 2:

**Participants List of Public Hearing held in SCM House Bengaluru, 22 March 2022**

| SL No | Name of the Participants | Name of the Place |
|---|---|---|
| 1 | Jumuna | Austian Town |
| 2 | Prabhu | AK Colony |
| 3 | Sivakumar | AK Colony |
| 4 | Aakesh | Narasimhayya Colony |
| 5 | Nivetha | MCTC Colony |
| 6 | Manjula | Narasimhayya Colony |
| 7 | Kumari | Narasimhayya Colony |
| 8 | Punithamary | Narasimhayya Colony |
| 9 | Saranya A | Padaranayapura |
| 10 | Samson F | Padaranayapura |
| 11 | Imran Pasha | Padaranayapura |
| 12 | Nagma | Padaranayapura |
| 13 | Syed Musayeed | Padaranayapura |
| 14 | Fathimabai | Padaranayapura |
| 15 | Asiya Kouser | Padaranayapura |
| 16 | Feredabanu | Padaranayapura |
| 17 | Veeramani | Kovigeadi |
| 18 | Idramma | MCTC Colony |
| 19 | Cechana | MCTC Colony |
| 20 | Deviall | MCTC Colony |
| 21 | Shiziya Begum | Padaranayapura |
| 22 | Sillnka Banu | Padaranayapura |
| 23 | Rahma Unnisa | Padaranayapura |
| 24 | Husrain | Padaranayapura |
| 25 | Shuihasha | Padaranayapura |
| 26 | Jansi | Cheluvadipalya |
| 27 | Anasuya | SR Nagar |
| 28 | Bharath | Benson town |
| 29 | Malika banu | Padaranayapura |
| 30 | Rabiya Banu | Padaranayapura |
| 31 | Shubanu Taj | Padaranayapura |
| 32 | Sabihiya Sultan | Padaranayapura |
| 33 | Vilas Kamble | Nadi-Ingalgav |
| 34 | Bhavani | Cheluvadipalya |
| 35 | Monisha | Cheluvadipalya |
| 36 | Punam | Cheluvadipalya |
| 37 | Padma V | Giripuram |
| 38 | Joyvincy | Giripuram |
| 39 | Bhagyashree | Saptasagar |
| 40 | Appasab | Saptasagar |
| 41 | Padmasree | Saptasagar |
| 42 | Sapna | Thirtha |
| 43 | Chandrika | Thirtha |
| 44 | Mahesh Singe | Ingali |
| 45 | Sanjana Kamble | Ingali |

| | | |
|---|---|---|
| 46 | Mannaya Kamble | Ingali |
| 47 | Aswini Kamble | Ingali |
| 48 | Mahadeva Kamble | Ingali |
| 49 | M. Deekshith | Aj Colony |
| 50 | A. Sudha | Aj Colony |
| 51 | Indrakumari | Aj Colony |
| 52 | Kavya | Aj Colony |
| 53 | Heemavatthi | Aj Colony |
| 54 | A. Diganath | Aj Colony |
| 55 | Pavankumar | Aj Colony |
| 56 | Sunitha DM | Aj Colony |
| 57 | Parveen Taj | Aj Colony |
| 58 | Gurumurthy | infantry Road |
| 59 | Vinay KS | infantry Road |
| 60 | Nandini | HRBR Layout |
| 61 | Nikil | infantry Road |
| 62 | Sukanya | Chennapatna |
| 63 | Ningaraju | Vijayanagar |
| 64 | Santosh Kamble | Belegavi |
| 65 | Banu. S | Jaibheemnagar |
| 66 | S. Ambarasi | Bhakshi Garden |
| 67 | Lakshmi Devi | Bhakshi Garden |
| 68 | Enmalli | Bhakshi Garden |
| 69 | Madavi | Bhakshi Garden |
| 70 | Haccbi | OPM |
| 71 | Nageena | OPM |
| 72 | RVKsaibanu | OPM |
| 73 | Atif | OPM |
| 74 | Zuhara | OPM |
| 75 | Kausalya | Jally Mohalla |
| 76 | Vijaya . V | Jally Mohalla |
| 77 | Rajeshwari | Jally Mohalla |
| 78 | Gayathri | Jally Mohalla |
| 79 | Rithik M | Jally Mohalla |
| 80 | Akshaya | Jally Mohalla |
| 81 | Hemalatha | Jally Mohalla |
| 82 | Tharun | Jally Mohalla |
| 83 | Chandrika M | Bakshi Garden |
| 84 | ASMA | Babalane |
| 85 | Faizan | Babalane |
| 86 | Sujatha V0 | Babalane |

| | | |
|---|---|---|
| 87 | Nanda | Babalane |
| 88 | Sangettha | Bakshi Garden |
| 89 | Asthavamma | Anjenappa Garden |
| 90 | Jeeva | Anandapuram |
| 91 | Shivarajini | Anandapuram |
| 92 | Sathya | Anandapuram |
| 93 | Shalini | Anjenappa Garden |
| 94 | Nitinkumar | Anjenappa Garden |
| 95 | Prema Almas | B. Garden |
| 96 | Naseena | Padaranayapura |
| 97 | Batula | Padaranayapura |
| 98 | Nuzhath | Padaranayapura |
| 99 | Kalsum | Padaranayapura |
| 100 | Kavitha | JJR Nagar |
| 101 | Parveen Taj | JJR Nagar |
| 102 | Sunitha | JJR Nagar |
| 103 | sumiya banu | JJR Nagar |
| 104 | Reehana | JJR Nagar |
| 105 | Mohseena | JJR Nagar |
| 106 | Majira | JJR Nagar |
| 107 | Mary Lovtheena | JJR Nagar |
| 108 | Sharth | JJR Nagar |
| 109 | Raksheela Shree | JJR Nagar |
| 110 | Angale | JJR Nagar |
| 111 | Souniya | JJR Nagar |
| 112 | Harsha | JJR Nagar |
| 113 | Darshan | JJR Nagar |
| 114 | Tasmiya Banu | JJR Nagar |
| 115 | Roshan | JJR Nagar |
| 116 | Khaleed | JJR Nagar |
| 117 | Jeenyfor | JJR Nagar |
| 118 | Mytown | JJR Nagar |
| 119 | Aishwarya | Anandapuram |
| 120 | Karappa Gana | Anandapuram |
| 121 | Manjula | Bhakshi Garden |
| 122 | Anniyamma | Flower Garden |
| 123 | Shalini | Flower Garden |
| 124 | Asha | Flower Garden |
| 125 | Vidya S | Flower Garden |
| 126 | Varalakshmi | Anandapuram |
| 127 | Sumithra AP | Cheluvadipalya |
| 128 | Kousalya | Anandapuram |

| | | |
|---|---|---|
| 129 | Aruna | Anandapuram |
| 130 | Shalini | Anandapuram |
| 131 | Usha | Anandapuram |
| 132 | Megala | Anandapuram |
| 133 | Parameshwari | Anandapuram |
| 134 | Asma | Anandapuram |
| 135 | Farzana | Anandapuram |
| 136 | Shivananada Mygeri | Mudhol |
| 137 | Sumithra Kalimane | Mudhol |
| 138 | Roopa Kalimane | Mudhol |
| 139 | Sajeena Mythri | Mudhol |
| 140 | Manjula Mythri | Mudhol |
| 141 | Nithisla | Flower Garden |
| 142 | Janani | Flower Garden |
| 143 | Tiju | Siddharathnagar |
| 144 | Suprith | Siddharathnagar |
| 145 | Dr. Anjum | KMDC |
| 146 | Abdul | Azadnagar |
| 147 | Anusha | TR Nagar |
| 148 | Asha | Siddharathnagar |
| 149 | Shamdoniyal | Siddharathnagar |
| 150 | E. Bhmaneshwari | Anandapuram |
| 151 | Kishore | Anandapuram |

| | | |
|---|---|---|
| 152 | Mani | Anandapuram |
| 153 | Rajeshwari | Anandapuram |
| 154 | Gowri | Anandapuram |
| 155 | KH Kavitha | CWC |
| 156 | Nithitakhagan | CWC |
| 157 | Chandrika | Austian Town |
| 158 | Jamuna | Austian Town |
| 159 | Malar | Richmond Town |
| 160 | Prakash | SC ST Commission |
| 161 | Raghvendra | Richmond Town |
| 162 | Namdev | Belegavi |
| 163 | Shasidhar | Bangalore |
| 164 | Sruthy | Bangalore |
| 165 | Dr. G P Devaraju | JDSW bangalore |
| 166 | Md. Shanawazi | Babulane |
| 167 | Charles Fraklin | Bangalore |
| 168 | Lalitha | Bangalore |
| 169 | Kavitha Rathna | Banglore |
| 170 | Neelaiah | Bangalore |
| 171 | Sayare A Shakh | Vijayapura |
| 172 | Shivamma M | Kollegal |
| 173 | Reshma | Bangalore |
| 174 | Narasimhaiah | Education Dept. Bangalore |

# Annexure 3:

## Media Coverage:

- https://www.thehindu.com/news/cities/bangalore/public-hearing-on-impact-of-covid-19-on-education-in-bengaluru-calls-for-a-special-programme-to-bridge-learning-gaps/article65249553.ece
- https://www.newsclick.in/Karnataka-Marginalised-Communities-Testify-Mental-Health-Issues-Usury-Uncertain-Future-Children
- https://www.prajavani.net/district/bengaluru-city/action-aid-association-covid-womens-organization-921921.html
- https://timesofindia.indiatimes.com/city/bengaluru/fee-backlog-keeps-many-children-out-of-schools/articleshow/90384778.cms
- https://www.thehindu.com/news/national/karnataka/report-on-impact-of-pandemic-on-children/article65336602.ece/amp/
- https://english.varthabharati.in/karnataka/actionaid-slum-mahila-sanghatene-release-study-report-on-the-impact-of-covid-on-childrens-education
- https://www.deccanherald.com/state/top-karnataka-stories/away-from-school-for-2-years-many-kids-losing-interest-in-learning-report-1102208.html

# Annexure 3:

## Photos:




*Candlelight March by Slum Mahila Sanghatane – Covid Crisis Impact on Children's Education*




*Candlelight March*



ಮೇಣದ ಬತ್ತಿ ಬೆಳಗಿ ಪ್ರತಿಭಟನೆ ನಡೆಸಿದ ಮಕ್ಕಳು –ಪ್ರಜಾವಾಣಿ ಚಿತ್ರ

## ‘ದುರ್ಬಲ ವರ್ಗದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್‌ನಿಂದಾಗಿ ಹಲವರ ಬದುಕು ಬೀದಿಗೆ ಬಿದ್ದಿದೆ. ದುರ್ಬಲ ಸಮುದಾಯದ ಮಕ್ಕಳ ವಿದ್ಯಾಭ್ಯಾಸದ ಮೇಲೂ ದುಷ್ಪರಿಣಾಮ ಉಂಟಾಗಿದೆ. ಅಂತಹ ಮಕ್ಕಳನ್ನು ಗುರುತಿಸಿ ಅವರಿಗೆ ಗುಣಮಟ್ಟದ ಶಿಕ್ಷಣ ಒದಗಿಸಬೇಕು’ ಎಂದು ಸ್ಲಂ ಮಹಿಳಾ ಸಂಘಟನೆ ಸದಸ್ಯರು ಒತ್ತಾಯಿಸಿದರು.

‘ದುರ್ಬಲ ವರ್ಗದ ಮಕ್ಕಳ ಶಿಕ್ಷಣದ ಸಮಸ್ಯೆ-ಕೋವಿಡ್’ ಘೋಷವಾಕ್ಯದಡಿ ಸಂಘಟನೆಯ ಸದಸ್ಯರು, ಪೋಷಕರು, ಮಕ್ಕಳು ಹಾಗೂ ಸಮುದಾಯದ ಮುಖಂಡರು ಪುರಭವನದ ಎದುರು ಮೇಣದ ಬತ್ತಿ ಬೆಳಗಿ ಶನಿವಾರ ಪ್ರತಿಭಟನೆ ನಡೆಸಿದರು.

‘ಕೋವಿಡ್‌ನಿಂದಾಗಿ ಬಹುಪಾಲು ಮಕ್ಕಳಿಗೆ ಶಾಲಾ ಶುಲ್ಕ ಭರಿಸುವುದಕ್ಕೆ ಆಗುತ್ತಿಲ್ಲ. ಹೀಗಾಗಿ ಮಕ್ಕಳು ಶಾಲೆಯಿಂದ ಹೊರಗುಳಿಯುತ್ತಿದ್ದು, ಬಾಲ ಕಾರ್ಮಿಕರಾಗಿ ಬದಲಾಗುತ್ತಿದ್ದಾರೆ. ಈ ವರ್ಗದ ಮಕ್ಕಳು ಆನ್‌ಲೈನ್ ಶಿಕ್ಷಣದಿಂದಲೂ ವಂಚಿತರಾಗುತ್ತಿದ್ದಾರೆ. ಓದಿನ ಕುರಿತ ಆಸಕ್ತಿ ಅವರಲ್ಲಿ ಕುಂಠಿತವಾಗುತ್ತಿದೆ’ ಎಂದು ಪ್ರತಿಭಟನಾಕಾರರು ದೂರಿದರು. ‘ಕೋವಿಡ್ ಸಮಯದಲ್ಲಿ ಈ ಮಕ್ಕಳು ಶಿಕ್ಷಣದಿಂದ ಸಂಪೂರ್ಣವಾಗಿ ವಂಚಿತರಾಗಿದ್ದಾರೆ. ಈ ಅವಧಿಯಲ್ಲಿ ಶಾಲೆಯಲ್ಲಿ ಕಲಿತಿದ್ದನ್ನೂ ಮರೆತಿದ್ದಾರೆ. ಈ ಮಕ್ಕಳ ಹಕ್ಕುಗಳನ್ನು ರಕ್ಷಿಸಲು ಸರ್ಕಾರ ಮುಂದಾಗಬೇಕು ಎಂದು ಆಗ್ರಹಿಸಿದರು.

*Press Report Candle light March*




*Public Hearing*




*Public Hearing*




*Public Hearing*

actionaid
ActionAid Association (India)
www.actionaidindia.org @actionaidindia actionaid_india
actionaidcomms @company/actionaidindia
Actionaid Association, 139, Richmond Road, Bengaluru 560 025.
+91-80925586682